
ಕುವೆಂಪು ಜನ್ಮಶತಮಾನೋತ್ಸವ - ವಿಶ್ವಮಾನವ ವರ್ಷ ೨೦೦೪

ಕುವೆಂಪು ಅವರ
ಮೂರು ನಾಟಕಗಳು



ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨



ಕುವೆಂಪು ಜನ್ಮ ಶತಮಾನೋತ್ಸವ - ವಿಶ್ವಮಾನವ ವರ್ಷ - ೨೦೦೪

ಕುವೆಂಪು ಅವರ ಮೂರು ನಾಟಕಗಳು

(ಜಲಗಾರ, ಶೂದ್ರತಪಸ್ವಿ, ಬೆರಳ್ ಗೆ ಕೊರಳ್)

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ೨ನೆಯ ಮಹಡಿ
ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

KUVEMPU AVARA MOORU NATAKAGALU
Published by V.N. Mallikarjunaswamy, Registrar
Karnataka Sahitya Academy
Kannada Bhavana, J.C. Road, Bangalore - 560 002

ಕುವೆಂಪು ಅವರ ಮೂರು ನಾಟಕಗಳು
ಪ್ರಕಾಶಕರು : ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ
ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ಮೊದಲನೆಯ ಮುದ್ರಣ : ೨೦೦೩ ಡಿಸೆಂಬರ್ ೨೯

ಸಹಕಾರ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಲೆ ರೂ. : ೩೦.೦೦ ರೂ.

ಮುದ್ರಣ
ಮಯೂರ್ ಪ್ರಿಂಟ್ ಆ್ಯಡ್ಸ್
ಬೆಂಗಳೂರು - ೨೦
ದೂರವಾಣಿ : ೩೩೪೨೭೭೨೪

ವಿಶ್ವಮಾನವ ಸಂದೇಶ

ಪ್ರತಿಯೊಂದು ಮಗುವೂ ಹುಟ್ಟುತ್ತಲೆ - ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು "ಅಲ್ಪಮಾನವ"ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ ; ಮನುಜಮತ. ಆ ಪಥ ಈ ಪಥ ಅಲ್ಲ ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯವಲ್ಲ ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ ; ಸಮನ್ವಯಗೊಳ್ಳವುದು. ಮಿತಮತದ ಆಂಶಿಕ ದೃಷ್ಟಿ ಅಲ್ಲ ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನದೃಷ್ಟಿ ಅಲ್ಲ, ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

ವಿಶ್ವಮಾನವರಾಗಲು ನಾವು ಸಾಧಿಸಲೇಬೇಕಾದ ಮೂಲಭೂತ ಸ್ವರೂಪದ ತತ್ತ್ವಪ್ರಣಾಳಿಕೆ

ಸಪ್ತ ಸೂತ್ರ

- ❖ "ಮನುಷ್ಯಜಾತಿ ತಾನೊಂದೆವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.
- ❖ ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಷಿಯಾ, ಸುನ್ನಿ ಕ್ಯಾಥೊಲಿಕ್, ಪ್ರಾಟಿಸ್ಟಂಟ್, ಸಿಖ್ ನಿರಂಕಾರಿ ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.
- ❖ ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿ ಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ ವಿನಾಶಗೊಳಿಸಬೇಕು.
- ❖ 'ಮತ' ತೊಲಗಿ 'ಆಧ್ಯಾತ್ಮ' ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು.
- ❖ ಮತ ಮನುಜಮತವಾಗಬೇಕು ; ಪಥ 'ವಿಶ್ವಪಥ'ವಾಗಬೇಕು. ಮನುಷ್ಯ ವಿಶ್ವಮಾನವನಾಗಬೇಕು.
- ❖ ಮತ ಗುಂಪುಕಟ್ಟುವ ವಿಷಯವಾಗಬಾರದು. ಯಾರೂ ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ 'ತನ್ನ' ಮತಕ್ಕೆ ಮಾತ್ರ ಸೇರಬೇಕು ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪುಕಟ್ಟಿ ಜಗಳ ಹಚ್ಚುವಂತಾಗಬಾರದು.
- ❖ ಯಾವ ಒಂದು ಗ್ರಂಥವೂ 'ಏಕೈಕ ಪರಮ ಪೂಜ್ಯ' ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ 'ದರ್ಶನ'ವನ್ನು ತಾನೇ ನಿರ್ಣಯಿಸಿ ಕಟ್ಟಿಕೊಳ್ಳಬೇಕು.

- ಕುವೆಂಪು

ಅಧ್ಯಕ್ಷರ ಮಾತು

೨೦೦೩ ಡಿಸೆಂಬರ್ ೨೯ರಂದು ಮಹಾಕವಿ ಕುವೆಂಪು ೧೦೦ನೆಯ ವರುಷದಲ್ಲಿ ಕಾಲಿಡುತ್ತಾರೆ. ಅಂತೆಯೇ ಮುಂದಿನದು ಅಂದರೆ ೨೦೦೪ ಕುವೆಂಪು ಜನ್ಮಶತಮಾನೋತ್ಸವ ವರ್ಷವಾಗುತ್ತದೆ. ಕುವೆಂಪು ಅವರ ಪರಮ ಧ್ಯೇಯವಾದ '**ವಿಶ್ವಮಾನವ ಸಂದೇಶ**' ದ ವರ್ಷವೂ ಅದು ಆಗುವಂತೆ ಕರ್ನಾಟಕ ಸರಕಾರ ಯೋಜನೆ ರೂಪಿಸಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕುವೆಂಪು ಜನ್ಮಶತಮಾನೋತ್ಸವವನ್ನು ಪ್ರತ್ಯೇಕವಾಗಿಯೇ ಆಚರಿಸಲಿದ್ದು, ಎರಡು ದಿನಗಳ ವಿಚಾರಗೋಷ್ಠಿಯನ್ನು ಕುವೆಂಪು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನೆರವೇರಿಸಲು ನಿಶ್ಚಯಿಸಿದೆ. ಇದೇ ದಿನಾಂಕ ೨೯ರಂದು ರಾಜ್ಯ ಮಟ್ಟದಲ್ಲಿ ಪ್ರಾರಂಭವಾಗಲಿರುವ ಕುವೆಂಪು ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಉತ್ಸವ ಸಮಿತಿಯು ಕೆಲವು ಪುಸ್ತಕಗಳನ್ನು ಪ್ರಕಟಿಸುವ ಕುರಿತು ದಿನಾಂಕ ೭.೭.೨೦೦೩ ರಂದು ಜರುಗಿದ ಸಭೆಯಲ್ಲಿ ಗೊತ್ತುವಳಿಗಳನ್ನು ಸ್ವೀಕರಿಸಿದೆ. ಆ ಸಭೆಯಲ್ಲಿ "**ಜಲಗಾರ, ಶೂದ್ರತಪಸ್ವಿ ಮತ್ತು ಬೆರಳ್ ಗೆ ಕೊರಳ್**, ಈ ಮೂರು ನಾಟಕಗಳನ್ನು ಒಂದು ಸಂಪುಟವಾಗಿ ಪ್ರಕಟಿಸಲು ತೀರ್ಮಾನಿಸಿದ್ದು, ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಕಡೆಮಿಯು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಕಾರದೊಂದಿಗೆ ನಿರ್ವಹಿಸುವಂತೆ ತೀರ್ಮಾನಿಸಲಾಯಿತು". ಈ ತೀರ್ಮಾನದನ್ವಯ ಕುವೆಂಪು ಅವರ ಮೂರು ನಾಟಕಗಳು ಸಂಪುಟ ಪ್ರಕಟವಾಗುತ್ತಿದೆ.

ಜಲಗಾರ, ಶೂದ್ರತಪಸ್ವಿ ಮತ್ತು ಬೆರಳ್ ಗೆ ಕೊರಳ್ ಇವು ಮೂರು ಕನ್ನಡ ಸಾಹಿತ್ಯಕ್ಕೆ ಕುವೆಂಪು ಅವರ ವಿಶೇಷ ಕೊಡುಗೆಗಳು. ವರ್ಣಭೇದದ ಹಿನ್ನೆಲೆಯಿರುವ ಈ ನಾಟಕಗಳ ಉದ್ದೇಶ ಮಾನವ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಹೊಸದೃಷ್ಟಿಯನ್ನು ನೀಡುವುದಾಗಿದೆ. ಜಲಗಾರ ಪ್ರಥಮವಾಗಿ ಪ್ರಕಟವಾದದ್ದು ೧೯೨೮ರಲ್ಲಿ. ಆಗ ಕುವೆಂಪು ಅವರಿಗೆ ೨೪ರ ಪ್ರಾಯ. ಬಾಲ್ಯದಿಂದಲೇ ನಮ್ಮ ಸಮಾಜವನ್ನು ಕುತೂಹಲದಿಂದ ನೋಡುತ್ತ ಬಂದ, ಕೆಳವರ್ಗದವರನ್ನು ಮೇಲ್ವರ್ಗದವರು ನಡೆಸಿಕೊಳ್ಳುತ್ತಿರುವ ರೀತಿಯನ್ನು ಗಮನಿಸಿದ, ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಸಂಸ್ಕೃತ ಕಲಿಯುವುದು ಶೂದ್ರರ ಕೆಲಸವಲ್ಲ ಎಂಬಂತಹ ನುಡಿಗಳನ್ನು ಕೇಳಿದ ಮೈಸೂರಿಗೆ ಬಂದು ಕಾಲೇಜು ವಿದ್ಯಾರ್ಥಿಯಾಗಿ ವಿದ್ಯಾರ್ಥಿಗಳನ್ನು ತರ - ತಮ ಭಾವದಿಂದ ಕಾಣುತ್ತಿರುವ ಉಚ್ಚ ವರ್ಗದವರ ಭಾವನೆಯನ್ನು ತಿಳಿದುಕೊಂಡ ಕುವೆಂಪು ಅವರು ಈ ಬಗೆಯ ನಾಟಕಗಳ ಮೂಲಕ ಸಮಾಜದ ಕಣ್ಣು ತೆರೆಸುವ ಯತ್ನಮಾಡಿದರು ಎಂದು ಹೇಳಬಹುದು. ಮೂರು ನಾಟಕಗಳ ನಾಯಕರು ಕೆಳವರ್ಗದಿಂದಲೇ ಬಂದವರು, ಶೋಷಣೆಗೆ ಒಳಗಾದವರು. ಜಲಗಾರ, ಶಂಬೂಕ, ಏಕಲವ್ಯ ಇವರೆಲ್ಲ ಇಲ್ಲಿ ಹೊಸ ವ್ಯಕ್ತಿತ್ವದಿಂದ ಶೋಭಿಸುತ್ತಾರೆ.

'**ಶೂದ್ರತಪಸ್ವಿ**'ಗೆ ಬರೆದ ಮಾರ್ನುಡಿ, '**ಬೆರಳ್**ಗೆ **ಕೊರಳ್**' ನಾಟಕಕ್ಕೆ ಬರೆದ ಟಿಪ್ಪಣಿಕೆ ಕುವೆಂಪು ಅವರ ಪ್ರಗತಿಪರ ವಿಚಾರಗಳಿಗೆ ನಿದರ್ಶನಗಳಾಗಿವೆ. ಅದರಲ್ಲೂ '**ಬೆರಳ್ ಗೆ ಕೊರಳ್**' ಕೃತಿಯ ಟಿಪ್ಪಣಿಕೆಯಲ್ಲಿ ಗುರುತತ್ತ್ವ, ಕರ್ಮತತ್ತ್ವ, ಯಜ್ಞತತ್ತ್ವಗಳು ಕುವೆಂಪು ಅವರ ಆಧ್ಯಾತ್ಮಿಕ ಅಧ್ಯಯನಕ್ಕೆ, ಚಿಂತನೆಗೆ ಸಾಕ್ಷಿಯಾಗಿವೆ. ಅವರು ಉದ್ಧರಿಸುವ

ಭಗವದ್ಗೀತೆಯ ಚರಣಗಳು ಆಧ್ಯಾತ್ಮದ ಹಾದಿಯಲ್ಲಿರುವವರ ಗಮನವನ್ನು ಖಂಡಿತವಾಗಿ ಸೆಳೆಯುತ್ತವೆ.

ಕುವೆಂಪು ಬರೀ ಕವಿಯಲ್ಲ, ನಾಟಕಕಾರರಲ್ಲ ಅವರೊಬ್ಬ ಸಾಧಕರು ಎಂಬುದು ತಿಳಿದುಬರುವುದು ಇಲ್ಲಿಯೇ. ೧೯೨೮ರಲ್ಲಿ 'ಜಲಗಾರ' ಬರೆದಾದ ಮೇಲೆ 'ಯಮನ ಸೋಲು', 'ವಾಲ್ಮೀಕಿ ಭಾಗ್ಯ', ಇತ್ಯಾದಿ ನಾಟಕಗಳನ್ನು ಬರೆದರು. ಶೂದ್ರತಪಸ್ವಿ ಬರೆದದ್ದು ೧೯೪೪ರಲ್ಲಿ, ಬೆರಳ್ ಗೆ ಕೊರಳ್ ಬರೆದದ್ದು ೧೯೪೭ರಲ್ಲಿ ಸ್ವಾತಂತ್ರ್ಯಪೂರ್ವದ ಆ ದಿನಗಳಲ್ಲಿಯೇ ಕುವೆಂಪು ಒಬ್ಬ ಸಾಧಕರಾಗಿಯೂ ಕಾಣುತ್ತಾರೆ. ಸಮಾಜ ಚಿಂತಕರಾಗಿಯೂ ಕಾಣುತ್ತಾರೆ. ಇವೆರಡನ್ನು ಸಮ ಸಮವಾಗಿಯೇ ಬೆಳೆಸಿಕೊಂಡ ಅವರು ನೀಡಿದ ಸಾಹಿತ್ಯ ತುಂಬಾ ಮೌಲಿಕವಾದದ್ದು.

ಸ್ವಲ್ಪದರಲ್ಲಿ ಅವರ ಸಾಹಿತ್ಯಿಕ ಸಾಧನೆಯನ್ನು ಹೀಗೆ ತಿಳಿಸಬಹುದು. ಕುವೆಂಪು ಇಪ್ಪತ್ತನೆಯ ಶತಮಾನದ ಮಹಾಕವಿ, ಯುಗದ ಕವಿ, ಜಗದ ಕವಿಯೂ ಅಹುದು. ·ನವೋದಯದ ಸಂದರ್ಭದಲ್ಲಿ ಕವಿಗಳಾಗಿ, ನಾಟಕಕಾರರಾಗಿ ಮೂಡಿ ಬಂದ ಕುವೆಂಪು ಅವರು ಸೃಷ್ಟಿಸಿದ ಸಾಹಿತ್ಯ ವಿಪುಲವೂ ವೈವಿಧ್ಯಪೂರ್ಣವೂ ಆಗಿದೆ. ಕಾವ್ಯ, ಖಂಡಕಾವ್ಯ, ಮಹಾಕಾವ್ಯ, ಕತೆ, ಕಾದಂಬರಿ, ನಾಟಕ, ಪ್ರಬಂಧ, ಜೀವನ ಚರಿತ್ರೆ, ಆತ್ಮಕಥನ, ವಿಮರ್ಶೆ, ಮೀಮಾಂಸೆ - ಹೀಗೆ ಹಲವು ಪ್ರಕಾರಗಳಲ್ಲಿ ಅವರ ಸಾಧನೆಯೆ, ಸಿದ್ಧಿಯೂ ಇದೆ. ಭಾರತೀಯ ಮಹಾಕವಿಗಳಲ್ಲಿ ಎದ್ದು ಕಾಣುವ ವ್ಯಕ್ತಿತ್ವವುಳ್ಳ ಅವರು ವಿಶ್ವದ ಮಹಾಕವಿಗಳ ಸಾಲಿನಲ್ಲಿಯೂ ಮಿಂಚುವಂತಹರು.

ಅನಿಕೇತನ ಪ್ರಜ್ಞೆಯ, ವಿಶ್ವಮಾನವ ಸಂದೇಶ ಬೀರಿದ, ಅನುಭಾವಿಯೂ ಆದ ಅವರ ಜನ್ಮಶತಮಾನೋತ್ಸವ ಕವಿಸ್ಮರಣೆಯ ಮಹತ್ವದ ಸಂದರ್ಭವೆಂದು ಹೇಳಬಹುದು. ಈ ಸಂದರ್ಭದಲ್ಲಿ ಕುವೆಂಪು ಅವರ ಪ್ರಗತಿಪರ ವಿಚಾರಧಾರೆಯ ಮೂರು ನಾಟಕಗಳನ್ನು ಪ್ರಕಟಿಸುವುದು ಸಾಹಿತ್ಯ ಅಕಾಡೆಮಿಗೆ ತುಂಬ ಸಂತಸದ ಕೆಲಸ.

ಪ್ರಸ್ತುತ ಕೆಲಸವನ್ನು ಅಕಾಡೆಮಿಗೆ ಒಪ್ಪಿಸಿಕೊಟ್ಟ ಕುವೆಂಪು ಜನ್ಮಶತಮಾನೋತ್ಸವ ಸಮಿತಿಗೆ, ಪ್ರಕಟಣೆಯ ಕಾರ್ಯದಲ್ಲಿ ಸಮಭಾಗಿಗಳಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಿಗೆ, ಸಲಹೆ - ಸೂಚನೆಗಳನ್ನು ನೀಡಿದ ಉತ್ಸವ ಸಮಿತಿಯ ಸದಸ್ಯರಾದ ಹಿರಿಯ ಕವಿ ಡಾ. ಜಿ.ಎಸ್. ಶಿವರುದ್ರಪ್ಪನವರಿಗೆ ಅಕಾಡೆಮಿ ಕೃತಜ್ಞವಾಗಿದೆ.

ಮುದ್ರಣ ಕಾರ್ಯವನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿಯವರನ್ನು, ಸಕಾಲಕ್ಕೆ ಸುಂದರವಾಗಿ ಪುಸ್ತಕವನ್ನು ಮುದ್ರಿಸಿಕೊಟ್ಟ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ ಶ್ರೀ ಬಿ.ಎಲ್. ಶ್ರೀನಿವಾಸ್ ಅವರನ್ನು ಅಕಾಡೆಮಿಯು ನೆನೆಯದಿರಲಾರದು.

ಡಿಸೆಂಬರ್ ೨೦೦೩

ಗುರುಲಿಂಗ ಕಾಪಸೆ

ಪರಿವಿಡಿ

ಜಲಗಾರ

ಪಾತ್ರಗಳು

ಭೂದೇವಿ

ಶಿವ

ಜಲಗಾರ

ರೈತ

ಕಬ್ಬಿಗ

ಯುವಕ

ತಿರುಕ

ಭಟ್ಟ

ಬಾಲಕರು

ಹಳ್ಳಿಯ ಹುಡುಗಿ

ಇಬ್ಬರು ಪಾರ್ವರು

ಇಬ್ಬರು ತರುಣರು

ಜಲಗಾರ

ದೃಶ್ಯ ೧

ಭೂದೇವಿ

[ಉಷಃಕಾಲ, ಹಾಡುತ್ತಿದ್ದಾಳೆ]

ಬಾರಾ, ಸಖಿಯೇ, ಉಷೆಯೇ, ಬಾರ ;
ಕೆಂಪಿನ ಮುತ್ತಿನ ಮಾಲೆಯ ತಾರ.
ಮಬ್ಬಿನ ಮಂಜಿನ ಮುಸುಗನು ಎತ್ತಿ
ಬಾರಾ ಉದಯಾಚಲವನು ಹತ್ತಿ.
ಹಸುರಿನ ಬನಗಳ ಮುದ್ದಿಸಿ ಬಾರ ;
ಗಿರಿಶೃಂಗಗಳಾಲಿಂಗಿಸಿ ಬಾರ ;
ಮಲಗಿಹ ಖಗಗಳ ಕರೆಯುತ ಬಾರ ;
ಮಂದಾನಿಲನ ಎಬ್ಬಿಸಿ ಬಾರ ;
ಉದಯಾನಂದದ ಕಲಶವ ತಾರ ;
ಬಾರಾ, ಸಖಿಯೇ, ಉಷೆಯೇ, ಬಾರ.

ಮಂಜಿನ ಜಪಮಣಿ ಮಾಲೆಯ ಹಿಡಿದು,
ವನಗಳ ವಿಕಸಿತ ಸುಮಗಳ ಮುಡಿದು,
ಹೂಗಳ ಕೆಂಪಿನ ಕುಂಕುಮವಿಟ್ಟು,
ತಳಿರಿನ ಸೊಬಗಿನ ಸೀರೆಯನುಟ್ಟು,
ಪೈರಿನ ರಮಣೀಯತೆಯನು ತೊಟ್ಟು,
ಮುಗಿಲಿನ ಕುರುಳನು ತೇಲಲು ಬಿಟ್ಟು ;
ಉದಯದ ಹೂಗಳ ಸೊಬಗನು ಕೊಯ್ದು,
ವನಗಳ ನಗ್ನ ಗಭೀರತೆಯಾಯ್ದು,
ವಿಶ್ವದ ಗರ್ಭದ ಚೆಲುವನು ಹೊಯ್ದು,
ಮಾಯಾ ಮೋಹದ ಜಾಲವ ನೆಯ್ದು,
ತಳಿರಿನ ಹೂಗಳ ಸಂಕವ ಮಾಡಿ
ಬಾರಾ, ಉಷೆಯೇ, ನಲಿನಲಿದಾಡಿ.

(ಹಾಡುತ್ತಾ ಹಾಡುತ್ತಾ ಮೆಲ್ಲನೆ ರಂಗದಿಂದ ಜಾರುತ್ತಾಳೆ. ಜಲಗಾರನೊಬ್ಬನು ಕೈಲಿ ಬುಟ್ಟಿ ಪೊರಕೆ ಹಿಡಿದು ಬರುತ್ತಾನೆ. ಬಂದವನು ಗುಡಿಸಲೆಳಸಿ ಮತ್ತೆ ಸುತ್ತಲೂ ನೋಡಿ)

ಜಲಗಾರ

ಏನಿದ್ದೆಕಿಲ್ಲೋನೆ ಸುರಿಯುತಿಹುದೆಡೆಬಿಡದೆ !
ಮುಸುಗಿಹುದು ಬಿಳಿ ಮಬ್ಬು. ಅಡಿಯಿಡಲು ಬೀದಿಯೇ
ಕಾಣಿಸದು ಕಂಗಳಿಗೆ. ಮಂಜು ಹರಿಯುವವರೆಗೆ
ಕುಳಿತಿಲ್ಲಿ, ನಲಿಯುವೆನು ನಲ್ಗಬ್ಬಗಳ ಹಾಡಿ.

(ಅಲ್ಲಿಯೆ ಬಳಿಯಿದ್ದ ಒಂದು ಎತ್ತರವಾದ ಅರೆಯ ಮೇಲೆ ಕುಳಿತು, ತನ್ನ ಪೊರಕೆ ಬುಟ್ಟಿಗಳನ್ನು ಕೆಳಗಿಟ್ಟು ಹಾಡುತ್ತಾನೆ)

ಮೂಡಿ ಬಾ, ಮೂಡಿ ಬಾ,
ಬೇಗ ಬಾ, ಬಾ ಬಾ !
ತೊಳಗಿ ಬಾ, ಬೆಳಗಿ ಬಾ,
ಜಗದ ಕಣ್ಣೆ, ಬಾ ಬಾ !
ಮಲೆಯ ಹತ್ತಿ ಮುಸುಗನೆತ್ತಿ
ಹಸುರ ಮೇಲೆ ಮುತ್ತ ಬಿತ್ತಿ
ಜಗದೆವೆಗಳ ತೆರೆಯುತ
ಕಮಲಂಗಳ ಬಿರಿಯುತ,
ತಿರೆಗೆ ಜೀವಕಳೆಯ ನೀಡಿ
ಜನಗಳೆದೆಗೆ ರಸವನೂಡಿ
ಮೂಡಿ ಬಾ, ಮೂಡಿ ಬಾ,.
ಬೇಗ ಬಾ, ಬಾ ಬಾ !
ತೊಳಗಿ ಬಾ, ಬೆಳಗಿ ಬಾ,
ಜಗದ ಕಣ್ಣೆ, ಬಾ ಬಾ !
ಮುಗಿಲಿನಲಿ ಕೆಂಪ ಹೊಯ್ದು,
ದಿನಮಣಿಯೆ, ಬಾ ಬಾ ;
ಬೆಳಕಿನಲಿ ಬಲೆಯ ನೆಯ್ದು,
ತಿಮಿರಾರಿ, ಬಾ ಬಾ ;

ಬಾನ ಹೆಣ್ಣನೊಲಿಯುತೊಮ್ಮೆ
ನೆಲದ ಹೆಣ್ಣನೊಲಿಯುತೊಮ್ಮೆ
ಒಮ್ಮೆ ಬನದ ದೇವಿಯ
ಒಮ್ಮೆ ಜಲದ ದೇವಿಯ
ಸರಸದಿಂದಲೊಲಿಯುತಾಡಿ
ಕಿರಣ ಮಾಲೆಗಳನು ಸೂಡಿ
ಮೂಡಿ ಬಾ, ಮೂಡಿ ಬಾ ;
ಬೇಗ ಬಾ, ಬಾ ಬಾ !
ತೊಳಗಿ ಬಾ, ಬೆಳಗಿ ಬಾ ;
ಜಗದ ಕಣ್ಣೆ, ಬಾ ಬಾ !

(ಹಾಡನ್ನು ನಿಲ್ಲಿಸಿ ಮೂಡಣ ದೆಸೆಯನ್ನು ನೋಡಿ)

ಮೆಲುನಡೆಯನಿಡುತ ಅರುಣೋದಯವು ಮೂಡಣದ
ಬಾನೆಡೆಯೊಳೋಕುಳಿಯ ಚೆಲ್ಲುತ್ತ ಮೂಡುತಿದೆ,
ಹಸುರಿನಲಿ ಮುತ್ತುಗಳ ಹೊಂಬೆಳಗ ಸೂಸಿ.
ಹಿಂಜರಿದು ಹಿಮ್ಮೆಟ್ಟಿ ದಿಕ್ಕುಗಳಲಡಗುತಿಹ
ಕತ್ತಲೆಯ ಮೊತ್ತದಿಂ ; ದೆಸೆದೆಸೆಗಳಂ ತೀವಿ
ನಲಿವ ನರುಗಂಪಿನಿಂ, ಪೆಂಪಿನಿಂ ; ಮೈಸೋತ
ದಳದಂತೆ ಬೆದರಿ ಹಿಂಜರಿದು ಮರೆಯಾಗುತಿಹ
ಮಂಜಿನಿಂ; ನೇಸರಾಗಮನದಲಿ ಕಣ್ದೆರೆದು,
ಮೈಕೊಡವಿ, ಮರದಿಂದ ಮರದೆಡೆಗೆ ಸಂತಸದಿ
ಹಾರುತ್ತ, ನುಣ್ದನಿಯ ಬೀರುತಿಹ ಹಕ್ಕಿಗಳ
ಗೇಯದಿಂಚರದಿಂ ; ನಲವಿಂದ ಸುಳಿಸುಳಿದು
ತಳಿರ ಕಾವಣಗಳಲಿ ಒಯ್ಯೊಯ್ಯನಾಡುತಿಹ
ಕುಳಿರೆಲರಿನಿಂಪಿನಿಂ ; ಎಲರಿನಲಿ ತಲೆದೂಗೆ
ನರುಗಂಪನೀಡಾಡಿ ಬಿರಿಯುತಿಹ ಪೂಗಳಿಂ ;
ಪೂಗಳಲಿ ಬಂಡುಣಲು ಹಾರೈಸಿ, ಸುತ್ತಿ
ಮೊರೆಯುತಿಹ ಸೊಕ್ಕಿದಳಿ ನಿಕರದಿಂ ; ಬಿತ್ತರದ
ಬಾನಿನಿಂ ; ಬಾನಿನಲಿ ತೇಲುತಿಹ ಮುಗಿಲಿನಿಂ ;

ರಮ್ಯಾರುಣೋದಯವದೆಂತು ಚೆಲ್ವಾದುದು !
ಸೃಷ್ಟಿಕರ್ತನನೆಮಗೆ ಸಾಧಿಸಲು, ತೋರಿಸಲು,
ಸೃಷ್ಟಿಯಿದು ಸಾಲದೇ ? ಸೃಷ್ಟಿಸೌಂದರ್ಯಮಿದು
ಸಾಲದೇ ? ಪಳವಾತದೇಕೆ ? ಬಿಜ್ಜೆಯೇಂ
ತೋರ್ಕುಮೇ ಎದೆಯರಿವು ತೋರದಾ ಪರಮನಂ ? -
ಇಷ್ಟು ಮುಂಜಾನೆಯಲಿ ಹಾಡುತ್ತ ಬರುವರಾರು?

(ರಂಗದ ಒಂದು ಪಕ್ಕಕ್ಕೆ ದೃಷ್ಟಿಸಿ ನೋಡುತ್ತಾನೆ. ರೈತನೊಬ್ಬನು ಹಾಡುತ್ತ ಬರುತ್ತಾನೆ.)

ರೈತ

ನೇಗಿಲ ಯೋಗಿಯು ನಾನು ;
ಮಣ್ಣಿನ ಭೋಗಿಯು ನಾನು !
ಕೆರೆಗಳ ತೊರೆಗಳ ಗೆಳೆಯನು ನಾನು,
ಹೊಲಗಳ ಬನಗಳ ದೊರೆ ನಾನು.
ಹೊಯ್ಯುವೆ, ಗೆಯ್ಯುವೆ, ಕೊಯ್ಯುವೆ ನಾನು ;
ಉಣ್ಣುವೆ, ಉಣಸೀಯುವೆ ನಾನು.
ನೇಗಿಲ ಗೆರೆಯೇ ತೋರುವುದೆನಗೆ
ಮುಕ್ತಿಯ ಹಾದಿಯನು ;
ವೇದಗಳೆಲ್ಲಾ ನೆಗೆನೆಗೆದರಿಯದ
ಅಂತ್ಯದ ಆದಿಯನು.
ನನ್ನಿಯನರಿಯುವೆ ಕರ್ಮದಲಿ ;
ಸೊಗವನು ಕಾಣುವೆ ಧರ್ಮದಲಿ !
ಬದುಕಿ ಬಾಳಿ ನಾ ಗೆಯ್ಯುವೆ ನಲಿಯುವೆ,
ಇಹಪರಗಳ ನಾ ಸಾಧಿಸುವೆ.
ಬದುಕಿ ; ಬಾಳಿ ; ಕರ್ತವ್ಯವ ಮಾಡಿ ;
ಮೇಲಾಗುವುದನು ಬೋಧಿಸುವೆ !
ನೇಗಿಲ ಯೋಗಿಯು ನಾನು !
ಮಣ್ಣಿನ ಭೋಗಿಯು ನಾನು !

(ಹಾಡನ್ನು ನಿಲ್ಲಿಸಿ, ತಾನು ತಂದ ಹಣ್ಣು ಕಾಯಿ ಕೆಳಗಿಟ್ಟು, ಉಟ್ಟ ಹೊಸ ಬಟ್ಟೆಗಳನ್ನು ನೋಡಿ ನೋಡಿ ಸರಿಮಾಡಿಕೊಳ್ಳುತ್ತಾ)

ತಿರೆಯ ಪೊರೆದವರೆನ್ನ ಸಹಕರ್ಮಿಗಳು, ಧರ್ಮಿಗಳು !
ನನ್ನವರ ಬಲದಿಂದಲೇ ದೊರೆಗಳಾಳಿದರು,
ಬಾಳಿದರು ; ರಣವೀರರರಿಗಳನು ಹೂಳಿದರು.
ಕಬ್ಬಿಗರು ನಲ್ಗಬ್ಬಗಳ ಬರೆದು ಹಾಡಿದರು ;
ಶಿಲ್ಪಿಗಳು ಕಲ್ಲಿನಲಿ ಕತೆಗಳನು ಕೆತ್ತಿದರು !
ಮಣ್ಣಾದ ನೇಗಿಲಾಶ್ರಯದಿ ಬೆಳೆದಿಹುದು,
ಉಳಿದಿಹುದು, ನಮ್ಮ ನಾಗರಿಕತೆ. ರೈತರೇ
ಭೂಮಿಗಿಳಿದಿಹ ಕಾಮಧೇನುಗಳು ; ರೈತರೇ
ಧರೆಯೊಳಿಹ ಜಂಗಮ ಕಲ್ಪವೃಕ್ಷಗಳು.

ಜಲಗಾರ

ಮುಂಜಾನೆಯೊಳಗೆಲ್ಲಿ ಹೋಗುತಿಹೆ, ರೈತ ?

ರೈತ

(ಹಿಂತಿರುಗಿ ನೋಡಿ)

ಓಹೊ ನೀನರಿಯೆಯಾ ? ಇಂದು ನಮ್ಮೂರ
ಶಿವಗುಡಿಯ ಜಾತ್ರೆ ! ಬರುವುದಿಲ್ಲವೆ ನೀನು ?
ತೇರೆಳೆಯಲೆಂದನಿಬರೂ ಬರುತಿಹರು.

ಜಲಗಾರ

ನನಗೇಕೆ ಶಿವಗುಡಿಯ ಜಾತ್ರೆ ? ಜೋಯಿಸರು
ದೇಗುಲದ ಬಳಿಗೆನ್ನ ಸೇರಿಸರು.

ರೈತ

ದೂರದಲ್ಲಿಯೆ ನಿಂತು ಕೈಮುಗಿದು ಬಾ.

ಜಲಗಾರ

ಕರ್ಮವಾರಾಧನೆ, ಸೇವೆಯೇ ಪೂಜೆ.
ನನ್ನ ಭಾಗಕೆ ಪೊರಕೆ ಆರತಿ. ಗುಡಿಸುವುದೆ

ನನ್ನ ದೇವರ ಪೂಜೆ ! – ನಿನ್ನೆ ದೇಗುಲದೆಡೆಗೆ
ಹೋದೆನ್ನ ಕಂದನಂ ಬೈದಿರಿದು ನೂಕಿದರು.
ಶಿವಗುಡಿಯ ಶಿವನು ಜೋಯಿಸರ ಶಿವನಂತೆ ;
ನನ್ನ ಶಿವನೀ ಮಣ್ಣಿನಲ್ಲಿಹನು. ನನ್ನ ಶಿವ
ಕೊಳೆತ ಕಸದೊಳಗಿಹನು. ಕಪ್ಪುರದೊಳಿಲ್ಲ ;
ಮಂಗಳಾರತಿಯೊಳಿಲ್ಲ ; ಹೂವುಗಳಲಿಲ್ಲ.
ಯಾವೆಡೆಯೊಳಾನಿಹೆನೊ ಅವನಲ್ಲಿಯೇ ಇಹನು.
ನನ್ನೆದೆಯೆ ದೇಗುಲ ; ನನ್ನೊಲ್ಮೆಯದೆ ಪೂಜೆ.
ನಾನೆಲ್ಲಿ ಭಕ್ತಿಯಿಂ ಕೈಮುಗಿವೆನೋ ಅಲ್ಲಿ
ತಾನಿಹನು. ನಾನೆಲ್ಲಿ ಸತ್ಕರ್ಮವೆಸಗುವೆನೊ
ಅಲ್ಲಿ ಮೈದೋರುವನು. ಶಿವಗುಡಿಯದೆನಗೇಕೆ ? –
ನೀನೇನು ಶಿವಗುಡಿಗೆ ತೆರಳುತಿಹೆಯಾ ?

ರೈತ

ಹೌದು ; ಶಿವನ ನೋಡಲು ಗುಡಿಗೆ ಹೊರಟಿಹೆನು –
ದರುಶನಕೆ. ಅದಕಾಗಿ ಹಣ್ಕಾಯಿಗಳನೆಲ್ಲ
ತಂದಿರುವೆ ; ನೋಡಿಲ್ಲಿ. (ತೋರುತ್ತಾನೆ)

ಜಲಗಾರ

ಶಿವನ ಕಾಣಲು ನೀನು
ಗುಡಿಗೆ ಹೋಗುವೆಯೇನು ? ನಿನ್ನ ನೇಗಿಲ ಗೆರೆಯ
ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು ?
ಉಳುವಾಗ, ನೆಡುವಾಗ ಪೂಜೆಮಾಡುವೆ ನೀನು.
ದೇಗುಲದ ಪೂಜಕನು ಬೈಗಿನಲಿ ಬೆಳಗಿನಲಿ
ಪೂಜಿಸಿದರೇನಂತೆ ? ನಮ್ಮ ಜೀವವೆ ನಿಚ್ಚ
ಪೂಜೆ, ನಮ್ಮ ಕರ್ಮವೆ ನಿತ್ಯಯೋಗ.

(ರೈತನು ತನ್ನ ಪೂಜಾಸಾಮಗ್ರಿಗಳನ್ನು ಎತ್ತಿಕೊಳ್ಳುತ್ತಾನೆ.)

ಜಲಗಾರನೆಂದುದಿದು ವೇದ ನುಡಿಯಲ್ಲ;
ತೆರಳು, ನೇಗಿಲಯೋಗಿ, ಶಿವನ ಪೂಜಿಸು, ಹೋಗು.

(ಗುಡಿಸುತ್ತಾನೆ)

ರೈತ

ಕೇಳಿಲ್ಲಿ, ಜಲಗಾರ. ಇಂದು ಜಾತ್ರೆಯ ದಿವಸ,
ಇಂದು ಸುಗ್ಗಿಯ ಹಬ್ಬ; ಇಂದು ಆಟದ ದಿನ.
ಎಲ್ಲರೂ ಸಂತಸದಿ ಶಿವಪೂಜೆಯನು ಮಾಡಿ
ನಲಿಯುವರು. ನೀನೂ ಬಾ.

ಜಲಗಾರ

ಹೌದು, ನೇಗಿಲ ಯೋಗಿ,
ಲೋಕ ನಗಬೇಕಾದರಾರಾದರಳಬೇಕು ! (ಗುಡಿಸುತ್ತಾನೆ.)

ರೈತ

(ಸ್ವಗತ) ಸೊಗದ ಮೋರೆಯನೆ ಕಂಡರಿಯನೀ ಜಲಗಾರ.
ಪೂಜೆಯೆಂಬುದನರಿಯ ; ದೇವನೆಂಬುದನರಿಯ ;
ಹುಟ್ಟುಗುಣ ಸುಟ್ಟರೂ ಹೋಗುವುದೆ ?

(ಹಾಡುತ್ತಾ ಹೋಗುತ್ತಾನೆ)

ಜಲಗಾರ

ಭೂಮಿಯಲಿ ಹುಟ್ಟುಕುರುಡರಿಗಿಂತ ಕಣ್ಣುಳ್ಳ
ಕುರುಡರೆನಿತೊಳರು ? ಬನದ ಕಂದಳಿರಲ್ಲಿ
ಬಗ್ಗಿಸುವ ಕೋಗಿಲೆಯೆ, ನಿನ್ನ ಪುಗಲಿಂಚರದಿ
ಪರಮವಾಣಿಯ ಕೇಳದವಗೆ ಕಿವಿಯಿದ್ದರೇಂ ?
ಎಲೆ ರಮ್ಯವನಗಳಿರ, ನಿಮ್ಮ ಸೌಂದರ್ಯದಲಿ
ಪರಮಾತ್ಮನಂ ಕಾಣದವಗಿದ್ದರೇಂ ಕಣ್ಣೆರಡು ?
ಜಗದ ದೇಗುಲದಲ್ಲಿ ಜಗದುದಯ ಕಾರಣನ

ಕಾಣದವನೆಂತು ಕಾಣ್ಬನು ಶಿವನ, ಗುಡಿಯಲ್ಲಿ?
ತಣ್ಗದಿರ ಬೆಂಗದಿರನರಿಲುಗಳೆ ಸೊಡರುಗಳು.
ಸುಮಮಾಲೆ ಅಲರುಗಳ ಚೆಲ್ಲುತಿರುವಡವಿಗಳು.
ಮುನ್ನೀರು ತೊರೆ ಕೆರೆಗಳೇ ಪಂಚಪಾತ್ರೆ.
ಬಿತ್ತರದ ಬಾಂದಳವೆ ಗೋಪುರಂ ! ಹೊಳೆಗಳಲಿ
ಹರಿವ ಸಲಿಲವೆ ತೀರ್ಥ ; ಸುಮಗಂಧವೇ ಧೂಪ.
ಹಕ್ಕಿಯಿಂಚರವೆ ಸುಸ್ವರಮೇಳ ! ಎದೆಯೊಲವೆ
ವರ ಧರ್ಮಶಾಸ್ತ್ರ. ಭಕ್ತಿಯೆ ದಿವ್ಯಾತ್ಮ ಯಜ್ಞ.
ಎದೆಯ ಮಣೆಯೇ ಯಜ್ಞಶಾಲೆ !
ನಲ್ವಾತುಗಳೆ ಮಂತ್ರಘೋಷ ; ನೀತಿಯೆ
ಪರಮ ವೇದ. ತಿರೆಗಿಂತ ದೇಗುಲವದೊಳದೇನ್ ?

(ಹಾಡುತ್ತಾನೆ)

ಗುಡಿಯೊಳಗಿರಲು ದೇವ
ಒಡೆಯನಾರೀ ಜಗವ ಕಾವ ?
ವಿಗ್ರಹದೊಳಿರೆ ರಾಮ
ಯಾರದೀ ಲೋಕದಾರಾಮ ?
ಮೂಡಣದೊಳಿಹನು ಹರಿ ;
ಪಡುವಲೊಳಿಹನು ಅಲ್ಲಾ !
ಹೃದಯದೊಳು ನೀ ನೋಡ
ಸಲೆ ವಿಚಾರವ ಮಾಡೆ
ಅಲ್ಲಿರುವನು ಕರೀಮ ;
ಅಲ್ಲೆ ತೋರ್ಪನು ರಾಮ !
ಜಗದ ಮನುಜರಿಗೆಲ್ಲಾ
ಬ್ರಹ್ಮನಾಗಿಹನಲ್ಲಾ !
ಅಲ್ಲ ರಾಮರ ಕಂದನ್
ಆಗಿರುವನು ಕಬೀರ !
ಆತನೇ ಎನಗೆ ಗುರು
ಮೇಣಾತನೇ ಪೀರ !

(ಇಬ್ಬರು ಪಾರ್ವರು ಪ್ರವೇಶಿಸುತ್ತಾರೆ)

ಮೊದಲನೆಯ ಪಾರ್ವ

ಕೊಳಲಿನಿನಿದನಿಯಂತೆ ಸವಿಗೊರಲಿನಿಂದೊಗೆದ
ಗಾಯನವದೆನಿತಿಂಪು ! ಹಾಡಿದವರಾರೊ ?

ಎರಡನೆಯ ಪಾರ್ವ

ಯಾರೊ ದಿವ್ಯಾತ್ಮನಿರಬೇಕು. ಮಧುರತಮ
ಗಾಯನವು ಅಮಲತಮ ಹೃದಯದಿಂದಲ್ಲದೆ
ಹೊರಹೊಮ್ಮಲರಿಯದು ! ಗುಡಿಯ ಬಳಿಯಾದರೂ
ಹಾಡಿದನೆ !

ಮೊದಲನೆಯ ಪಾರ್ವ

(ಜಲಗಾರನನ್ನು ನೋಡಿ)

ಜಲಗಾರ, ಹಾಡಿದವರಾರೋ ?

ಜಲಗಾರ

(ಕೈಮುಗಿದು)

ನಾನೇ ಮಹಾಸ್ವಾಮಿ : ತಮ್ಮನುಗ್ರಹದಿಂದ.

ಎರಡನೆಯ ಪಾರ್ವ

ಅವನಂತೆ ! ಬರಿಯ ಸಟೆ ! ಹೋಗೋಣ ಬಾ.

ಮೊದಲನೆಯ ಪಾರ್ವ

ಸಂಗೀತವನಿತೇನು ಮನಮೋಹಿಪಂತೆ
ಇರಲಿಲ್ಲ. ಗಾನದೇವಿಯು ಹೀನ ಜಲಗಾರನನ್
ಒಲಿಯುವಳೆ ? ಎಂದಿಗೂ ಇಲ್ಲ

ಎರಡನೆಯ ಪಾರ್ವ

ಶೂದ್ರರೊಳ್
ಕವಿವರ್ಯರುದಿಸುವರೆ ? ಹುಟ್ಟುವರೆ ಪಂಡಿತರ್ ?
ಜನಿಸುವರೆ ಶಿಲ್ಪಿಗಳ್ ? ಗಾಯಕರ್ ? ಯೋಗಿಗಳ್ ?
ಅಸದಳಂ ! ಹೊತ್ತಾಯ್ತು ಹೋಗೋಣ.

ಮೊದಲನೆಯ ಪಾರ್ವ

ಇರಲಿ,
ಇವನ ಹಾಡೆನಿತಿಂಪು ತೋರಿದರು, ಗುಡಿಯ ಬಳಿ
ಬೇಡ ! ಕೇಳಲ್ಲಿ ! ಶಿವಗುಡಿಯ ಗಂಟೆಗಳ್ ! (ಹೋಗುತ್ತಾರೆ)

(ಜಲಗಾರನು ಅವರನ್ನೆ ನೋಡಿ ನಗುತ್ತಾ ಗುಡಿಸಲಾರಂಭಿಸುತ್ತಾನೆ. ಜಾತ್ರೆಗೆ ಹೋಗುವ ಜನಗಳ ಗುಂಪು ಹೋಗುತ್ತದೆ. ಯುವಕನೊಬ್ಬನು ಗುಡಿಸುವವನನ್ನು ನೋಡಿ ನಿಲ್ಲುತ್ತಾನೆ)

ಯುವಕ

ಜಗದುದಯ ಕಾರಣನೆ, ಹೇ ಜಗದವ್ಯಕ್ತ
ಮೂರ್ತಿ ನಿನ್ನ ಮಹಿಮೆಯನರಿವರಾರು ?
ನಿನ್ನ ಲೀಲೆಯ ತಿರುಳ ಹೊಕ್ಕು ಮುಟ್ಟಿದರಾರು ?
ಯುಗಯುಗಗಳಿಂ ಬಿಡದೆ ತಿಳಿಯಾಳದಾಗಸದಿ
ತೊಳಗುತಿಹ ಸೂರ್ಯನನು, ಮುಂಬೆಳಗಿನಲಿ ಮೂಡಿ
ಬೈಗಿನಲಿ ಮಡಿವ ಕಿರಿಯ ಹೂ ನಗುವಂತೆ
ಮಾಡಿರುವ ನಿನ್ನ ಮಾಯೆಯ ಮೈಮೆಯೆಂತು ?
ಕೆಲವರಾಡುವರುಳಿದವರು ಕೆಲಸ ಮಾಡುವರು :
ಯಾರ ಸಂತಸವಾರ್ಗೆ ? ಉದ್ದೇಶವೇನಿಹುದು ?
ದಿನದಿನವು ಎಡೆಬಿಡದೆ ಗೆಯ್ಯುತಿಹ ಜಲಗಾರನ್
ಈತಂಗೆ ಯಾವ ಫಲವನು ಎಲ್ಲಿ ಮುಚ್ಚಿರುವೆ ?
ಮಹಿಮೆ ಯಾವುದು ಕಸದೊಳಡಗಿಹುದು ?

(ಜಲಗಾರನನ್ನು ಸಂಬೋಧಿಸಿ)

ಜಲಗಾರ,

ಜಾತ್ರೆಯೊಳು ಕೂಡ ನಿನಗೆ ಬಿಡುವಿಲ್ಲವೆ ?
ನಾಳೆ ಗುಡಿಸುವೆಯಂತೆ ; ಬರಬಾರದೆ ಈಗ ?
ಒಂದು ದಿನವಾದರೂ ವಿಶ್ರಾಂತಿಯಿರಲಿ ;
ಬಾ, ಹೋಗೋಣ !

ಜಲಗಾರ

ವಿಶ್ರಾಂತಿಯೊಂದು ದಿನ ;
ಕರ್ಮ ಕಾಲದಂತ್ಯದವರೆಗೆ ! ಒಂದು ದಿನ
ಜಾತ್ರೆ ; ಅದಕಾಗಿ ಯುಗಯುಗದ ಯಾತ್ರೆ !
ತೆರಳು, ಯುವಕನೆ, ತೆರಳು ; ಶಿವನ ಗುಡಿಯೊಳಗರಸು ;
ನಾನು ಪುಡಿಯೊಳಗವನನರಸುವೆನು.

(ಜಲಗಾರನು ಗುಡಿಸುತ್ತಾನೆ. ಯುವಕನು ಅವನನ್ನೇ ಸ್ವಲ್ಪ ಹೊತ್ತು ದೃಷ್ಟಿಸಿ ನೋಡಿ, ಅವನು ಕಾಣದಂತೆ ಅವನಿಗೆ ಕೈಮುಗಿದು, ಹೋಗುತ್ತಾನೆ. ತಿರುಕನೊಬ್ಬನು ತಿರಿಯುತ್ತಾ ಬರುತ್ತಾನೆ. ಅವನು ಕುರುಡ, ಕುಂಟ)

ತಿರುಕ

(ರಾಗವಾಗಿ)

ಧರ್ಮರೇ !
ದೇವರೇ ! ತಾಯ್ತಂದೆ ! ಕಾಸು ಕೊಡಿರಪ್ಪಾ !
ಹೊಟ್ಟೆಗಿಲ್ಲದೆ ಹಸಿದು ಸಾಯುತಿಹೆನಪ್ಪಾ !
ಕಣ್ಣಿಲ್ಲ ! ಕಾಲಿಲ್ಲ ! ಧರ್ಮರೇ ! ತಾಯ್ತಂದೆ !

(ಭಟ್ಟನೊಬ್ಬನು ಮಂತ್ರ ಹೇಳುತ್ತಾ ವೇಗವಾಗಿ ಬರುತ್ತಾನೆ.)

ಭಟ್ಟ

(ರಾಗವಾಗಿ)

ತ್ವಮೇವ ಮಾತಾ ಚ ಪಿತಾ ತ್ವಮೇವ !
ತ್ವಮೇವ ಬಂಧುಶ್ಚ ಸಖಾ ತ್ವಮೇವ !
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ !
ತ್ವಮೇವ ಸರ್ವಂ ಮಮ ದೇವದೇವ !

(ಭಿಕ್ಷುಕನು ಅವನನ್ನು ಅಡ್ಡಗಟ್ಟಿ)

ತಿರುಕ

ಕಣ್ಣಿಲ್ಲ, ಧರ್ಮರೇ, ಕಾಸು ಕೊಡಿರಪ್ಪಾ!
ಹೊಟ್ಟೆಗಿಲ್ಲದೆ ಹಸಿದು ಸಾಯುತಿಹೆನಪ್ಪಾ!

ಭಟ್ಟ

(ಕೋಪದಿಂದ)

ನೀ ಸತ್ತರೆನಗೇನೊ ? ಮಡಿಬಟ್ಟೆ ಮುಟ್ಟುವೆಯ ?
ಅದಕೆ ದೇವರು ನಿನ್ನ ಕಣ್ಣಿಂಗಿಸಿದ್ದು!

(ತ್ವಮೇವ ಮಾತಾ ಚ... ಎಂದು ಹೇಳುತ್ತಾ ಹೋಗುತ್ತಾನೆ.)

ತಿರುಕ

(ಹತಾಶನ ರೋಷದಿಂದ)

ನೀನೇಕೆ ಗುಡಿಯೊಳಗೆ ಸೇರಿರುವೆಯಪ್ಪಾ,
ಪರಮಾತ್ಮ? ಗುಡಿಗಳಿವು ಪಾಪಿಗಳ ಭೋಗಿಗಳ
ಗೂಡುಗಳು! ಪೂಜೆಯೆಂಬುದೊ ಧರ್ಮಬುದ್ಧಿಯನು
ಜೋಗುಳದಿ ಮಲಗಿಸುವ ಕಾಳಮಂತ್ರವು, ದೇವ!
ಕಾಪಾಡು! ಕಾಪಾಡು! (ಒರಗುತ್ತಾನೆ)

(ಇಬ್ಬರು ತರುಣರು ಮಾತಾಡಿಕೊಳ್ಳುತ್ತಾ ಬರುತ್ತಾರೆ.)

ಮೊದಲನೆಯ ತರುಣ

ದೇಗುಲದೊಳವಿತುಕೊಂಡಿಹನಂತೆ ಪರಶಿವನು!
ಜಗವೆಲ್ಲ ದೇವನಿಹ ಗುಡಿಯಲ್ಲವೇ, ಗೆಳೆಯ? —
ಮತದ ಮದ್ಯವ ಕುಡಿದು ತಲೆಕೆಟ್ಟಿಹುದು ಮಂದಿ!

ಎರಡನೆಯ ತರುಣ

ಮೊದಲ ಠಕ್ಕನು ಮೊದಲ ಬೆಪ್ಪನಂ ಸಂಧಿಸಲು
ಸಂಭವಿಸಿತೆಂಬರೀ ಮತ ಎಂಬ ಮತಿವಿಕಾರಂ.

ದೊರೆ ಪುರೋಹಿತರ್ ಅವಳಿಮೊಲೆಯೂಡಿ ಸಲಹಿದರದಂ.
ಮತದ ಮದಿರೆಯನೀಂಟೆ ಮಂಕುಬಡಿದಿದೆ ಜನಕೆ.
ಕೊನೆ ದೊರೆಯ ಕೊರಳಿಗಾ ಕೊನೆ ಪುರೋಹಿತನ ಕರುಳ್
ಉರುಳಾಗುವಾ ವರೆಗೆ ಸುಖವಿಲ್ಲ ಈ ಧರೆಗೆ !

ಮೊದಲನೆಯ ತರುಣ

ಪೂರ್ವಿಕರ ಮೂಢತನಕಾದಿಯೆಂಬುವುದೆಲ್ಲಿ ?
ಅಂತವೆಂಬುವುದೆಲ್ಲಿ? ಹೇಳುವುದು ಒಂದು,
ಮಾಡುವುದು ಮತ್ತೊಂದು ! ಜಗದೊಡೆಯನೆಲ್ಲಿಯುಂ
ಇರುವನೆಂಬರು ಒಮ್ಮೆ! ಗುಡಿಯಲರಸುವರೊಮ್ಮೆ!
ನಿರಾಕಾರನವನೆಂದು ಸಾರುವರು ಒಮ್ಮೆ ;
ಮೂರ್ತಿಗಳ ಮಾಡಿ ಆರಾಧಿಸುವರಿನ್ನೊಮ್ಮೆ !
ಒಂದು ಸಲ ಸರ್ವರೊಳು ಅವನಿರುವನೆನ್ನುವರು ;
'ಹೊಲೆಯ ನೀ ದೂರವಿರು' ಎಂದೆಂಬರಿನ್ನೊಮ್ಮೆ !
ನುಡಿಗೂ ನೆಗಳ್ತೆಗೂ ಸಂಬಂಧವೇ ಇಲ್ಲ!
ಇದೆ ನಮ್ಮ ಭಾರತಾಂಬೆಯ ದುರ್ಗತಿಗೆ ಕಾರಣ.
ಬಡಜನರ ಕಣ್ಣೆತ್ತಿ ನೋಡದಿಹ, ಮರುಗದಿಹ
ಹಾಳು ಪೂಜೆಯದೇಕೆ? ಹಸಿದ ಜನಗಳಿಗೆ
ಕೊಡರೊಂದು ಕಾಸ ; ತಣ್ಣಗಿಹ ಕಲ್ಲುಗಳ
ಮೇಲೆ ಎಣ್ಣೆಯನು ಸುರಿಯುವರು.
ಕರ್ಪೂರದಾರತಿಯ ಬೆಳಗುವರು ವಿಗ್ರಹದ
ಮುಂದೆ ತಲೆಬಾಗಿ. ಸತ್ತ ದೇವರ ಪೂಜೆ
ಮಾಡುವರು. ಜೀವದ ದರಿದ್ರನಾರಾಯಣರ
ಸೇವೆಯಲ್ಲವೆ ಪರಮ ಪೂಜೆ ?

ತಿರುಕ

ಧರ್ಮರೇ !

ಕಣ್ಣಿಲ್ಲ, ಹಸಿದಿಹೆನು, ಸಾಯುತಿಹೆನಪ್ಪಾ !
ಪುಣ್ಯಾತ್ಮರೇ, ತಾಯ್ತಂದೆ, ಕಾಸು ಕೊಡಿರಪ್ಪಾ !

ಎರಡನೆಯ ತರುಣ

ಕಾಸಿದೆಯೆ ನಿನ್ನ ಬಳಿ ?

(ಎಂದು ತಟಕ್ಕನೆ ಮೊದಲನೆಯ ತರುಣನ ಕಡೆಗೆ ತಿರುಗುತ್ತಾನೆ. ಜೇಬಿನಲ್ಲಿ ಹಣದ ಸದ್ದಾಗುತ್ತದೆ.)

ಮೊದಲನೆಯ ತರುಣ

ಹಾಗಲ್ಲ, ಮಿತ್ರ !

ಕೊಡುವುದನು ನೋಡಿ ಕೊಡಬೇಕು !
"ನರಜನುಮವತ್ಯಧಿಕವದರೊಳು
ಗುರುಹಿರಿಯರಿವರೆಂದು ದಾನ
ಕ್ಕರುಹರಿವರಲ್ಲೆಂದು ನೋಡದೆ ಮೂಢ ಮಾರ್ಗದಲಿ
ಕರೆದಪಾತ್ರಂಗಿತ್ತು ಪಾತ್ರನ
ಪರಿಹರಿಸಲೀಯೆರಡರಿಂ ಸಂ
ಹರಣವೈದುವುದಾರ್ಜಿಸಿದ ಧನವರಸ ಕೇಳೆಂದ !"
ಎಂಬ ವಿದುರನ ನೀತಿಯರಿಯೆಯಾ ನೀನು ?
ಇವನೇನು ಕುರುಡನೇ ? ಇವನು ಬಲು ಸೋಮಾರಿ !
ನೋಡೆನಿತು ಬಲಶಾಲಿಯಾಗಿಹನು ? ನೋಡು !
ದುಡಿಯಬಾರದೆ ಇವನು ? ಭಿಕ್ಷುಕರ ದೆಸೆಯಿಂದ
ದೇಶವೇ ಹಾಳಾಯ್ತು ! (ಕುರುಡನ ಬಳಿಸಾರಿ)

ಲೋ ! ನಿನ್ನ ಕಣ್ಣು
ಕುರುಡೇನೋ, ಠಕ್ಕ !

(ಕಣ್ಣಿನ ರೆಪ್ಪೆ ಎಳೆದು ನೋಯಿಸುತ್ತಾನೆ.)

ತಿರುಕ

(ಕೂಗಿ ಗೋಳಾಡಿ)

ಪರದೇಶಿಯಪ್ಪಾ !
ಕಣ್ಣಿಲ್ಲವಪ್ಪಾ ! ನಿನ್ನ ದಮ್ಮಯ್ಯಪ್ಪಾ !
ನಿನ್ನ ಕಾಸೆನಗೆ ಬೇಡಪ್ಪಾ ! ಕಣ್ಣು
ಚುಚ್ಚ ಬೇಡಪ್ಪಾ !

(ಜಲಗಾರನು ಓಡಿಬಂದು ತರುಣನನ್ನು ಎಳೆಯುತ್ತಾನೆ.)

ಜಲಗಾರ

ಬಿಡಿರಪ್ಪಾ! ಪಾಪ,
ಹೊಟ್ಟೆಗಿಲ್ಲದೆ ಬಿದ್ದು ಸಾಯುವವಗೇತಕೀ
ಗೋಳು ?

ಮೊದಲನೆಯ ತರುಣ

(ಕೋಪದಿಂದ)

ಸೊಕ್ಕೇನೋ ನಿನಗೆ ? ... ತಿಂದ ಸೊಕ್ಕೇ ?
ಮೈ ಮುಟ್ಟುವೆಯ ಬಂದು !

(ಅವನನ್ನು ಒದ್ದು ನೂಕಿ ಹೋಗುತ್ತಾರೆ)

ಜಲಗಾರ

ದೇವರೇ, ದೇವರೇ !
ಶತ್ರುಗಳ ಕಾಟವಾದರು ಬೇಕು ; ನಮಗಾಗಿ
ಮಿತ್ರರೆಂಬುವ ನೆವದಿ ಮರುಕ ತೋರುವ ಜನರ
ಕೃತ್ರಿಮದ ಕಾಟ ಬೇಡ ! ಭಟ್ಟನಾದರೊ ಬೈದು
ಹೋದ. ಬಡಜನರಿಗಾಗಿ ಮರುಗುವ ಇವರು
ಭಿಕ್ಷುಕನ ಕಣ್ಣೆರಿದು, ಒದ್ದು, ತೆರಳಿದರು !
(ಮರುಕದಿಂದ) ನಿನಗೇನು ಬೇಕಣ್ಣಾ !

ತಿರುಕ

ಸಾಯುತಿಹೆನಪ್ಪಾ,
ಹೊಟ್ಟೆಗಿಲ್ಲದೆ ! ತುತ್ತು ಅನ್ನ ಹಾಕುವೆಯಪ್ಪಾ !

ಜಲಗಾರ

ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ ? —
ಲೋಕದಲಿ ಕಂಬನಿಯನೊಂದನೊರಸಿದ ನರನೆ
ಧನ್ಯ ! ನಿಟ್ಟುಸಿರನೊಂದ ಸಂತೈಸುವನೆ

ಮಾನ್ಯ ! ಹಸಿದ ಹೊಟ್ಟೆಗೆ ಮರುಗಿ ತುತ್ತೊಂದ
ನೀಡುವನೆ ಶಿವನಿಗೆಣೆ ! ಹೆರರ ಗೋಳನು ಕಂಡು,
ಎದೆ ಬೆಂದು, ಬಟ್ಟೆಗೆಟ್ಟೊಬ್ಬನನು ಕೈಹಿಡಿದು,
ಜೀವನದ ಕರಿಮಣಿಯ ಕತ್ತಲಲಿ ಕಿರಣವೊಂದನು
ತಂದು ಭರವಸೆಯನೀಯುವಾತನೆ ಋಷಿ !
ಅದೆ ಪೂಜೆ, ಧರ್ಮ, ಯೋಗ, ಭಕ್ತಿ !
ಎದ್ದೇಳು, ಭಿಕ್ಷುಕನೆ, ನನ್ನನ್ನದೊಳೆ, ಮುಷ್ಟಿ
ನಿನಗಿಕ್ಕಿ, ಶಿವಪೂಜೆ ಮಾಡುವೆನು. ನೀನೆನ್ನ
ಸೋದರ, ನೀನೆನ್ನ ದೇಗುಲ ! ನೀನೆನಗೆ
ಪರಶಿವ ! ಏಳು ; ಮೇಲೇಳು, ಸೋದರನೆ !

(ತಿರುಕನನ್ನು ಕೈಹಿಡಿದು ಮೆಲ್ಲಗೆ ನಡೆಸಿಕೊಂಡು ಹೋಗುತ್ತಾನೆ.)

ಪರದೆ

ದೃಶ್ಯ ೨

(ಸಾಯಂಕಾಲ ಭೂದೇವಿ ಬಂದು ಹಾಡುತ್ತಾಳೆ.)

ದೂರದಿಂದ ಮೆಲುನಡೆಯಲಿ
ಸಂಜೆವೆಣ್ಣು ಬರುವಳು – ಬಹು
ದೂರದಿಂದ ಬರುವಳು !
ನೀಲಗಗನದಾಚೆಯಿಂದ
ನಲಿದು ತೇಲಿ ಬರುವಳು – ತವ
ರೂರಿನಿಂದ ಬರುವಳು.

ಸರಸದಿಂದ ತೊರೆಯ ತಡಿಯ
ಮೇಲೆ ನಡೆದು ಬರುವಳು – ಸುಖ
ಶಾಂತಿಗಳನು ತರುವಳು.
ಸೆರಗಿನಿಂದ ಗಿರಿವನಗಳ
ಮುಸುಗುತೇರಿ ಬರುವಳು – ಮನ
ಮೋಹಿಸುತ್ತ ಬರುವಳು.

ಹಾಡುವಾ ವಿಹಂಗಮಗಳ
ಗೂಡಿಗಟ್ಟಿ ಬರುವಳು – ನಲಿ
ದಾಡಿಯಾಡಿ ಬರುವಳು.
ಗೆಜ್ಜೆಗಳನು ಗಲಿರೆನಿಸುತ
ಹೆಜ್ಜೆಯಿಡುತ ಬರುವಳು – ನಸು
ಲಜ್ಜೆಯಿಂದ ಬರುವಳು.

ವ್ಯೋಮವವಳ ಮಣಿಕಿರೀಟ,
ಭೂಮಿ ಪಾದಪೀಠವು – ವನ
ಧಾಮ ಹಸುರಿನುಡುಗೆಯು.
ಇಂದುವವಳ ಮಕುಟಮಣಿಯು ;
ತಾರೆ ರನ್ನಗಿಡಿಗಳು – ಕುರು
ಳೋಳಿ ನೀಲ ಮೇಘವು.

ತಣ್ಣನೆಲರ ಕೂಡಿಯಾಡಿ
ಮೌನದಿಂದ ಬರುವಳು – ಅನು
ರಾಗದಿಂದ ಬರುವಳು ;
ಗೂಢತರದ ಶಾಂತಿಯಿಂದ
ಜಗದೆವೆಗಳ ಮುಚ್ಚುತ – ವೈ
ಯಾರದಿಂದ ಬರುವಳು.
ದಿನದ ಬೇಗೆಯಿಂದ ಬೆಂದು
ಬಲು ಬಳಲಿಹ ಭೂಮಿಗೆ – ವಿ
ಶ್ರಾಂತಿಯಿತ್ತು ಬರುವಳು ;
ನಲಿನಲಿಯುತ ಮೆಲುನಡೆಯಲಿ
ಸಂಜೆವೆಣ್ಣು ಬರುವಳು – ನೋ
ಡದೋ, ತೇಲಿಬರುವಳು ! (ಹೋಗುತ್ತಾಳೆ)

(ಜಲಗಾರನು ಪೊರಕೆ ಬುಟ್ಟಿ ಹಿಡಿದು ಪ್ರವೇಶಿಸುತ್ತಾನೆ.)

ಜಲಗಾರ

ಎನಿತು ಸೊಗಮೀ ಎಲರ್ ದುಡಿದು ಬಳಲಿದ ಮೈಗೆ !
ದುಃಖವೆಂಬುದು ಸುಖದ ಕಿಂಕರನು. ಬಾಳೆನಿತು
ಸವಿಗನಸು ! ಬಾಳ್‌ಸವಿಯ ಸಿರಿಯಿದಿರ್ ಸಾವಳ್ಕು
ಬರಿಯ ಬಡತನಮಲ್ತೆ ? ಸೌಮ್ಯಮಲ್ತೆ ?

(ಒಂದು ಎತ್ತರವಾದ ಅರೆಯ ಮೇಲೆ ಕೂರುತ್ತಾನೆ.)

ಮೂಡಿ ಬಾ, ಚಂದಿರನೆ, ಬಾಳು ಸವಿಯೆಂಬುದನು
ಜಗಕೆಲ್ಲ ಸಾರುತ. ಮೂಡಿ, ತಾರಕೆಗಳಿರ,
ಜೀವದಾನಂದವನು ತಿರೆಗೆಲ್ಲ ತೋರುತ.
ಬೀಸು, ಬೀಸೆಲೆ ಮಂದಮಾರುತನೆ, ಜೀವನದ
ಬೇಗೆಯನು ತೂರುತ ! ಬಾಳು ಚಿರವಲ್ಲದಿರೆ,
ಭೂಮಿ ಚಿರವಲ್ಲದಿರೆ, ಜೀವದಾನಂದವದು
ಚಿರವಲ್ಲವೇನು ? ತೊಳಗುತಿಹ ಚುಕ್ಕಿಗಳೆ,
ಬಾಳ ಕಿರುಗೆಲಸಮಿದು, ಜಲಗಾರನೆಸಗುವೀ
ಕಿರುಗೆಲಸಮಿದು ನಿಮ್ಮ ಕಾಂತಿಗಿಂತಲು ಚಿರ.

ಒಂದು ಧರ್ಮದ ಕಿರಿಯ ಕಾರ್ಯ ಶತಕೋಟಿ
ಸೂರ್ಯರಿಗೆ ಬೆಳಕು ; ಲೋಕ ಲಕ್ಷಕೆ ಜೀವ !
ನಮ್ಮ ಬಾಳಿದು ಬರಿಯ ಮಾಯೆಯಲ್ಲ!
ನಮ್ಮ ಕರ್ಮವು ಬರಿಯ ಕನಸಲ್ಲ!

(ರೈತನು ಜಾತ್ರೆಯಿಂದ ಹಿಂತಿರುಗಿ ಬರುತ್ತಾನೆ.)

ರೈತ

ಜಲಗಾರ,
ಏನಿನ್ನೂ ಕೆಲಸ ಪೂರೈಸಲಿಲ್ಲವೆ ?

ಜಲಗಾರ

ಇಲ್ಲ,
ಕರ್ಮ ಮುಗಿಯುವ ಕಾಲ ಬಂದಿಲ್ಲವಿನ್ನೂ !
ಶಿವನ ಗುಡಿಯಿಂದೇನು ತಂದಿರುವೆ, ರೈತ ?

ರೈತ

ಜಲಗಾರ, ಪುಣ್ಯವಿಲ್ಲವೊ ನಿನಗೆ ! ಜಾತ್ರೆಯದು
ವೈಭವದ ಜಾತ್ರೆ ! ಜನವೇನು ! ಧನವೇನು !
ಆ ಗಲಭೆಯೇನು ! ನೋಟಗಳೊ ಬಹು ರಮ್ಯ !
ನಾನದನು ಹೇಳಿ ಮುಗಿಯಿಸಲಾರೆ.

ಜಲಗಾರ

ಇರಲಿಯದು.
ಶಿವನ ಗುಡಿಯಿಂದೇನು ತಂದಿರುವೆ ?

ರೈತ

ಆಹಾ !
ಶಿವನ ಗುಡಿ ದೊಡ್ಡ ಗುಡಿ ! ಏನು ಚಿತ್ರದ ಕೆಲಸ !

ವಿಗ್ರಹವು ಬಲುಚಂದ ! ಜೋಯಿಸರ ಮಡಿಪಂಚೆ –
ಜರತಾರಿಯಪ್ಪಾ! ಆ ಪರಿಯ ವೈಭವವ
ನಾನಂತು ನೋಡಿಲ್ಲ.

ಜಲಗಾರ

ಅದಂತಿರಲಿ, ರೈತ.
ಶಿವನ ಗುಡಿಯಿಂದೇನು ತಂದಿರುವೆ ? ಅದನು ಹೇಳು !

ರೈತ

ಹಳ್ಳಿಯ ಗಮಾರ ! ಮೇಲೂರ ಜಲಗಾರ !
ನಿನಗೇನು ಗೊತ್ತು ? ಆ ಅಂದ, ಆ ಚಂದ ?
ಆರತಿಯ ನೋಡಿದೆನು. ಗಂಟೆ ಜಾಗಟೆಗಳನು
ಬಾರಿಸಿದೆ. ಮಂತ್ರ ಹೇಳಿದರದನು ಕೇಳಿದೆ !
ಹಣ್ಕಾಯಿ ಮಾಡಿಸಿದೆ. ಕರ್ಪೂರ ಉರಿಸಿದೆ.
ಹರಕೆಯನು ಸಲ್ಲಿಸಿದೆ. ಮತ್ತೇನು ?

ಜಲಗಾರ

ಅದಂತಿರಲಿ.
ಶಿವನ ಗುಡಿಯಿಂದೇನು ತಂದಿರುವೆ, ಹೇಳು.

ರೈತ

ಹಣ್ಣು ಕಾಯಿ ಹೂವು ಕರ್ಪೂರ ಕುಂಕುಮ –
ಇವುಗಳನು ತಂದಿರುವೆ.

ಜಲಗಾರ

ಶಿವನ ತರಲಿಲ್ಲವೆ ?

ರೈತ

ಮರುಳು ಜಲಗಾರ, ನಿನ್ನೊಡನೆ ಮಾತೇಕೆ ?

(ರೈತನು ಹೋಗುತ್ತಾನೆ. ಒಬ್ಬ ಹಳ್ಳಿಯ ಹುಡುಗಿ ಜಾತ್ರೆಯಿಂದ ಹಿಂದಿರುಗಿ ಹಾಡುತ್ತಾ ಬರುತ್ತಾಳೆ.)

ಹುಡುಗಿ

ಕೈಯಲ್ಲಿ ತಿರುಳಿಲ್ಲ, ಮೈಯಲ್ಲಿ ಹುರುಳಿಲ್ಲ,
ಮನೆಯಲ್ಲಿ ಕಾಳಿಲ್ಲ, ಕೂಳಿಲ್ಲ!
ಅಪ್ಪ ನೋಡಲು ಜೋಗಿ, ಅವ್ವ ನೋಡಲು ರೋಗಿ,
ನನಗಂತು ಕಣ್ಣೀರು ಬಿಡುವಿಲ್ಲ!
ಕಾಳಿಲ್ಲ, ಕೂಳಿಲ್ಲ, ಕಣ್ಣೀರು ಬಿಡುವಿಲ್ಲ,
ಕಾಯಬಾರದೆ ಬಂದು ಕಾವೆನೆಂದಿಹ ಗೊಲ್ಲ!

ಇದ್ದಕ್ಕನೊಬ್ಬಳ ಸಿದ್ದಕ್ಕನೊಬ್ಬಳ
ರಕ್ಕಸ ಜವರಾಯ ಮುಕ್ಕಿದನು.
ಇದ್ದಣ್ಣನೊಬ್ಬನು ಮುದ್ದಣ್ಣನೊಬ್ಬನು
ದೇಶ ತಿರುಗಲು ಹೋಗಿ ಹಾಳಾದನು.
ನಮ್ಮ ಕಂಡರೆ ಕರುಬು ನೆರೆಯರಿಗೆಲ್ಲ,
ಕಾಯಬಾರದೆ ಬಂದು ಕಾವೆನೆಂದಿಹ ಗೊಲ್ಲ!

ದನವ ಕಾಯಲೊ ನಾನು, ಕಳೆಯ ಕೀಳಲೊ ನಾನು,
ನರಳುವ ಅವ್ವನ ಗತಿಯೇನು ?
ಹೇಳುವರಾರಿಲ್ಲ, ಕೇಳುವರಾರಿಲ್ಲ,
ದಿಕ್ಕಿಲ್ಲ, ಕೂಳಿಲ್ಲ, ಗತಿಯಿಲ್ಲ.
ಕವಿದ ಕತ್ತಲೆಯಲ್ಲಿ ಕಿರಣವೊಂದಿಲ್ಲ,
ಕಾಯಬಾರದೆ ಬಂದು ಕಾವೆನೆಂದಿಹ ಗೊಲ್ಲ!

ಹರಕೆಯ ಹೊತ್ತೆ, ಕಾಣಿಕೆ ತೆತ್ತೆ,
ದೇವರಿಗೆ ಶರಣೆಂದು ಬೇಸತ್ತೆ.
ಕಂಡ ಕಂಡ ಕಲ್ಲಿಗೆ ಕೈಮುಗಿದು ಸೋತೆ,
ನನಗಿನ್ನೂ ತಪ್ಪದು ಈ ರೋತೆ.
ಅಯ್ಯೊ ಗೋವಿಂದನೆ, ಬಲ್ಲೆ ನೀನೆಲ್ಲ,
ಕಾಯಬಾರದೆ ಬಂದು ಕಾವೆನೆಂದಿಹ ಗೊಲ್ಲ!

(ಹಾಡುತ್ತಾ ಹೋಗುತ್ತಾಳೆ. ಪಾರ್ವರು ಹರಟುತ್ತಾ ಬರುತ್ತಾರೆ.)

ಮೊದಲನೆಯ ಪಾರ್ವ

ಇಂದಾದ ಲಾಭವೇ ಲಾಭ.

ಎರಡನೆಯ ಪಾರ್ವ

ನನಗಂತು
ದಕ್ಷಿಣೆಯ ಹಬ್ಬ : ಹಣ್ಣುಕಾಯಿನ ದುಡ್ಡು,
ತೀರ್ಥ ಮಾರಿದ ದುಡ್ಡು –

ಮೊದಲನೆಯ ಪಾರ್ವ

ನಾನೊಬ್ಬ ಶೂದ್ರನನು
ಸುಲಿಗೆ ಮಾಡಿದ ದುಡ್ಡು –

ಎರಡನೆಯ ಪಾರ್ವ

ಅಂತೂ ನಮಗೆಲ್ಲ ಶಿವಗುಡಿಯ ದೆಸೆಯಿಂದ
ಹಿಟ್ಟು ಹೊಟ್ಟೆಗೆ, ದುಡ್ಡು ಬಟ್ಟೆಗೆ –

ಮೊದಲನೆಯ ಪಾರ್ವ

ಗುಟ್ಟು ಬಿಟ್ಟರೆ ಕೆಟ್ಟೆ. ನಡೆ ಬೇಗ. (ಹೋಗುತ್ತಾರೆ)

ಜಲಗಾರ

ಜೋಯಿಸರು
ಗುಡಿಯ ನುಗ್ಗುವ ಮುನ್ನವೇ ಶಿವನ ಹೊರಗಟ್ಟಿ
ನುಗ್ಗುವರು. ಶಿವಶಿವಾ ಗುಡಿಯೊಳಿದ್ದರು ಕೂಡ
ದೇವರಿಂದತಿ ದೂರವಿಹ ಪಾಪಿಯೆಂಥವನು ?

(ಕಬ್ಬಿಗನೊಬ್ಬನು ಹಾಡುತ್ತಾ ಬರುತ್ತಾನೆ)

ಕಬ್ಬಿಗ

ಕೊರಗಲೇಕೆ ? ಮರುಗಲೇಕೆ ?
ಹುಟ್ಟಿ ಬಂದಿಹೆ, ಹಳಿಯಲೇಕೆ ?

ಸುಖವೆ ಬರಲಿ ದುಃಖ ಬರಲಿ,
ರೋಗ ಭೋಗಗಳೇನೆ ಬರಲಿ,
ಎಲ್ಲ ಹೊತ್ತು ಋಣವ ತೆತ್ತು
ಮುಂದೆ ಪುಣ್ಯದ ಬೀಜ ಬಿತ್ತು.
ಕೊರಗಲೇಕೆ ? ಮರುಗಲೇಕೆ ?
ಹುಟ್ಟಿದಿಳೆಯನು ಹಳಿಯಲೇಕೆ ?

ಕೊರಗಲೇನು ? ಮರುಗಲೇನು ?
ಬಿಗಿದ ಬಂಧನ ಹರಿವುದೇನು ?
ಸುಖವೆ ಬರಲಿ, ದುಃಖ ಬರಲಿ,
ಜೀವದೆಡರುಗಳೇನೆ ಇರಲಿ,
ಭಕ್ತಿಯಿಂದ ಶಕ್ತಿಯಿಂದ
ಮುಕ್ತಿಗೇರು ಧೈರ್ಯದಿಂದ.
ಕೊರಗಲೇಕೆ ? ಮರುಗಲೇಕೆ ?
ಬಂದ ಬಾಳನು ಹಳಿಯಲೇಕೆ ?

ಕೊಡುವನವನು, ಬಿಡುವನವನು,
ಎಂದು ನೀನಿರೆ ಸುಡುವನವನು.
ಗೆಲುವೆ ಬರಲಿ, ಸೋಲೆ ಬರಲಿ,
ನುಗ್ಗು ಮುಂದಕೆ ಇರುವುದಿರಲಿ.

ಅರಿಯ ಕೊಲ್ಲು, ತಿರೆಯ ಗೆಲ್ಲು;
ಇಲ್ಲ, ರಣದಲಿ ಜವಗೆ ಸಲ್ಲು.
ಕೊರಗಲೇಕೆ ? ಮರುಗಲೇಕೆ ?
ಬಂದುದಾಯಿತು ಹಳಿವುದೇಕೆ?

ನಮ್ಮ ಬಾಳು ಸವಿಯ ಬಾಳು :
ಯಾವುದಿಲ್ಲಿ ಕಡಿಮೆ ಹೇಳು ?
ತಿಳಿಯ ಬಾನು, ಹೊಳೆವ ಮೀನು,
ಸೂರ್ಯಚಂದ್ರರು, ಬೆಟ್ಟ, ಕಾನು,

ಹರಿವೆ ತುಂಗೆ, ದಿವಿಜ ಗಂಗೆ ;
ಹಾಲು ಮಳೆಯಿದೆ ಬರವ ಪಿಂಗೆ.
ಕರುಣೆಯೊಲ್ಮೆ ಎಲ್ಲ ಇಲ್ಲಿ!
ಯಾವುದೆಮಗೆ ಕಡಿಮೆ ಇಲ್ಲಿ?
ಕೊರಗಲೇಕೆ ? ಮರುಗಲೇಕೆ ?
ಬಂದ ಬದುಕನು ಬೈಯಲೇಕೆ ?
  ಒಲಿದು ಕೂಡಿ, ನಲಿದು ಹಾಡಿ,
  ನಮ್ಮ ಪಡೆದವನಂತೆ ಆಡಿ,
ಪರವ ನಾವು ಪಡೆವ ಮುನ್ನ
ಪಡೆಯಲೆಳಸುವ ತಿರೆಯ ಹೊನ್ನ!
ಕೊರಗಲೇಕೆ ? ಮರುಗಲೇಕೆ ?
ಬರಿದೆ ಬಾಳನು ಜರೆವುದೇಕೆ ?

(ಕಬ್ಬಿಗನು ತೆರಳುತ್ತಾನೆ. ಒಂದು ಬಾಲಕರ ಗುಂಪು ಹಾಡುತ್ತಾ ಬರುತ್ತದೆ.)

ಬಾಲಕರು

ನಾವು ಮರುಳರು, ನಾವು ಕುಡುಕರು,
                    ಮರುಳುತನವೆಮ್ಮಾಟವು,
ಕಾರ್ಯವಿಲ್ಲದೆ ಬರಿದೆ ಸಂಚರಿಪಲಸಗಾರರ ಕೂಟವು.
ಕಾಲಗಗನದಿ ಹಾರಿಯಾಡುವ ಹಕ್ಕಿಗಳು ನಾವ್ ಬಾಲರು.
  ಹೋಗಲೆಂದೇ ಬರುವೆವು,
  ಹೋಗಿ ಮರಳೈತರುವೆವು !
ನಿತ್ಯತೆಯ ಗರ್ಭದಲಿ ಜನಿಸುವ ನಾವು ಲೀಲಾಶೀಲರು :
'ಕರ್ಮಲೀಲೆಯು, ಲೀಲೆ ಕರ್ಮವು' ಎಂಬುದೆಮ್ಮಯ ಧರ್ಮವು ;
  ಪಡೆವುದೆಮಗೇನಿಲ್ಲವು,
  ಕಳೆವುದೆಮಗೇನಿಲ್ಲವು,
'ಲಾಭನಷ್ಟಗಳೊಂದುಮಿಲ್ಲವು' ಎಂಬುದೇ ವರಮರ್ಮವು.

ಹಾಡಿಯಾಡುತ ಕುಣಿದು ನಲಿವೆವು ಹಾಸ್ಯ ಮಾಡುತ ಕಾಲನ !
ಜವನ ಮೀಸೆಯನೆಳೆವೆವು !
ಕೋರೆದಾಡೆಯ ಸೆಳೆವೆವು !
ಅಮೃತಪುತ್ರರು ನಾವು, ಮೃತ್ಯುವ ಲಕ್ಷವೆಮಗಿನಿತಿಲ್ಲವು !
ಮುಕ್ತಜೀವರು ನಾವು, ಬಂಧನಲೀಲೆಯಾಡುತಲಿರುವೆವು.
ಲೀಲೆಯೆಂಬುದೆ ಮುಕ್ತಿಯು,
ಮರುಳುತನವೇ ಶಕ್ತಿಯು ;
ಹೀರಿ ಲೀಲಾಮಧುವನೆಲ್ಲರು ಮತ್ತರಾಗಿಯೆ ಬರುವೆವು.

(ಅವರೆಲ್ಲ ಹಾಡುತ್ತಾ ಹೋಗುತ್ತಾರೆ. ಜನರು ಗುಂಪುಗುಂಪಾಗಿ ಹೋಗುತ್ತಾರೆ. ಜಲಗಾರನು ಒಬ್ಬನೆ ಕುಳಿತುಕೊಳ್ಳುತ್ತಾನೆ.)

ಜಲಗಾರ

ಸದ್ದಿಲ್ಲದಿರುಳೆನಿತು ಕಣ್ಸೆತ್ತವಾಗಿಹುದು !
ಬನಗಳಂ ಗಿರಿಗಳಂ ಹೊಳೆತೊರೆಗಳೆಲ್ಲಮಂ
ಚುಂಬಿಸಿಹ ಜೊನ್ನೆನಿತು ಚೆಲ್ವಾಗಿದೆ !
ಬೆಳ್ದಿಂಗಳೆಂತು ಮಲಗಿಹುದಿಳೆಯೆದೆಯ ಮೇಲೆ !
ಗಗನ ಧೇನುವ ಕೊರಳ ಗಂಗೆದೊವಲಂದದಲಿ,
ತಿಂಗಳಿನ ಪಾಲ್ಗಡಲ ಬಲ್ದೆರೆಗಳಗ್ರದಲಿ
ತೇಲುತಿಹ ನೊರೆಯುರುಳಿಯಂದದಲಿ, ಒಲಿದವನ
ಸವಿಗನಸಿನಲಿ ಸುಳಿವ ನಲ್ಲೆಯಂಚಲದಂತೆ,
ಮೆರೆಯುತಿದೆ ತಿಳಿಯಾಳದಾಗಸದಿ ಬೆಳ್ಮುಗಿಲ್ !
ವಿಶ್ವದ ಸುಷುಪ್ತಿಯಿದು. ಕುಳಿತಿಲ್ಲಿ ಶಿವನಂ
ಧ್ಯಾನಿಸುವೆ. ಸದ್ದಿಲ್ಲದೇಕಾಂತದಲ್ಲಿಯೇ
ಭಕ್ತಿಲತೆ ಚಿಗುರಿ ಪರಮಾತ್ಮನಡಿಯಲರುಗಳ
ಮುಟ್ಟುವುದು – ಲೋಕವರಿಯದು ಸಿದ್ಧರೆನಿತಿಹರು
ಜಲಗಾರರಾಗೆಂದು. (ಹಾಡುತ್ತಾನೆ)

ದಯಾ ನಿವಾಸ ನೀನು,
ದೇವ ದೇವ ಮೈದೋರೈ ;

ಸದಾ ಪಿತಾಜಿ ನೀನು,
    ಬಾಲ ನಾನು ಕಾಪಾಡೈ.
ಪುರಾಣ ಆದಿ ವೇದ ಯಾಗ ದಾನ
    ಮತಾಚಾರಾದಿ ಚಾಗಯೋಗ ಧ್ಯಾನ
ಅಕರ್ಮ ಕರ್ಮ ಧರ್ಮ
    ದಾಸದಾಸ ನಾನರಿಯೆ ;
ಎನ್ನಂತರಂಗ ನೀನೆ
    ಎಂಬುದೊಂದೆ ಬಲ್ಲೆನೈ !

ಗಯಾ ಪೂರಿ ಕಾಶಿಯಾತ್ರೆ ಜಾತ್ರೆ
    ನಾನೊಂದನೊಲ್ಲೆ; ನೀನೆ ಎಲ್ಲ ದೇವ !
ಅನಾದಿ ದೇವ ನಿನ್ನ
    ಸೇವೆಯೊಂದೆ ಸಾಕೆನಗೆ !
ಎನ್ನಂತರಂಗದಲ್ಲಿ
    ನಿಂತು ನೀನು ಮೈದೋರೈ !

(ಹಠಾತ್ತಾಗಿ ಶಿವನು ಜಲಗಾರನ ವೇಷವನ್ನು ಧರಿಸಿ ಮೈದೋರುತ್ತಾನೆ.)

ನೀನಾರು ಆಕೃತಿಯೆ ! ನೀನಾರು ? ಯಾರು ?
ಮಾನುಷವಾಗಿ ಕಂಡರೂ ಅಮಾನುಷವಾಗಿ
ತೋರುತಿಹೆ ! ಮಿಣುಕುತಿಹ ತಾರೆಗಳನೇಳಿಸುವ
ಕಂಗಳಿಂದೇಕೆನ್ನ ನೋಡುತಿಹೆ ಇಂತು ?
ನೀನಾರು ? ನೀನಾರು ಆಕೃತಿಯೆ ? (ಬೆದರುತ್ತಾನೆ)

ಶಿವ

(ಗಂಭೀರವಾಗಿ)

ಅಂಜದಿರು,
ಸೋದರನೆ, ಅಂಜದಿರು ; ನಾ ನಿನ್ನ ಬಂಧು !

ಜಲಗಾರ

(ವಿಸ್ಮಿತನಾಗಿ)

ಏನು ? ನೀನೆನ್ನ ಬಂಧು ? ನಾನರಿಯದಿಹ ಬಂಧು !

ಶಿವ

ನಾ ನಿನ್ನ ಜಾತಿ !

ಜಲಗಾರ

ನೀನೆನ್ನ ಜಾತಿ ?
ಊರ ಜಲಗಾರ ನಾನು !

ಶಿವ

ನಾನೊಬ್ಬ ಜಲಗಾರ.
ಅಂಜದಿರು, ಸೋದರನೆ ! ಜಗದ ಜಲಗಾರ
ನಾನು ! ಶಿವನೆಂದು ಕರೆಯುವರು ಎನ್ನ !
ಚಣಚಣಕು ಜಗದ ಪಾಪವ ನುಂಗುವನು ನಾನು !
ಪೂರ್ವದಲಿ ಕಡಲ ಕಡೆಯಲು ಹುಟ್ಟಿ ಸೃಷ್ಟಿಯಂ
ಸುಡುತಿರ್ದ ಘೋರ ಹಾಲಾಹಲವ ನುಂಗಿದಾ
ನಂಜುಗೊರಲನು ನಾನು ! ಪದ್ಮನಾಭನ ನಿಲಯ
ವೈಕುಂಠವದರಿಂದ ರಮಣೀಯವಾಗಿಹುದು !
ಮೇಣೆನ್ನ ಜಲಗಾರತನದಿಂದ, ಸೊದೆಯೀಂಟಿ
ಅಮರರಮರತೆಯ ಹೊಂದಿಹರು ; ವಿಶ್ವದಲಿ
ಸೌಂದರ್ಯ ಬಾಳುತಿದೆ. ತೊಳಗುತಿಹ ಚುಕ್ಕಿಗಳು,
ಬೆಳಗುತಿಹ ಚಂದಿರನು, ದಿನದಿನವು ತಳತಳಿಸಿ
ಬಾಂದಳದಿ ಸುತ್ತುತಿಹ ದಿನಮಣಿಯು, ಭೋರ್ಗರೆವ
ಕಡಲುಗಳು, ತಿಳಿಯಾಗಿ ಹರಿಯುತಿಹ ಹೊಳೆಗಳು,
ಮೆರೆಯುವ ಅರಣ್ಯಗಳು, ಎಲ್ಲವೂ, ಎಲ್ಲವೂ
ಜಲಗಾರನೊಬ್ಬನಿಗೆ ಋಣಿಯಾಗಿ ಬಾಳುತಿವೆ !
ರುದ್ರನೆಂಬರು ಎನ್ನ ; ಶಿವನೆಂಬರೆನ್ನ ;
ಹೇಸುವರು, ಅಂಜುವರು, ಜಲಗಾರನೆನಲು !

ಜಲಗಾರ

(ವಿನಯದಿಂದ)

ನಿನ್ನನಾ ಶಿವನೆಂದು ನಂಬುವುದದೆಂತು ? ಹೇ ದೇವ,
ನಿನ್ನೀ ರೂಪಮಂ ನಾನೆಂದುಮಾವೆಡೆಯೊಳುಂ
ಕಂಡರಿಯೆ, ಕೇಳರಿಯೆ, ತಿಳಿದವರು, ಪಂಡಿತರು,
ಬೇರೊಂದು ರೀತಿಯಲಿ ಬಣ್ಣಿಸಿರುವರು ನಿನ್ನ.

ಶಿವ

ಬಿಜ್ಜವಳರಾ ಕವಡು ಬಣ್ಣನೆಯ ನಂಬದಿರು,
ಸೋದರನೆ. ಕುರುಡನಾದವನಿನನ ಬಣ್ಣಿಸುವ
ತೆರದಿ, ಪಂಡಿತರು ಬಣ್ಣಿಪರು, ಕಲ್ಪನೆಯ
ಶಿವನ. ನನ್ನ ನಿಜರೂಪಮಂ ನೋಡಲವರೆಲ್ಲ
ಹೇಸುವರು, ಬೆದರಿ ಹಿಂಜರಿಯುವರು. ಎನ್ನನೀ
ನಿಜರೂಪದಿಂದ ಕರ್ಮದಲಿ ಪೂಜಿಪನು
ನೀನೊಬ್ಬನಲ್ಲದಿನ್ನಾರ ನಾ ಕಾಣೆ !

ಜಲಗಾರ

(ಕೈಮುಗಿದು)

ರಜತಗಿರಿಗೊಡೆಯನಾಗಿಹೆಯಂತೆ ; ಕೈಲಾಸ
ಪತಿಯಂತೆ ; ಮಕುಟದಲಿ ಹಿಮಕರನ ತೊಟ್ಟಿರುವ
ಶಶಿಧರನು ನೀನಂತೆ. ಜಡೆಯೊಡೆವೆ ಗಂಗೆಯಾ-
ಗಿಹಳಂತೆ. ಕೊರಳಿನಲಿ ಹಾವುಗಳ ಕಟ್ಟಂತೆ.
ಹಣೆಯಲ್ಲಿ ಉರಿಗಣ್ಣನುಳ್ಳ ನೀಂ ಮುಕ್ಕಣ್ಣ
ನಂತೆ ! ಗಿರಿಜಾರಮಣನಂತೆ ! ವಿಷಕಂಠ
ನೀನಂತೆ ! ನೀಂ ಕುಬೇರನ ಮಿತ್ರನಂತೆ !
ಇಂತಿಹನು ಜಗದ ಜಲಗಾರನಹನೆಂತು ?
ಇಂತಿಹನೆನ್ನ ಬಾಂಧವನೆ ? ಸೋದರನೆ ?

ಶಿವ

(ಮುಗುಳುನಗೆಯಿಂದಲೂ ದರ್ಪದಿಂದಲೂ)

ಸೋದರನೆ, ಶಿವನು ಶಾಸ್ತ್ರಗಳ ಶಿವನಲ್ಲ!
ಕಾವ್ಯಗಳ ಶಿವನಲ್ಲ! ಕವಿತೆಯಾ ಶಿವನಲ್ಲ!
ಬೆಳ್ಳಿಬೆಟ್ಟದ ಮೇಲೆ ಗಿರಿಜೆಯೊಡಗೂಡಿ
ಸರಸವಾಡುವ ರಸಿಕ ಶಿವನಲ್ಲ! ಬ್ರಹ್ಮಾಂಡ
ಒತ್ತುತಿಹ ಕಸದ ರಾಸಿಯ ಮೇಲೆ ಹತ್ತಿ,
ನಿಂತು, ನರ್ತನವೆಸಗುತಿಹ ತೋಟಿ ನಾನು!
ನಿಜಶಿವನು ಜಲಗಾರ! ನಿನ್ನ ಮುಂದಿಹನು, ನೋಡು!

ಜಲಗಾರ

ಹೇ ದೇವ, ಪಂಡಿತರದೇಕಂತು ಬಣ್ಣಿಪರು?

ಶಿವ

ಸೋದರನೆ, ಶಾಸ್ತ್ರಗಳ ಕಂಗಳಿಗೆ ನಾನು
ನೋಡಲು ಕುರೂಪಿಯಾಗಿದ್ದೆ. ಆದರಿಂದ
ಚೆಲ್ವಾಂತ ತಣ್ಗದಿರನೊಡವೆ ಮಾಡಿದರೆನಗೆ!
ಅವರ ಭಾಗಕೆ ನಾನು ಪಾಪಿಯಾಗಿದ್ದೆ.
ಆದರಿಂದ ಗಂಗೆಯನು ತೊಡಿಸಿದರು ತಲೆಯಲ್ಲಿ,
ತೊಳೆದೆನ್ನ ಶುದ್ಧಮಾಡಲು ಎಂದು! ಅಸ್ಪೃಶ್ಯನ್
ಆಗಿದ್ದೆ! ಆದರಿಂದ ಹಣೆಗಣ್ಣು ಮುಡಿಸಿದರು.
ಸುಟ್ಟೆನ್ನ ಶುಚಿಮಾಡಲೆಂದು! ರೌದ್ರತೆಯನ್
ಈಯಲೆಂದೆನಗೆ ಉರಗಗಳ ಸುತ್ತಿದರು
ಕೊರಳಲ್ಲಿ. ಜೋಯಿಸರ ಭಾಗಕ್ಕೆ ಶಿವನು
ಮುಟ್ಟದವನಾಗಿಹನು. ಚಂದ್ರನಿಲ್ಲದೆ, ಗಂಗೆ
ಇಲ್ಲದೆಯೆ, ಹಣೆಗಣ್ಣು ಹಾವುಗಳು ಇಲ್ಲದೆಯೆ,
ಜನಿವಾರ ಬೂದಿಗಳು ಇಲ್ಲದೆಯೆ, ಶಿವಗುಡಿಗೆ

ಸೇರಿಸರು ಶಿವನಾದ ಎನ್ನ. ಅದರಿಂದ
ನಿಜವಾದ ಶಿವನು, ಜಲಗಾರ ಶಿವನು,
ಶಿವಗುಡಿಯ ಪೀಠದಲಿ ಎಂದೆಂದಿಗೂ ಇಲ್ಲ!

ಜಲಗಾರ

ಹೇ ದೇವ, ನೀನು ಮತ್ತೆಲ್ಲಿರುವೆ ?

ಶಿವ

ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ !
ಉಳುತಿರುವ ಒಕ್ಕಲಿಗನೆಡೆಯಲ್ಲಿ ನಾನಿರುವೆ !
ಎಲ್ಲಿ ಹೊಲೆಯನು ನನ್ನ ಕಾರ್ಯದಲಿ ತೊಡಗಿಹನೊ
ಅಲ್ಲಿ ನಾನವನ ಪಕ್ಕದೊಳಿರುವೆ, ಕುಂಟರನು,
ಕುರುಡರನು, ದೀನರನು, ಅನಾಥರನು ಕೈಹಿಡಿದು
ಪೊರೆಯುತಿಹನೆಡೆಯಿರುವೆ. ಆ ನನ್ನ ಭಕ್ತರಿಗೆ
ನನ್ನ ನಿಜರೂಪದಿಂ ಮೈದೋರಿ ಸಲಹುವೆನು.
ನೀನೆನ್ನ ನಿಜಭಕ್ತನಾಗಿರುವೆ. ಅದಕಾಗಿ
ಕಲ್ಪನೆಯ ರೂಪವನು ತೆಗೆದೊಗೆದು ಬಂದಿಹೆನು.
ನೋಡಲ್ಲಿ! ಚಂದ್ರನಂ ಬಿಸುಟಿಹೆನು ಗಗನಕ್ಕೆ !
ಗಂಗೆಯನ್ನೆಸೆದಿಹೆನು ಹಿಮಗಿರಿಗೆ ! ಹಾವುಗಳ
ಪಾತಾಳಕಟ್ಟಿಹೆನು ! ಹಣೆಗಣ್ಣ ಹಂಚಿಹೆನು
ನೇಸರ್ ಅರಿಲ್ಗಳಿಗೆ ! ಭಯಂಕರದ ಮಸಣದಲಿ
ಬಿದ್ದಿಹುದು ಜೋಯಿಸರು ಹಚ್ಚಿದಾ ಎನ್ನ
ಮೈಬೂದಿ ! ಚಟ್ಟಗಳ ಕಟ್ಟುತ್ತಿದೆ ಅವರೆನಗೆ
ತೊಡಿಸಿದಾ ಯಜ್ಞೋಪವೀತ ! ಅವರಿತ್ತ
ಪೊರಕೆಯಂದದ ಶೂಲ ಗುಡಿಸುತಿದೆ ಬ್ರಹ್ಮಗಳ
ಬೀದಿಯನು ! ಶಾಸ್ತ್ರಿಗಳು ಶಿವಗಿತ್ತ ದಾನಗಳು
ತೊಲಗೆ, ಉಳಿಯುವನು ಜಗದ ಜಲಗಾರ !
ಊರ ತೋಟಿಯು ನೀನು ; ಜಗದ ತೋಟಿಯು ನಾನು !
ಬಾ ಎನ್ನ ಸೋದರನೆ, ನೀನೆನ್ನ ನಿಜಭಕ್ತ !

ನಿನ್ನದೇ ಶಿವಭಕ್ತಿ! ನೀನೇ ಶಿವಭಕ್ತ!
ನೀನೆ ನಾನಾಗಿಹೆನು ! ನಾನೆ ನೀನಾಗಿರುವೆ !
ಶಿವ ನೀನು ! ಶಿವ ನೀನು !

ಜಲಗಾರ

(ಭಾವವಶನಾಗಿ)

ಶಿವ ನಾನು ! ಶಿವ ನಾನು !

(ಮುಂಬರಿದು ಶಿವನ ತೆಕ್ಕೆಯೊಳಗಾಗುತ್ತಾನೆ.)

ಪರದೆ

ಶೂದ್ರ ತಪಸ್ವಿ

ಪಾತ್ರಗಳು

ಬ್ಯೆರವ

ಮೃತ್ಯು

ಬ್ರಾಹ್ಮಣ

ಶ್ರೀರಾಮ

ದೃಶ್ಯ ೧

[ಶಂಬೂಕಾಶ್ರಮಪಿರುವ ಅರಣ್ಯದ ಬಹಿರ್ವಲಯದಲ್ಲಿ ಆಶ್ರಮದ ಮಹಾದ್ವಾರದಲ್ಲಿ ಕಾವಲು ನಿಂತಿರುವಂತಿದೆ ಒಂದು ಬೃಹದಾಕಾರದ ವಟತರು. ಶಾಂತಿಗೆ ತವರುವೀಡಾಗಿದ್ದ ಆ ವನವು, ನೋಡೆ ನೋಡೆ, ಕ್ಷುಬ್ಧಶೀಲವಾಗುತ್ತದೆ. ಬಲ್ಗಾಳಿ ಬೀಸಿ, ಹಕ್ಕಿ ಚೀರಿಡುತ್ತವೆ. ಕೊಂಬೆಗೆ ಕೊಂಬೆ ಉಜ್ಜಿ ಆರ್ತಧ್ವನಿಯನ್ನು ಹೋಲುವ ಚೀತ್ಕೃತಿಗಳುಣ್ಮುತ್ತವೆ. ಮೃಗತತಿ ಗಾರಾಗಿ ದೆಸೆದೆಸೆಗೆ ಓಡುತ್ತವೆ. ದೃಷ್ಟಿಗೆ ಕೇಂದ್ರವಾಗಿ, ದೃಶ್ಯದ ಮುಂಭಾಗದಲ್ಲಿರುವ ಆ ಮಹಾ ವಟತರುವೂ ಕ್ಷೋಭೆಗೆ ಸಿಕ್ಕಿ ಅಸ್ಥಿರವಾಗುತ್ತದೆ. ಎಲೆ ಬಳಬಳನೆ ಉದುರುತ್ತವೆ. ಬಲ್ಗಾಳಿಗೆ ಧೂಳೆದ್ದು ಇದ್ದಕ್ಕಿದ್ದಂತೆ ವನವೆಲ್ಲವೂ ಮಸುಕಾಗುತ್ತದೆ. ವಟತರುವೂ ಮಂಜು ಮಂಜಾಗಿ, ಮಾಯವಾದಂತಾಗಿ, ಅದರ ಸ್ಥಾನದಲ್ಲಿ, ಒಯ್ಯೊಯ್ಯನೆ ಆ ಮರದನಿತೆ ಭೀಮಾಕಾರನಾದ ಒಬ್ಬ ವೃಕ್ಷಭೈರವನು ದೃಗ್ಗೋಚರವಾಗುತ್ತಾನೆ. ತರುಶಾಖೆಗಳಂತಿರುವ ಬಹುಸಂಖ್ಯೆಯ ತೋಳುಗಳಲ್ಲಿ ತ್ರಿಶೂಲಾಯುಧ ಪಂಕ್ತಿ ಸಾಲ್ಗೊಂಡು ಸೇನಾವ್ಯೂಹದಂತೆ ಭಯಂಕರವಾಗುತ್ತದೆ. ಕ್ರುದ್ಧನೆಂಬಂತೆ ಬದ್ಧಭ್ರುಕುಟಿಯಾಗಿ ಉರಿಗಣ್ಣನ್ನು ಸುತ್ತಲೂ ಹೊರಳಿಸಿ ನೋಡುತ್ತಾನೆ. ತನಗೆ ತಾನೆಂಬಂತೆ ಮೊಳಗುತ್ತಾನೆ.]

ಭೈರವ

ಏನವಿನಯಂ ಇಂದೀ ಪ್ರಕೃತಿ ಸಾಧ್ವಿಗೆ !
ಉಗ್ರಧೀ ಶಂಬೂಕಯೋಗಿಯಂ ಲೆಕ್ಕಿಸದೆ,
ವೃಕ್ಷಭೈರವನೆನ್ನ ರಕ್ಷೆಯಂ ಕಡೆಗಣ್ಚಿ,
ಅಂಡಲೆಯುತಿಹಳೀ ತಪೋವಿಪಿನಮಂ.
ಮಥನಕರ್ಮಕೆ ಸಿಲ್ಕಿದಂಬುಧಿಯ ತೆರೆಯವೋಲ್
ತರತರನೆ ನಡುಗುತಿದೆ ಕಾಡುಮಲೆ. ಒರಲುತಿವೆ
ಪಕ್ಷಿಗಳ್. ಕೀಚಕಧ್ವಾನಗಳ್ ಕರ್ಕಶಂ
ಕೂಗುತಿವೆ. ಕಾಲ್ಗಿಟ್ಟುವೋಡುತಿವೆ ಮೃಗಸಮೂಹಂ.
ಏಂ ನಿಮಿತ್ತಮೊ ಪರಿಕಿಸಲ್ವೇಳ್ಕುಂ.
ಧೂರ್ತಳೀ ದುಷ್ಕೃತಿಗೆ ಶೃಂಖಲೆಯನಿಕ್ಕದಿರೆ
ತಪಸ್ವಿಯಾಗ್ರಹಕೆ ಪಕ್ಕಾದಪೆನ್.

[ಪುತ್ತ ಸುತ್ತಲೂ ನೋಡಿ ಧ್ಯಾನಿಸುತ್ತಾನೆ. ತೆಕ್ಕನೆಚ್ಚತ್ತವನಂತೆ ಇದಿರು ನೋಡಿ ಅಧಿಕಾರವಾಣಿಯಿಂದ ಆಜ್ಞಾಪಿಸುತ್ತಾನೆ.]

ನಿಲ್ ನಿಲ್ ! ಅಲ್ಲಿಯೆ ನಿಲ್ !
ಹತ್ತೆ ಸಾರದಿರ್ ! ಅತ್ತಲ್ ತೊಲಗತ್ತಲ್ ! ಅತ್ತಲ್ !

[ನೋಡುತ್ತಿರುವಂತೆಯೆ ಏನೂ ಇಲ್ಲದೆ ಶೂನ್ಯವಾಗಿದ್ದ ಬಯಲು ನಸುಗಪ್ಪಾಗುತ್ತದೆ. ಕರಿಮಂಜು ದಟ್ಟಯಿಸುತ್ತದೆ. ಬರಬರುತ್ತಾ ಗಟ್ಟಿಯಾಗುತ್ತದೆ. ಕಡೆಗೆ ಮೃತ್ಯುವಿನ ಕರಾಳಾಕೃತಿ ರೂಪುಗೊಂಡು ಸ್ಪಷ್ಟಾಸ್ಪಷ್ಟವೆಂಬಂತೆ ನಿಲ್ಲುತ್ತದೆ.]

ಆರ್ ನೀನ್! ನಿನಗೇನಿಲ್ಲಿ ಕಜ್ಜಂ, ಘೋರಮುಖಿ?

ಮೃತ್ಯು

[ಭಯಂಕರ ಧ್ವನಿಯಿಂದ]

ಪೆಸರ್‌ಗೇಳ್ವ ಕೆಚ್ಚೆರ್ಪುದೇನ್ ನಿನಗೆ?

ಭೈರವ

[ಉಗ್ರನಾಗಿ]

ಇರ್ಪುದರಿಂದಲೆ ಕೇಳ್ದೆನ್, ವಿಕೃತವದನೆ,
ಅಧಿಕಪ್ರಸಂಗಿಯಾಗದಿರ್ !

ಮೃತ್ಯು

ನನ್ನ ನಾಮಶ್ರವಣಮಾತ್ರದಿಂ
ತನ್ನ ಗವಿಗೊರಲ್ಗಳಿಂದೊರಲ್ವುದಯ್ ನರಕಂ;
ಗಿರಿಗಹ್ವರಗಳಿಂ ರೋದಿಸುವುದೀ ಪೃಥ್ವಿ;
ಬೆಬ್ಬಳಿಸಿ ಬೆಳ್ಪೇರ್ವುದಯ್ ಸಗ್ಗದ ಮೊಗಂ.
ಪೆಸರ ಭೀತಿಗೆ ಬೆರ್ಚಿ ಕಂಪಿಪುದೊ ಮೂಜಗಂ !

ಭೈರವ

ನಿನಗಂಜದಾನ್ ನಿನ್ನಾ ಪೆಸರ್ಗಳ್ಕುವೆನೆ?
ಪೇಳ್ ಬೇಗದಿಂದಲ್ಲದಿರೆ ನೀನಿನ್ನೆಗಂ
ಕಾಣದನುಭವವನುಣ್ಣೆಪೆನ್ !

ಮೃತ್ಯು

ಆ ಗರ್ವಮಿರ್ಕೆ. ಕೇಳ್:
ಮೃತ್ಯುವೆನ್ । ದುರ್‌ಮೃತ್ಯುವೆನ್!
ಪುಗಲ್ ಬಯಸಿ ಬಂದಿರ್ಪೆನ್
ಈ ತಪೋವನಕ್ಕೆ !

ಭೈರವ

[ವಿಕಟಹಾಸ್ಯದಿಂದ ನಕ್ಕು]

ಕೆಟ್ಟುದಾವುದವ್ ನಿನಗೀಗಳ್ ?

ಬಟ್ಟೆಯೊ ಬಗೆಯೊ ?

ಮೃತ್ಯು

ನೀನಾರ್ ಕೇಳಲ್ಕೆ ?

ಭೈರವ

ತಪೋವನಮಂ ರಕ್ಷಿಪ್ಪ ವೃಕ್ಷಭೈರವನೆನ್ !-
ಅಮೃತಮಿಾ ಕ್ಷೇತ್ರಮ್:
ನಿನಗಿದು ದಿಟಂ ಪುಗಲ್ ತಾಣಂ !

ಮೃತ್ಯು

ಮೂಲೋಕದೊಳ್ ಮಿಾಸೆವೊತ್ತನನ್ ಕಾಣೆನ್
ನನ್ನನ್ ತಡೆವ ಗಂಡನನ್ !
ನೀನ್ ತಡೆವಯ್, ವೃಕ್ಷವಾಸಿ?

ಭೈರವ

[ಕಟುಹಾಸ್ಯದಿಂದ]

ಆಃ! ಮಾಚೆಲ್ವುಪೆಣ್ಣಲ್ತೆ ನೀನ್?
ನಿನಗೆ ಸೋಲದರುಂಟೆ?-ಆದೊಡಂ ಕೇಳ್.
ಮಹರ್ಷಿ ಶಂಬೂಕನುಜ್ವಲ ತಪಃಪ್ರಭಾವದಿನ್
ನನಗೆ ಲಭಿಸಿರ್ಪೊಂದು ಕರ್ತವ್ಯ ಧರ್ಮಬಲದಿಂ
ನಿನ್ನನ್, ಒರ್ ಪಜ್ಜೆ ಮುಂದಿಡದವೊಲ್,
ತಡೆಗಟ್ಟಲ್ ಆನ್ ಸಮರ್ಥನೆನ್.
ಮಿಾರಿ ಮುಂಬರಿಯಲೆಳಸಿದರೆ
ಈ ನನ್ನ ತೋಳ್ಗಳೀ ತ್ರಿಶೂಲ ಪಂಕ್ತಿಗಳ್,
ತೋಳಗಳ್ ಕುರಿಯನ್ ಅರೆಯಟ್ಟುವೋಲ್,
ಅಟ್ಟುವುವು ನಿನ್ನಾಲಯಕೆ ನಿನ್ನನ್!

ಮೃತ್ಯು

ಲಯಮೆ ನಾನ್. ನನಗೆಲ್ಲಿ ಲಯಮಯ್?

ಭೈರವ

ಬೆಳ್ಪರೋಲಾಡದಿರ್ ತಿಳಿಯದೆ ಪದಾರ್ಥಮಂ.

ಮೃತ್ಯು

ಕೆರಳ್ಚದಿರ್ ಅನರ್ಥಮಂ !

[ಮೃತ್ಯುಛಾಯೆ ಮುನ್ನುಗ್ಗಲೆಳಸುತ್ತದೆ]

ಭೈರವ

[ರೌದ್ರವಾಣಿಯಿಂದ]

ಮಹರ್ಷಿ ಶಂಬೂಕದೇವನಾಣೆ!
ಕಲ್ಲವೊಲ್ ನಿಲ್ ನೀನ್!

[ತನ್ನ ತೋಳುಗಳಲ್ಲಿ ಹೊಳೆಯುವ ತ್ರಿಶೂಲಗಳನ್ನು ಮೃತ್ಯುವಿನ ಮುಂದೆ ಬೇಲಿಗಟ್ಟುತ್ತಾನೆ]

ಮೃತ್ಯು

ಎಲೆ ಮರುಳೆ, ಕೇಳ್:
ಶಂಬೂಕ ಋಷಿಯ ಗೌರವಕಾಗಿ ಬಂದೆನಯ್,
ಧರ್ಮದೇವತೆಯಾಜ್ಞೆಯಿಂ.
ನೀನ್ ಆತನ ಮೆಯ್‌ಗಾವಲ್;
ನಾನ್ ಉಸಿರ್‌ಗೌರವಕೆ ಕಾವಲಯ್!
ತಿಳಿದು ತೆರೆ ಬಟ್ಟೆಯಂ. ಈಡಾಗದಿರ್ ನಗೆಗೆ!

ಭೈರವ

[ಅಚ್ಚರಿವಟ್ಟು]

ಧರ್ಮದೇವತೆಯಾಜ್ಞೆ? ಋಷಿಯ ಗೌರವಕಾಗಿ?
ಮೃತ್ಯುಗೆ ತಪೋವನ ಪ್ರವೇಶಮ್?–
ಜಟಿಲಮೀ ವಾರ್ತಾ ಕಂಟಕ ನಿಕುಂಜದೊಳ್
ಸಿಲ್ಕಿತವ್ ನನ್ನ ಬಗೆ. ಬಿಡಿಸಿದನ್ ಮೊದಲ್ !

ಮೃತ್ಯು

ಇಂದು ಪೊಳ್ತರೆಯಿನ್, ಆರಾರ್ಗೆ,
ಈ ಬನಕೆ ತೆರವಿತ್ತೆ, ಪೇಳ್.

ಭೈರವ

ಸೂರ್ಯದೇವನ ಕಿರಣದೂತರ್ಗೆ.

ಮೃತ್ಯು

ಮೇಣ್?

ಭೈರವ

ಪುಣ್ಯ ಲಕ್ಷ್ಮಿಯಂ ಕೂಡಿ
ವಸಂತಗಂಧಾನಿಲಂ ವೆರಸಿ ಬಂದಾ
ಶ್ರೀರಾಮಚಂದ್ರಮನ ಕೀರ್ತಿಕಾಂತೆಗೆ.

ಮೃತ್ಯು

ಮೇಣ್?

ಭೈರವ

ಪ್ರಕೃತಿ ದೇವಿಯ ದೈನಂದಿನ ಪರಿವಾರಕೆ.

ಮೃತ್ಯು

ಮೇಣ್?

ಭೈರವ

ಪಾರ್ವನೊರ್ವನ್ ತನ್ನಣುಗಂ ವೆರಸಿ
ಪೂಜಾವಿಧಿಗೆ ಪೂದಿರಿಯಲೆಂದು
ಒಳಪೊಕ್ಕನೈಸೆ.

ಮೃತ್ಯು

ಅದೆ ನಿಮಿತ್ತಮೀ ನನ್ನ ಯಾತ್ರೆ.

ಭೈರವ

ಕಾರಣಂ ?

ಮೃತ್ಯು

ಗೆಯ್ದನ್ ಅಧರ್ಮಮಂ!

ಭೈರವ

ಎಂತು?

ಮೃತ್ಯು

ಅವಜ್ಞೆಯಿಂ!

ಭೈರವ

ಆರ್ಗೆ?

ಮೃತ್ಯು

ಮತ್ತಾರ್ಗೆ! ಋಷಿಗೆ!
ನಿನ್ನ ಗುರುದೇವನಾ ಶಂಬೂಕ ಋಷಿಗೆ!

ಭೈರವ

[ಕೆರಳಿ]

ಏನ್ ಗರ್ವಮಾ ಪಾರ್ವಂಗೆ?

ಮೃತ್ಯು

ಪುಟ್ಟೊಳಾತಂ ಶೂದ್ರನಾಗಿರ್ದನೆಂದು!

ಭೈರವ

[ತಟಕ್ಕನೆ ಬೇಲಿಗಟ್ಟಿದ್ದ ಶೂಲಪಂಕ್ತಿಯನ್ನೆತ್ತಿ]

ಶಿವಶಿವಾ! ಏನ್ ಭಯಂಕರಂ ಪಾಪಂ
ಶ್ರೀರಾಮನಾಳುತಿರ್ಪೀ ಧರ್ಮರಾಜ್ಯದೊಳ್!

[ಮೃತ್ಯು ಮೆಲ್ಲ ಮೆಲ್ಲನೆ ಕರಿಮಂಜಾಗಿ ಆಶ್ರಮದ ಕಡೆಗೆ ಚಲಿಸುತ್ತದೆ. ಭೈರವನು ಮಸುಕು ಮಸಕಾಗಿ ಮತ್ತೆ ವೃಕ್ಷರೂಪಿಯಾಗಿ ನಿಲ್ಲುತ್ತಾನೆ.]

ತೆರೆ ಬೀಳುತ್ತದೆ

ದೃಶ್ಯ ೨

[ತಿಂಗಳ್ಬೆಳಗು ಹಾಲುಚೆಲ್ಲಿದ ಅಯೋಧ್ಯೆ. ಶ್ರೀರಾಮಚಂದ್ರನ ಅರಮನೆಯ ಬಳಿಯ ಉದ್ಯಾನದಲ್ಲಿ ಉತ್ತರ ವಯಸ್ಸಿನ ಬ್ರಾಹ್ಮಣನೊಬ್ಬನು ಹುಯ್ಯಲಿಟ್ಟು ರೋದಿಸುತ್ತಿದ್ದಾನೆ. ಸುತ್ತಲೂ …ಹುದೂರದವರೆಗೆ ಹಬ್ಬಿ, ಬಣ್ಣಬಣ್ಣದ ಹೂವಿನ ಪೊದೆಗಳೂ ಬಳ್ಳಿಗಳೂ ಮರಗಳೂ ರಂಜಿಸಿರುತ್ತವೆ. …ರ್ಜುನಗ್ಗಗಳು ನರ್ತಕಿಯರಂತೆ ನಾಟ್ಯವಾಡುತ್ತಿವೆ. ದೂರದಲ್ಲಿ ಹಾಲುಗಲ್ಲಿನ ಅರಮನೆ ಶೋಭಿಸಿದೆ. ಅದರ ಸೋಪಾನಪಂಕ್ತಿ ತರಂಗವಿನ್ಯಾಸದಿಂದ ಉದ್ಯಾನದ ಕಡೆಗೆ ಇಳಿದಿರುವುದು ಕಾಣಿಸುತ್ತದೆ.]

ಬ್ರಾಹ್ಮಣ

ಕಂದಾ, ಕಂದಯ್ಯಾ, ಕಂದಮ್ಮಾ,
ಓ ಎನ್ನ ಕಂದಾ,
ಸಹಿಪೆನೆಂತೀ ಬಗೆಯ ಬೆಂಕೆಯಂ,
ನಿನ್ನಗಲ್ಕೆಯಂ.
ಕಣ್ಗೆ ಬೆಳಕಾಗಿರ್ದ ನೀನ್;
ಬಾಳ್ಗೆ ಉಸಿರಾಗಿರ್ದ ನೀನ್;
ಮುದಿತನಕ್ಕೊಂದೂರೆಗೋಲಾಗಿರ್ದ ನೀನ್, ಪುತ್ರಕ.
ನೀನಳಿಯಲೊರ್ಮೊದಲೆ ಸರ್ವಮುಂ ಕಳಲ್ದಾನ್
ಜಗತೀ ಶ್ಮಶಾನದೊಳ್ ಜಂಗಮ ಶವಂ!
ನೀನೊರ್ವನೆಯೆ ಕಂದನುಂ ಕಣ್ಣುಮಾಗಿರ್ದ
ಕುರುಡಿ ನಿನ್ನಬ್ಬೆಯುಂ ಮರಳಿ ನಾನೆಂತು ಕಾಣ್ಬೆನ್?
ನಾನ್ ಬಳಿಸಾರಲ್
ಪಜ್ಜೆಸದ್ದಂ ಕೇಳ್ದು 'ಬಾ ಚಿನ್ನ ಬಾ' ಎನುತೆ
ಮೊಗದ ಸುಕ್ಕಳಿಯೆ ಸುಖವುಕ್ಕಿ ಚಾಚಿದ ತೋಳ್ಗೆ,
ಕರು ಕಳಿದ ಹಸುವ ಹಾಲ್ ಕರೆವ ಗೌಳಿಗನಂತೆ
ನಾನಾವ ಚಕ್ಕಳದ ಕವಡು ಸಂತೈಕೆಯಂ ತುಂಬಿ,
ಬಾಳ್ಗುಡಲ ಹೀರ್ವ ಬಡಬಾಗ್ನಿಯಂ ನಂದಿಸಲಿ?
ಪೇಳ್, ಪುತ್ರಕ! ಪೇಳ್! ಪೇಳ್! ಪೇಳ್!
[ತುಸುಹೊತ್ತು ಮೌನವಾಗಿ ಬಿಕ್ಕಿ ಬಿಕ್ಕಿ ಅಳುತ್ತಾ]
ಪೋದ ಜನ್ಮಗಳಾವ ದುಷ್ಕೃತವೊ? ಅಲ್ಲದಿರೆ,

ಬಾಳ್ದುದಿಗೆ ನಾಂ ಪಡೆದೊರ್ವನೆಯೆ ಮಗನ್,
ಕಣ್ಣೆದುರೆ ಮಡಿವುದನ್ ಕಾಣ್ಬರೊಳರೇ
ಈ ಪುಣ್ಯಯುಗದೊಳ್?
ಅಪ್ರಾಪ್ತ ಯೌವನನ್,
ಅಕೃತ ಪಿತೃಕಾರ್ಯನ್,
ಅಪಾಪಜೀವಿತನ್,
ಪಂಚವತ್ಸರದೆನ್ನ ವತ್ಸನ್
ಆವ ಕತದಿಂದಿಂತು ರಾಮರಾಜ್ಯವನುಳಿದು
ಯಮರಾಜ್ಯಕೆಯ್ದಿದನ್?
ನಾನಾವ ಪಾಪಮನ್ ಎಸಗಿದುದೆನಗೆ ನೆನಪಿಲ್ಲ.
ಎಂದುಮ್ ಅನೃತವನೊರೆದೆನಿಲ್ಲ.
ಮೇಣ್ ಹಿಂಸೆಯಂ ಗೆಯ್ದೆನಿಲ್ಲಾವ ಜೀವಿಗುಂ.
ಮತ್ತಾರ ದುಷ್ಕೃತಕಿಂದು ಕೊಲೆವೋದುದೆನ್ನ ಶಿಶು?

(ದುಃಖಾತಿಶಯದಿಂದಲೂ ಕೋಪದಿಂದಲೂ)

ಪೇಳ್ ನೀನ್, ಓ ಬೆಳ್ದಿಂಗಳಿರುಳೇ!
ಪೇಳ್ ನೀನ್, ಓ ಇಕ್ಷ್ವಾಕು ರಘುದಿಲೀಪಾದಿ
ರವಿಕುಲ ನರೇಂದ್ರ ರಾಜ್ಯಧರ್ಮಸ್ವರೂಪಿಣೀ
ಹೇ ಅಯೋಧ್ಯಾ ನಗರಲಕ್ಷ್ಮೀ!
ಪಿಂತೆಂದುಂ ಕಂಡುದಿಲ್ಲಿಂತಪ್ಪ ಘೋರಮಂ;
ಮೇಣ್ ಕೇಳ್ದುಮಿಲ್ಲಮ್.
ಶ್ರೀರಾಮನಾಳ್ವಿಂದೆ ರಾಮಪ್ರಜೆಗೆ ಕುಂದೆ?
ದೊರೆಯ ದೋಷಮೆ ಕಾರಣಂ ಪ್ರಜಾಸಂಕಟಕೆ!
ಪೆರತಲ್ತು! ಪೆರತಲ್ತು!
ಏನೊ ಒಂದಿರಲ್ವೇಳ್ಕುಮಾ ರಾಮಪಾಪಂ!

(ಆಲೋಚಿಸಿ ತರಿಸಂದು)

ಪೆರತೇನ್?
ಸಾಲದೇನಾ ಶೂದ್ರನ ತಪಕೆ ಮುನಿದ ಧರ್ಮಶಾಪಂ!

(ದಿಟ್ಟದನಿಯಿಂದ)

ಮಡಿದ ಮಗನನ್ ಮರಳ್ಚದಿರ್ದೊಡೆ
ಕೇಳ್, ಓ ರಾಮಚಂದ್ರ,

ಸಾವೆನಿಲ್ಲಿಯೆ ನಿನ್ನರಮನೆಯ ಬಾಗಿಲೊಳ್.
ಬ್ರಹ್ಮಹತ್ಯಂಗೆಯ್ದು ಸುಖದಿನಿರು; ಇರು; ಇರು!
(ಗಟ್ಟಿಯಾಗಿ)
ಆಗಸವೇ, ನೀನ್ ಸಾಕ್ಷಿ!
ತಣ್ಗದಿರನೇ, ನೀನ್ ಸಾಕ್ಷಿ!
ಓ ಅಯೋಧ್ಯೆ, ನೀನುಂ ಸಾಕ್ಷಿ!
ಕೇಳಿಮ್, ಓ ಸಗ್ಗದೊಳಿರ್ಪ ನೇಸರ್‌ಬಳಿಯ ಅರಸರಿರ,
ನೀಮೆಲ್ಲರುಮೆನ್ನ ಪೂಣ್ಕೆಗೆ ಸಾಕ್ಷಿಗಳ್!
(ಕುಸಿಯುತ್ತಾನೆ)

[ಬೆಳ್ದಿಂಗಳಲ್ಲಿ ಬೆಳ್ಳಗಾಗಿರುವ ಹಾಲ್ಗಲ್ಲಿನ ಅರಮನೆಯಿಂದ ನೀಲಶರೀರಿ ಶ್ರೀರಾಮಚಂದ್ರನು ಕರುಣಾಮುಖಮುದ್ರೆಯಿಂದಲೂ ಹುಡುಕುವವನಂತೆ ಸುತ್ತಲೂ ನೋಡುತ್ತಲೂ ಗಂಭೀರವಾಗಿ, ಅತೆಯಂತೆ, ಆಶೀರ್ವಾದದಂತೆ ಪ್ರವೇಶಿಸುತ್ತಾನೆ. ದೂರದಿಂದಲೆ ಆತನನ್ನು ಗುರುತಿಸಿ, ಬ್ರಾಹ್ಮಣನು ಭಯಭಕ್ತಿಯಿಂದೆದ್ದು ಕೈಮುಗಿದು ನಿಲ್ಲುತ್ತಾನೆ. ಶ್ರೀರಾಮನು ಬಳಿಬಳಿಗೆ ಬಂದಂತೆಲ್ಲ ಬ್ರಾಹ್ಮಣನ ದುಃಖಭಾವವೂ ಧನ್ಯಭಾವಕ್ಕೆ ತಿರುಗುತ್ತದೆ. ಶ್ರೀರಾಮನು ಹೆಜ್ಜೆಯಿಟ್ಟು ಮುಂದುವರಿದಂತೆಲ್ಲ, ಒಂದೊಂದು ಹೆಜ್ಜೆಗೆಂಬಂತೆ ಒಂದೊಂದು ಮಾತನ್ನು ಧ್ವನಿಪೂರ್ವಕವಾಗಿ ತನಗೆತಾನೆ-ಹೇಳಿಕೊಳ್ಳುತ್ತಾನೆ.]

ತ್ರಿಭುವನ ಪುಲಕಕಾರಿ ಧನ್ಯಮಿಾ ದರ್ಶನಂ !
ಕ್ರಮನ್ಯಾಸಂ ಸಪ್ತಸಾಗರ ಜೀವನಕ್ರಮಂ !
ವ್ಯೋಮಮ್ ವಪುಃಕಾಂತಿ !
ವನಾದ್ರಿ ಸಂಗದಿಂದಂಗಮೆ ವನಾದ್ರಿಯಾಗಿರ್ಪನ್ !
ದಶರಥ ಪುತ್ರನೀತನ್ ರಘುಶ್ರೇಷ್ಠನೆ ದಿಟಂ.-
ಕರುಣಮೂರ್ತಿಯಿೀತನ್ ಕೌಸಲೆಯ ಕಂದನೆ ವಲಂ.
ಋಷಿಶಿಷ್ಯನೀತನ್ ಮಹಾ ಸಂಯಮಿಯ್ಯೆಸೆ.
ಹರಧನುವ ಮುರಿದವನ್ ಸುರಧನುಸ್ಸುಂದರನ್,
ಮೈಥಿಲೀ ಮನೋಹರನ್ ಕುಸುಮಕೋಮಲನ್.
ನೀಲಮೇಘಶ್ಯಾಮನ್, ಗಿರಿವನಪ್ರಿಯನ್.-
ದಶಗ್ರೀವಾರಿ, ಉಗ್ರನೀತನ್, ವಜ್ರಪ್ರಜ್ಞಾಕಠೋರನ್!
ಅಂಜನಾಸುತ ಹೃದಯಮಿತ್ರನ್, ಪವಿತ್ರನ್.
ಪಂಚವಟಿಯೊಳ್ ನಿಂದವನ್;-
ಗೋದಾವರಿಯ ಮಿಂದವನ್;
ದೈತ್ಯಕೋಟಿಯ ಕೊಂದವನ್.-

ಶಬರಿಯ ಕಯ್ಯ ಪಣ್ಬಲಂಗಳನ್ ತಿಂದವನ್.
ಮೇರುಭವ್ಯನ್!
ಪ್ರೇಮಮೂರ್ತಿ, ಧರ್ಮಮೂರ್ತಿ, ಕ್ಷಮಾಮೂರ್ತಿ;
ಶಿಷ್ಟರಕ್ಷಾಮೂರ್ತಿ, ದುಷ್ಟಶಿಕ್ಷಾಮೂರ್ತಿ,
ನರದೇವನೀತನ್ ಪರದೈವಮೆ ವಲಂ!-
ಆಶಾಸ್ವರೂಪಿಯಿತನ್
ಬಂದಪ್ಪನಾಶೀರ್ವಾದಮ್ಮೈತಪ್ಪವೋಲ್.
ಧನ್ಯನಾನಿನ್ ಬರ್ದುಕಿದೆನ್!
ಬರ್ದುಕಿದೆನ್! ಬರ್ದುಕಿದೆನ್!
ಬರ್ದುಕದಿರ್ಪನೆ ನನ್ನ ಕಂದನ್?
ಬರ್ದುಕಿದನ್, ಅವನುಂ ಬರ್ದುಕಿದನ್!

[ಎವೆಯಿಕ್ಕದೆ ನೋಡುತ್ತಾ ನಿಲ್ಲುತ್ತಾನೆ]

ಶ್ರೀರಾಮ

[ರಾಜರಾಜಗಾಂಭೀರ್ಯದಿಂದ ಬರುತ್ತಾನೆ]

ಈ ವಸಂತಪೂರ್ಣಿಮಾ ರಜನಿಯಂ
ಈ ಅಯೋಧ್ಯಾಶಾಂತಿಯಂ
ತನ್ನ ಕರಣಕಥೆಯಿಂ ಕದಡಿದಾ ದುಃಖಿ,

[ಸುಯ್ಯುತ್ತಾನೆ]

ಅಗಲ್ದರೆಮೆಯ್ಯಳನೆ ನೆನೆಯುತಿರ್ದೆನ್ನ
ಸೀತಾಶೋಕಮನಿತುಮನ್ ಮರುಕೊಳಿಸಿದಾ ದುಃಖಿ
ಎಲ್ಲಿರ್ಪನ್? ಎತ್ತವೋದನ್?

[ಸ್ವಲ್ಪ ನೋಡಿ]

ಇತ್ತಣಿಂದೀ ತೋಂಟದಿಂದ್ಯೈತಂದುದಾ ರುದಿತಂ.

[ವ್ಯಂಗ್ಯಸ್ಮಿತವಾಗಿ]

ನನ್ನ ಬಾಳ್ ಗಿವಿಗೇಗಳುಮ್
ರೋದನಮೆ ಸಂಗೀತಮಾಯ್ತಲಾ!
ಅಪಹಾರಿಯುಣ್ಬ ಕೂಳಲ್ತೆ ಗೋಳ್;
ಕುಡಿವಮರ್ದಲ್ತೆ ಕಣ್ಣೀರ್!

[ತನ್ನೆಡೆಗೆ ಬರುತ್ತಿರುವ ಬ್ರಾಹ್ಮಣನನ್ನು ಗಮನಿಸಿ]

ಆರೊ ಬರುತಿಪ್ಪರೀ ಎಡೆಗೆ.

[ನಿಟ್ಟಿಸಿ ನೋಡಿ]

ಮುದಿಯನ್; ಹಾರ್ವನ್; ದುಃಖ ಜರ್ಜ್ಜರಿತನ್.
ಈತನಾ ಪುಷ್ಯುಲ್ಲಿದನೆ ಇರಲ್‌ವೇಳ್ಕುಮ್.

[ಎರಡು ಹೆಜ್ಜೆ ಮುಂಬರಿಯುತ್ತಾನೆ]

ಬ್ರಾಹ್ಮಣ

[ಬೇಗ ಬೇಗ ಬರುತ್ತಾ]

ಅನಾಥ ರಕ್ಷಕಾ, ದುಃಖವಿಮೋಚಕಾ,
ಸರ್ವಲೋಕಪ್ರಭೂ, ಸಲಹು, ಸಲಹು!

[ಕಾಲಿಗೆರಗುತ್ತಾನೆ]

ಶ್ರೀರಾಮ

ಏಳಿಮೇಳಿಮ್. ಮುದುಕರ್, ಪಿರಿಯರ್, ಹಾರ್ವರ್,
ನೀಂ ಗುರುಜನಸಮರೆನಗೆ.

ಬ್ರಾಹ್ಮಣ

ಅರ್ಥಿಸಹಜಮನೆಸಗಿದೆನ್, ದಾಶರಥಿ.
ಕಟ್ಟಳಲ್ಲುಂಟೆ ಮತಿ? ತಿರುಪೆಗೆತ್ತಣ ಪೆರ್ಮೆ ?

ಶ್ರೀರಾಮ

ಆರ್ ನೀಮ್? ದುಃಖಮೇನ್

ಬ್ರಾಹ್ಮಣ

ನೀನ್ ವಿಚಾರಿಸಲ್ ದುಃಖಮೆಂಬುದುಮುಂಟೆ ?-
ನೀನ್ ಹಾರ್ವರನ್ ಮೊಗದಿಂದುಗುಳ್ದಾತನಂ
ಪೊರ್ಕ್ಕುಳಿಂ ಪೆತ್ತಾತನಲ್ತೆ ?
ಕಾಲಮನೆ ಕೂಸೆಂಬ ನಿನಗಿಂ ವೃದ್ಧರಿರ್ಪರೆ?
ವಿಶ್ವಮಂ ಸೃಜಿಸಿದಾ ಪಿರಿಯಂಗೆ ಪಿರಿಯನ್
ನಿನಗೆ ನಾನೆರಗಿದೊಡೆ ವಿಪರೀತಮಲ್ತು.
ಮನುಷ್ಯರೀತಿಯಿಂದಪ್ಪೊಡಂ ನಿನಗೆ
ಪೊಡವಿಯೊಡೆಯಂಗೆ ಪೊಡೆವಡುವುದೆ ಪಾಳಿ.

ಪ್ರೇಮ ಸಾಧನದಿಂ ನೀಂ ಮಹಾತಪಸ್ವಿಯಲ್ತೆ?
ಪಿರಿದೇಗಳುಂ ತಪಂ. ಗುಣಕ್ಕೆ ಮಚ್ಚರಮೆ?

ಶ್ರೀರಾಮ

ಪಿರಿದನೊಲ್ವರುಂ ಪಿರಿಯರ್, ವಿಪ್ರೋತ್ತಮ!
ಪೇಳಿಮ್ ನಿಮ್ಮಳಲ್ಕೆಯಂ.

ಬ್ರಾಹ್ಮಣ

ಅಪಹರಿಸಿದನ್ ಪಂಚವತ್ಸರದೆನ್ನ ಕಂದನನ್...

ಶ್ರೀರಾಮ

ಆವನ್ ಆ ನೀಚನ್?

ಬ್ರಾಹ್ಮಣ

ಯಮನೆಂಬ ಕೀರ್ತಿಯಾ ವೈವಸ್ವತನ್!

ಶ್ರೀರಾಮ

ದಿಟಮೆ!

ಬ್ರಾಹ್ಮಣ

ನನ್ನೊಡನೆ ಬಪ್ಪೆಯಪ್ಪೊಡೆ ತೋರ್ಪೆನಾ ತಾಣಮಂ;
ಮೇಣ್, ನನ್ನೊರ್ವನೆಯೆ ಕುವರನಾ ಪೆಣಮುಮಂ.

[ಅಳುತ್ತಾ]

ಹೇ ದಯಾನಿಧಿ,
ಕ್ಲೇಶ ಕಾಲದೊಳೆಲ್ಲರುಂ ನಿನ್ನ ಪೆಸರನುಸಿರ್ದು
ರಕ್ಷೆಯಂ ಪಡೆವರಯ್. ನಿನ್ನನೆಯ ಬೇಡುತಿಹೆನಾಂ
ನನ್ನ ಕಂದನ ಹರಣಮುಂ ಬಿಕ್ಕೆನೀಡೆನಗೆ.
ನೀನ್ ಕೃಪಾಬ್ಧಿಯಲ್ತೆ?-
ಸುಲಭಸಾಧ್ಯಂ ನಿನಗೆ ಅದೆಂತಪ್ಪ ಕಠಿನಮುಂ.
ಲೋಕಾಪವಾದಕ್ಕೆ ನಿನ್ನರ್ಧಾಂಗಿಯುಂ,
ಬೆಂಕೆವೊಕ್ಕೆಯ್ತಂದ ಪರಿಶುದ್ಧೆಯುಂ,
ಸೌಂದರ್ಯ ಲಕ್ಷ್ಮಿ ಆ ಸೀತಾದೇವಿಯುಂ

ತುಂಬು ಬಸಿರಿಯೆಂದೆರ್ದೆಸೋರದದಡವಿಗಟ್ಟ
ನಿನ್ನಾ ಭೀಷ್ಮಪೌರುಷವ ಮರೆದೆಯಲ್ತೆ?

ಶ್ರೀರಾಮ

[ನಿಡುಸುಯ್ದು ಮೊಗಮಂ ಪಿಂಡಿ]

ಸಾಲ್ಗುಮಾ ಕಥನಂ, ದ್ವಿಜನ್ಮ.
ಕಾಳ್ಗಿಚ್ಚಗೂರ್ಗಿಚ್ಚನಿದಿರೊಡ್ಡಿ ನಂದಿಪ್ಪವೋಲ್
ನಿನ್ನಳಲ್ಗೆನ್ನಳಲ್ ಪರಿಹಾರಮೇನ್?

ಬ್ರಾಹ್ಮಣ

ಮನ್ನಿಸು, ಮಹೀಶ್ವರ.
ನನ್ನ ಕಂದನ ಹರಣಮಂ ಬೇಡಿ ಬಂದೆನ್;
ಕೃಪೆಯಿಂದದನ್ ನೀಡು.

ಶ್ರೀರಾಮ

ದ್ವಿಜೋತ್ತಮ, ನೀಂ ಪೇಳ್ವುದಕ್ಕಜಮ್!
ಧರ್ಮಾಧಿಕಾರಿ ವೈವಸ್ವತನ್ ನಿರ್ನೆರಂ
ನನ್ನ ರಾಜ್ಯದೊಳಿಂತು ಗೆಯ್ವನಲ್ಲಂ.
ಇದರೊಳೊಂದೇನೊ ಧರ್ಮಚ್ಯುತಿಯಿರಲೆವೇಳ್ಕುಂ.
ಅಪ್ರಾಪ್ತಕಾಲನಂ, ಬಾಲನಂ
ಕೊಂಡೊಯ್ದ ಕಾಲನಂ ಕಾಲ್ಗೆಡಿಸುವೆನ್
ತಪ್ಪು ಅವನದಾಗಿರಲ್.–ಆದೊಡಾಂ
ಅಪರಾಧಮ್ ಅವನದೆಂದಾಳೋಚಿಸೆನ್.
ನೀಮ್ ಏನಾದೊಡಂ ಅಪೂಜ್ಯಮಂ ಗೆಯ್ದಿರೇನ್?

ಬ್ರಾಹ್ಮಣ

ಪೆರ್ನಡೆಯ ತಾಯ್ತಂದೆಪಿರ್ ನನ್ನವರ್.
ಬಿಜ್ಜೆಗಲಿಸಿರ್ಪೊರ್ ಗುರುಜನರುಂ ಸಜ್ಜನರ್.
ಪಾರ್ವರೊಳ್ ಪುಟ್ಟಿರ್ಪುದೆನ್ನಾತ್ಮಂ, ಪ್ರಭೂ.

ಶ್ರೀರಾಮ

ಮಾನ್ಯರ್ ನೀಮ್.
ಧನ್ಯಂ ನಿಮ್ಮನ್ನರಂ ಪಡೆದೆನ್ನ ರಾಜ್ಯಂ.-
ಇನ್ನಾರಾದೊಡಂ ಗೆಯ್ದರೇನಧರ್ಮಮಂ
ನಿಮ್ಮ ಮಗನಳಿವಿಂಗೆ ಕಾರಣಮೆನಲ್?
ನೀಮ್ ಅರಿತಿರ್ಪೊಡೆ ಅದನ್ ಒರೆಯಿಮ್;
ಅಳಿಪೆನದನ್.
ಕಾರಣದ ನಾಶದಿಂ ನಾಶಮಪ್ಪುದು ಕಾರ್ಯಮುಂ.
[ದೃಢವಾಣಿಯಿಂದ]
ನನ್ನ ರಾಜ್ಯದೊಳಿರಲ್ಕಾಗದು ಅಧರ್ಮಿ!

[ಶ್ರೀರಾಮನ ಧರ್ಮಕೋಪಕ್ಕೆ ಬ್ರಾಹ್ಮಣನು ಬೆದರುತ್ತಾನೆ. ಮಿಳ್ಮಿಳನೆ ನೋಡುತ್ತಿರುವಾತನಿಗೆ ರಾಮನು ಧೈರ್ಯಹೇಳುವಂತೆ]

ಬಿಡಿ ಬೆದರ್ಕೆಯಂ! ದಿಟಮನೊರೆಯಿಂ!

ಬ್ರಾಹ್ಮಣ

ಕ್ಷಮಿಸಯ್, ಮಹಾಪುರುಷ, ಜಿಹ್ವೆ ತೊದಳ್ದಪ್ಪುದೆನಗೆ.

ಶ್ರೀರಾಮ

ನಿಜವನುಸುರಲ್ಕೆ?

ಬ್ರಾಹ್ಮಣ

ನಿನ್ನಿದಿರೆ ನಿನ್ನ ಪೆಸರಂ ಪೇಳ್ವುದರ್ಕ್ಕಳ್ಕಿ!

ಶ್ರೀರಾಮ

[ನಸು ಬೆಚ್ಚಿದಂತಾಗಿ ತನ್ನೊಳಗೆ ತಾನೆ]
ಅಪರಾಧಂಗಳ್ಗೆಲ್ಲ ನಾನೆ ಮೂಲಮೋ ಏನ್?
ಅಂದಸಗನಾಡಿದನ್; ಇಂದೀ ಪಾರ್ವನ್!
[ಬ್ರಾಹ್ಮಣನಿಗೆ]
ದ್ವಿಜೋತ್ತಮ, ಸತ್ಯಂ ಸರ್ವಪೂಜ್ಯಂ.
ಸತ್ಯಕಂಜಲ್ ತರಮೆ? ಪೇಸಲಿಲ್ಲಾವಗಂ
ಸತ್ಯಮನಾಲಿಸಲ್ಕೀ ದಸರಥಾತ್ಮಜಂ.
ಸತ್ಯಮಾರ್ಗಂ ಕ್ಷೇಮಮೇ, ಇಳೆಯ ಪಿರಿಯ,

ಪೇಳ್ವರ್ಗಂ, ಕೇಳ್ವರ್ಗಂ.-ತಳ್ವದೆ ಪೇಳಿಂ!
ನನ್ನದೇನಪರಾಧಂ? ನನ್ನಿಂದಮೇನಧರ್ಮಂ?
ಜನ್ಮದಿಂ ಮಾತ್ರವಲ್ಲದೆ ಕರ್ಮದಿಂದಮುಂ
ಗುರುಗಳಪ್ಪಿರಿ ನೀಮ್.
ಪೇಳಿಮ್, ತಳ್ವದೆ ಪೇಳಿಮ್!

ಬ್ರಾಹ್ಮಣ

ಶಿಷ್ಟಪರಿತ್ರಾಣ ಮೂರ್ತಿ, ಕೇಳ್:
ಇಂದು ಬೆಳಗುಂಬೊಳ್ತು ದೇವಾರ್ಚನೆಗೆ
ಪೂದಿರಿಯಲೆಂದು ನಾಂ ಪುತ್ರಕಂವೆರಸಿ
ಸಾರ್ದೆನೊರ್ವೆಸರ ಬನಮಂ.

ಶ್ರೀರಾಮ

ಪೆಸರಿರ್ಪುದೇನಾ ಬನಕೆ? ಇರ್ಪುದೆತ್ತಣ್ಗೆ?

ಬ್ರಾಹ್ಮಣ

ಪಾಪಕರಮೆಂದುಸಿರ್ದನಿಲ್ಲಾ ಪೆಸರನ್.
ಇರ್ಪುದದು ಮೃತ್ಯುದಿಶೆಯೊಳ್.

ಶ್ರೀರಾಮ

ಪೆಸರೊಳೇನ್ ಪಾಪಂ? ಉಸಿರಿಂ.

ಬ್ರಾಹ್ಮಣ

ಶಂಬೂಕಾಶ್ರಮವೆಂದು ಕರೆವರಾ ಕಾಡನ್.

ಶ್ರೀರಾಮ

[ಚಿಂತಾಮಗ್ನನಾಗಿ, ಬಳಿಕ]

ಓಹೊ ಈಗಳೆನಗೆ ಬೆಳಕು ಮೂಡುತಿದೆ!-
ಮುಂದೆ?

ಬ್ರಾಹ್ಮಣ

ಮುಂದೇನ್, ಮಹಾಪ್ರಭೂ?
ಕಂಡವಿರ್ವರುಮಾ ತಪಂಬಡುತ್ತಿರ್ದನಂ,

ಶೂದ್ರನಂ, ಶಂಬೂಕವೆಸರಾಂತನಂ,
ಋಷಿವೇಷದಾ ಪಾಷಂಡಿಯಂ.

[ಶ್ರೀರಾಮನ ಹುಬ್ಬುಗಂಟಕ್ಕುತ್ತವೆ. ಆಲೋಚಿಸುತ್ತಾ ನಿಲ್ಲುತ್ತಾನೆ. ಬ್ರಾಹ್ಮಣನು ತನ್ನಲ್ಲಿಯೆ ತಾನು ಹೇಳಿಕೊಳ್ಳುತ್ತಾನೆ.]

ಈಗಳಾ ಶೂದ್ರಂಗೆ ತಕ್ಕುದಕ್ಕುಂ.
ಅಧರ್ಮಶ್ರವಣಮಾತ್ರದಿಂ, ಕೋಪದಿಂ,
ಏಂ ರೌದ್ರಮಾದುದೀ ರಾವಣಾರಿಯ ಮುಖಂ!

ಶ್ರೀರಾಮ

[ಸೌಮ್ಯನಾದವನಂತೆ ಬ್ರಾಹ್ಮಣನ ಕಡೆಗೆ ತಿರುಗಿ]

ನಮಸ್ಕಾರಂಗೆಯ್ದಿರೇಂ?

ಬ್ರಾಹ್ಮಣ

(ಕಿವಿಮುಚ್ಚಿ)

ಶಿವ ಶಿವ ಶಿವ !
ಅಂತಪ್ಪ ಘೋರಮಂ ನಾವೆಸಗಿದೆವಲ್ತು.
ಅರಿಯದಾ ಕುವರಂ ಕೈಮುಗಿಯಲಿರ್ದನ್;
'ಮಾಣ್, ಶೂದ್ರಂಗೆ ತುಳಿಲ್‌ಗೆಯ್ಯಲಾಗ!'
ಎಂದಾಂ ಬುದ್ಧಿಯಂ ತಿದ್ದಿ ತಡೆದೆನ್.

ಶ್ರೀರಾಮ

[ವ್ಯಂಗ್ಯವಾಗಿ]

ಎಂತಾದೊಡಂ ತಾಮ್ ವೇದಮೂರ್ತಿಗಳಲ್ತೆ !

ಬ್ರಾಹ್ಮಣ

ನಿನ್ನ ರಾಜ್ಯದೊಳಿರ್ದುಮ್
ಅನಿತೊಂದನಾದೊಡಂ ಅಧರ್ಮಮಂ
ತಡೆಯದಿರೆ ನರಕಮಾಗದೆ ನಮಗೆ?

ಶ್ರೀರಾಮ

ಓವೊ ದಿಟಂ; ಸ್ವರ್ಗಮಪ್ಪುದನೆಸಗಿದಿರಿ!
ಆ ಸೈಪಿನೊಂದು ಮೆಯ್ಮೆಗೇ ನಿಮ್ಮರ್ಭಕಂ
ಸ್ವರ್ಗಸ್ಥನಾದನೆಂಬಿರೇಂ?

ಬ್ರಾಹ್ಮಣ

ಅಲ್ತಲ್ತು, ರಾಮಚಂದ್ರ,
ಶೂದ್ರನ್ ತಪಂಗೆಯ್ವೊಂದು ಅಧರ್ಮಕ್ಕೆ,
ವರ್ಣಾಶ್ರಮ ಧರ್ಮದುಲ್ಲಂಘನೆಯ ಪಾಪಕ್ಕೆ,
ನಿನ್ನ ಬಾಲಪ್ರಜೆಯೊರ್ವನ್ ಬಲಿಯಾದನ್.-
ಮುಂದಾವ ಮಹತ್ಕಾರ್ಯಮಂ ಗೆಯ್ಯಲಿರ್ದನೊ?
ಆವ ಶಾಸ್ತ್ರವನೊರೆಯಲಿರ್ದನೊ?
ಆವ ಕಬ್ಬಮಂ ಕಟ್ಟಲಿರ್ದನೊ?
ಆವ ತಪದಿಂದಾವ ಸಿದ್ಧಿಯ ಪಡೆಯಲಿರ್ದನೊ?
ಆ ಪ್ರಜೆ ಶೂದ್ರನ ತಪೋದುಷ್ಕೃತಿಗೆ ಬೇಳ್ವೆಯಾದನ್!
ಪಾವಗಿದು ತೀರ್ದನ್!

(ಅಳುತ್ತಾನೆ)

ಶ್ರೀರಾಮ

[ಸ್ವಗತ. ಕನಿಕರದಿಂದಲೂ ಕೋಪದಿಂದಲೂ]

ಈ ವರ್ಣಗರ್ವಾಂಧಂಗೆ,
ಈ ಶಾಸ್ತ್ರಮೂರ್ಖಂಗೆಂತೊ ಬುದ್ಧಿಗಲಿಪೆನ್?
ಶಂಬೂಕನ್ ಮಹಾಯೋಗಿ.
ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮಂ
ತಂದುದೀತನ ಮುದ್ದು ಕಂದಂಗೆ
ನನ್ನ ರಾಜ್ಯದೊಳುಂ ಅಕಾಲ ಮೃತ್ಯುವಂ.
ತನ್ನ ತಪ್ಪನೆ ತಿಳಿಯಲಾರದೀತನ್,
ಮರೆಯಿಂದಮೆನ್ನನ್,
ಬಹಿರಂಗಮಾ ಶಂಬೂಕಯೋಗಿಯನ್
ನಿಂದಿಸುತ್ತಿರ್ಪನ್

(ಆಲೋಚಿಸಿ, ನಿರ್ಣಯಿಸಿ, ಮತ್ತೆ)

ತೋರ್, ದ್ವಿಜಸ್ಮ, ಶಂಬೂಕ ವಿಪಿನಮಂ.
ನಡೆವಮಾ ಎಡೆಗೆ, ತೊಡೆವಮ್ ಅಧರ್ಮಮಂ.
ರಾಮರಾಜ್ಯದೊಳ್ ಅಧರ್ಮಮೆ ಮೃತ್ಯು.
ಅಧರ್ಮ ಸಂಹಾರಮೆ ಮೃತ್ಯುವಿಜಯಂ:

ಅರನ ಗೆಲ್ ಯಮನ ಸೋಲ್!
ಬರ್ದುಕಲ್ ಧರ್ಮಂ ಬರ್ದುಕುವನ್ ನಿನ್ನಣುಗನ್!

ಬ್ರಾಹ್ಮಣ

[ಸ್ವಗತ]

ರಾಮ ನಿಂದೆಯುಮ್ ಅವ್ಯರ್ಥಮೆನಲ್
ಪೊಗಳ್ಕೆ ಇನ್ನೆಂತೊ ಸಫಲಮಕ್ಕುಂ?

[ರಾಮನಿಗೆ]

ಪೋಗುವಂ, ರಾಕ್ಷಸಾರಿ. ಧನ್ಯನಾದೆನ್.

ಶ್ರೀರಾಮ

ಬನ್ನಿಮ್.

[ಆಕಾಶದೆಡೆಗೆ ನೋಡುತ್ತ]

ಪುಷ್ಪಕವೇರ್ದು ಶಂಬೂಕಾಶ್ರಮಕ್ಕೈದುವಮ್.

[ಶ್ರೀರಾಮನು ಉತ್ತರದಿಕ್ಕಿನ ಕಡೆಗೆ ನೋಡಿ ಪುಷ್ಪಕವನ್ನು ನೆನೆಯುತ್ತಾನೆ. ಬಹುಸಂಖ್ಯೆಯ ಕಿರುಗಂಟೆಯ ಟಿಂಟಿಣಿಯ ಮಧುರನಾದವು ಕೇಳಲಾರಂಭವಾಗುತ್ತದೆ. ಇಚ್ಛಾರೂಪದ ಕಾಮಗಮನದ ಆ ಬಾನ್ತೇರು, ಬೆಳ್ದಿಂಗಳೆ ತೆಪ್ಪಾಯ್ತೊ ಎಂಬಂತೆ, ಮುಗಿಲ್ ಮುಗಿಲ್ ಗೋಚರವಾಗಿ ನೆಲಕ್ಕಿಳಿಯುತ್ತದೆ. ಶ್ರೀರಾಮನೊಡನೆ ಬ್ರಾಹ್ಮಣನೂ ತೇರಿಗೆ ತುಳಿಲ್‌ಗೆಯ್ದು ಅಡರುತ್ತಾನೆ. ವಿಮಾನವು ಮೇಲೆದ್ದು ಹಾರಿ, ದೂರದೂರವಾಗಿ, ಕಣ್ಮರೆಯಾಗಿ, ನಾದಾವಶೇಷವಾಗುತ್ತದೆ.]

ತೆಗೆ ಬೀಳುತ್ತದೆ.

ದೃಶ್ಯ ೩

[ಶಂಬೂಕಾಶ್ರಮದ ವನ್ಯಸೀಮೆ. ಹುಣ್ಣಿಮೆಯ ಬೆಳ್ದಿಂಗಳಲ್ಲಿ ಮಿಂದಿದೆ. ಎಲ್ಲೆಲ್ಲಿಯೂ ನಿಶ್ಶಬ್ದ. ಹೂಪಿನ ಹೊದೆ ಬೆಳೆದ ಒಂದು ಹುತ್ತದೆಡೆ ಬ್ರಾಹ್ಮಣ ಕುಮಾರನು ಬಿದ್ದಿದ್ದಾನೆ. ಕಳೇಬರಕ್ಕೆ ಸಮೀಪದಲ್ಲಿ ಛಾಯಾರೂಪಿ ಮೃತ್ಯು ನಿಂತಿರುವುದು ಕಂಡುಬರುತ್ತದೆ. ಅಲ್ಲಿಗೆ ಅನತಿ ದೂರದಲ್ಲಿಯೆ ಸಮಾಧಿಮಗ್ನನಾಗಿರುವ ಶಂಬೂಕ ಮಹರ್ಷಿಯ ಧ್ಯಾನಸ್ತಿಮಿತವಾದ ಆಕೃತಿಯೂ ಇಂಗಿತವಾಗಿ ಕಂಡುಬರುತ್ತದೆ. ಆತನ ಸುತ್ತಲೂ ಹುಲು ಬೆಳೆದಿದೆ. ಶ್ಮಶ್ರುಮಯವಾದ ಮುಖವೂ ಜಟಾಸ್ರೋತಗಳೂ ಬಳ್ಳಿಗಳಲ್ಲಿ ಹೆಣೆಗೊಂಡಿವೆ. ಅರ್ಧಭಾಗದ ಮೆಯ್ಗೆ ಹುತ್ತವೂ ಬೆಳೆದಿದೆ. ಆ ಭವ್ಯ ದೃಶ್ಯವನ್ನಾವರಿಸಿ ಒಂದು ತೇಜಸ್ಸಿನ ಪರಿವೇಷವೂ ಕಂಗೊಳಿಸುತ್ತದೆ. ಸಮೀಕ್ಷಿಸಿದರೆ ಮಾತ್ರವೇ ವೇದ್ಯವಾಗುವಷ್ಟರ ಮಟ್ಟಿಗೆ ಪ್ರಕೃತಿಲೀನವಾಗಿದೆ ಋಷ್ಯಾಕೃತಿ. ಇದ್ದಕ್ಕಿದ್ದ ಹಾಗೆ ವನದಲ್ಲಿ ಭಾವಸಂಚಾರವಾದಂತಾಗಿ, ಎಲರು ತೀಡಿ, ಹೂಬಳ್ಳಿ ಹೊದೆ ಎಲ್ಲವೂ ತಲೆಯೊಲೆಯುತ್ತವೆ. ಮೃತ್ಯುವೂ ಭಕ್ತಿಯಿಂದ ಬಾಗಿ ಕೈಮುಗಿಯುತ್ತದೆ. ಆ ದಿಕ್ಕಿನಿಂದಲೆ ಬ್ರಾಹ್ಮಣದ್ವಿತೀಯನಾಗಿ ಶ್ರೀರಾಮನು ಪ್ರವೇಶಿಸುತ್ತಾನೆ. ಆತನ ವದನ ಭಾವದೀಪ್ತವಾಗಿದೆ. ತನ್ನಾನಂದಕ್ಕೆ ತಾನೆ ಮಾತಾಡಿಕೊಳ್ಳುವಂತಿದೆ.]

ಶ್ರೀರಾಮ

ಏನ್ ಶಾಂತಿ ನೆಲಸಿರ್ಪುದೀ ಬೆಲ್ವಿನೊಳ್;
ಅನುಭವಮೆ ಪೇಳ್ವುದು ಇದು ಋಷಿಯ ಬೀಡೆಂದು.
ತಪೋಮಹಿಮೆಗೆಣೆಯುಂಟೆ?
[ರಸಾನುಭವ ಮಾಡುವವನಂತೆ ಧ್ಯಾನಭಂಗಿಯಿಂದ ನಿಲ್ಲುತ್ತಾನೆ.]

ಬ್ರಾಹ್ಮಣ

[ಸ್ವಗತ]

ಸೋಜಿಗಮಾಗಿರ್ಪುದೀ ರಾಜೇಂದ್ರನೀ ತೆರಂ !
[illegible]ನೆಯೊಳಿರ್ಪೀತಂಗೆ ಗಿರಿವನಪ್ರಕೃತಿಯೆನೆ
ಅದೇನ್ ಪ್ರೇಮವೊ? ಅದೇನ್ ಮೋಹವೋ?
ಸೀತೆಯನ್ ಅರಣ್ಯಕೆ ವಿಸರ್ಜಿಸಿದೀತಂಗೆ
ಅರಣ್ಯಮೆ ಸೀತೆಯಾಗಿರ್ಪಳ್!

ಶ್ರೀರಾಮ

(ಬ್ರಾಹ್ಮಣನಿಗೆ)

ತೋರಿಮ್ ಆ ತಾಣಮಂ.

ಬ್ರಾಹ್ಮಣ

ಬಾ, ಪ್ರಭೂ, ತೋರ್ದಪೆನ್.
(ಮುಂದೆ ನಡೆದು)
ನೋಡಲ್ಲಿ! ನೋಡಲ್ಲಿ, ಕೋಸಲೇಶ್ವರ,
ಕೆಡೆದಿರ್ಪುದೆನ್ನ ಕುಲಗೋಪುರದ ಕಲಶಮಣಿ;
[ಮುಂದೆ ನುಗ್ಗಿ]
ರಕ್ಷಿಸಯ್, ರಕ್ಷಿಸಯ್ ನನ್ನೀ ಕಣ್ಮಣಿಯಂ!
[ಶವದೆಡೆ ಕುಸಿಯುತ್ತಾನೆ]

ಶ್ರೀರಾಮ

[ಪ್ರಯತ್ನಿಸಿದರೂ ಸಾಧ್ಯವಾಗದೆ ಅಸ್ಥಿರನಾಗಿ ಕಣ್‌ತೊಯ್ದು, ಸ್ವಗತ.]
ಸ್ಥಿತಪ್ರಜ್ಞಂಗುಂ ಅಧೈರ್ಯಮನೊಡರ್ಚುವುದೀ
ಪುತ್ರಶೋಕದ ದೃಶ್ಯಮೇಗಳುಮ್!
ನನ್ನಗಲ್ಕೆಗಂದು ಎದೆಬಿರಿಯಲ್ ಪಳಯಿಸಿದಾ
ನನ್ನಯ್ಯನಂ ಬಗೆಗೆ ತರ್ಪ್ಪನೀ ಮುದುಕ ತಂದೆ !-
ಏನ್ ಮಾಯೆ?
ಅಮೃತ ಸಾಕ್ಷಾತ್ಕಾರಮಾದರ್ಗಂ
ಮೃತ್ಯು ಸಂಕಟಕರಂ !
ನಾಟಕದೆ ನಿಜವನರಿವುದು
ನೇಪಥ್ಯಮಂ ಪೊಕ್ಕ ಮೇಲಲ್ತೆ?
[ಬ್ರಾಹ್ಮಣನ ಬಳಿಗೆಯ್ದಿ]
ರೋದಿಸದಿರ್ ಅಬೋಧನೊಲ್, ವೇದವೇತ್ತ.
ನಡೆದೊಂದಧರ್ಮಮಂ ಪರಿಹರಿಸಲೊಡಂ
ಅಮೃತನಕ್ಕುಮ್ ನಿನ್ನೀ ಚಿರಂಜೀವಿ!

ಬ್ರಾಹ್ಮಣ

[ಉನ್ನತ ಹರ್ಷದಿಂದ ಮೇಲೆದ್ದು]
"ಅಮೃತನಕ್ಕುಮ್ ನಿನ್ನೀ ಚಿರಂಜೀವಿ!"
ಸತ್ಯವಾಕ್ ನೀನ್, ಇಕ್ಷ್ವಾಕುಕುಲೇಂದ್ರ,
ಇನ್ ಎನ್ನ ಕಂದನ್ ಚಿರಂಜೀವಿ!-
ಪರಿಹರಿಸಾ ಅಧರ್ಮಚಾರಿಯನ್ ಶೀಘ್ರದಿಂ.

ಶ್ರೀರಾಮ

[ಕೈಮುಗಿದು ನಿಂತಿದ್ದ ಮೃತ್ಯುದೇವತೆಯನ್ನು ಪ್ರಸನ್ನ ದೃಷ್ಟಿಯಿಂದ ನೋಡುತ್ತಾ]

ಇದೇನ್ ನೀನ್, ಈ ತಪೋವಿಪಿನದೊಳ್?

[ಮುಗುಳ್ನಗೆವೆರಸಿ]

ಉಪವಾಸಮಾಚರಿಸುತಿರ್ಪೆಯೇನ್?

ಮೃತ್ಯು

[ಹಸನ್ಮುಖಿಯಾಗಿ]

ತಂಪಂಗೆಯ್ಯುತಿರ್ಪೆನ್!

ಶ್ರೀರಾಮ

[ವಿನೋದದಿಂದ]

ಆರ ಅಮಂಗಳದ ಅದಾವ ಸಿದ್ಧಿಗೊ?

ಮೃತ್ಯು

ದೈತ್ಯವೈರಿಯ ಧರ್ಮಸಿದ್ದಿಗೆ !

ಶ್ರೀರಾಮ

ಅನೇಕ ವಂದನಂಗಳ್ ನಿನಗೆ !

ಮೃತ್ಯು

ಧನ್ಯಳೆನ್!

ಬ್ರಾಹ್ಮಣ

ಆರೊಡನೆ ಸಂವಾದಮಾ ಆಕಾಶವರ್ಣಂಗೆ !

ಶ್ರೀರಾಮ

ದ್ವಿಜೋತ್ತಮ, ನೀಂ ಪೆಳ್ದಾ ಅನಧಿಕಾರಿ,
ಆ ಶೂದ್ರನ್
ತಪಮಿರ್ಪ ತಾಣಮಂ ತೋರ್ಪುದೆ ತಡಂ.

ಬ್ರಾಹ್ಮಣ

[ಕೈದೋರಿ]

ಅದೆ ನೋಡಾ ವಲ್ಮೀಕದೆಡೆ.

ಶ್ರೀರಾಮ

[ಸ್ವಗತ]

ಏನ್ ಜಿಹ್ವೆ ಈ ಪಾರ್ವನದು?
ಮಾತು ಮಾತಿನೊಳೆನ್ನ ಮರ್ಮಮಂ ಚುಚ್ಚುವನ್.
ವಲ್ಮೀಕಮೆಂಬಾ ಪದವನಾಲಿಸಿದೆನಗೆ
ಸೀತೆಯಂ ಸಲಹುತಿರ್ಪಾ ಮಹಾ ಕವೀಶ್ವರನ
ನೆನಹು ಮೊಳೆತು
ಏಕೊ ಉಕ್ಕುತಿರ್ಪುದು ಮನಕೆ ದಿವ್ಯದುಃಖಂ!
ಆ ಕವಿಋಷಿಯುಮಿಾ ಶಂಬೂಕನೊಲೆ
ಶೂದ್ರನೈಸೆ?
ವ್ಯಾಧವೃತ್ತಿಯೊಳಿರ್ದವಂ ಉಗ್ರತಪದಿಂ
ಮಹರ್ಷಿತ್ವಕೇರ್ದನೈಸೆ?
ತಪೋಮಹಿಮೆಗೆಣೆಯುಂಟೆ?

[ಬ್ರಾಹ್ಮಣನು ಕೈದೋರಿದ ಕಡೆಗೆ ನೋಡುತ್ತಾ ಬಿಲ್ಲನ್ ಅಣಿಮಾಡುವ ನೆವದಿಂದಲೆಂಬಂತೆ ಶಂಬೂಕಮಹರ್ಷಿಗೆ ಕೈಜೋಡಿಸುತ್ತಾನೆ.]

ಬ್ರಾಹ್ಮಣ

(ಬೆಚ್ಚಿ ತನ್ನೊಳಗೆ)

ಇದೇನ್?
ತಪಂಗೆಯ್ವ ಪಾಷಂಡಿಗೆ ಕೈಮುಗಿವನೋ?
ಮೇಣ್, ಬಿಲ್ಗೆ ಹೆದೆಯಂ ಬಲಿವ ಬಿಜ್ಜೆಯ ಪಾಂಗೊ?
ಅರಿಯೆನೀ ಪಾರ್ಥಿವೇಂದ್ರನ ವಿಚಿತ್ರಕೃತಿಯಂ!

[ಬೆರಗುನೋಟದಿಂದ ನಿಲ್ಲುತ್ತಾನೆ.]

ಶ್ರೀರಾಮ

[ಬ್ರಾಹ್ಮಣನ ಕಡೆ ತಿರುಗಿ]

ಭೂಸುರೋತ್ತಮ,
ಕ್ಷತ್ರಿಯನೊಂದು ಸಂದೇಹಮಂ ನಿವಾರಿಸಿ
ಕೃಪೆಗೆಯ್ಯವೇಳ್ಕುಮ್.

ಬ್ರಾಹ್ಮಣ

[ವಿನಯದಿಂದ]

ನನ್ನಲ್ಪಬುದ್ಧಿಗೆ ತೋರ್ಪುದಂ ಪೇಳ್ವೆನ್.

ಶ್ರೀರಾಮ

[ವ್ಯಂಗ್ಯದಿಂದಾದರೂ ಗಂಭೀರವಾಗಿ]

ಪೂಜ್ಯರ್ ಉದಾತ್ತಬುದ್ಧಿಯಿನ್ ಒರೆಯವೇಳ್ಕುಮ್.

ಬ್ರಾಹ್ಮಣ

ಯಥಾ ಸಾಮರ್ಥ್ಯಮನ್, ರಾಜೇಂದ್ರ.

ಶ್ರೀರಾಮ

ತಪಂ ಪೂಜ್ಯಕರ್ಮಮಲ್ತೆ, ದ್ವಿಜೇಂದ್ರ?

ಬ್ರಾಹ್ಮಣ

ತಪಕ್ಕೆಣೆಯುಂಟೆ, ರಾಘವೇಂದ್ರ?

ಶ್ರೀರಾಮ

ತಪಂಗೆಯ್ವನುಂ ಪೂಜ್ಯನಲ್ತೆ, ವಿಬುಧವರ್ಯ?

ಬ್ರಾಹ್ಮಣ

ದಿಟಂ, ಧರ್ಮಮೂರ್ತಿ.

ಶ್ರೀರಾಮ

ಪೂಜ್ಯ ಹನನಂ ಪಾಪಕರಮಲ್ತೆ, ಸತ್ತ್ವಶೀಲ?

ಬ್ರಾಹ್ಮಣ

ನಿಸ್ಸಂಶಯಂ, ವಾಲಿಸಂಹಾರಿ.

ಶ್ರೀರಾಮ

[ಹುಬ್ಬುಗಂಟಿಕ್ಕಿ ನಿಧಾನವಾಗಿ ಹೇಳುತ್ತಾನೆ]

ಅಂತೆವೋಲ್
ಈ ತಪಸ್ವಿಯಂ ಕೊಲ್ವುದುಂ ಪಾಪಮಾಗದೆ?

ಬ್ರಾಹ್ಮಣ

ವಸಿಷ್ಠ ಶಿಷ್ಯ ,
ತರ್ಕಕೆ ಮಿಗಿಲ್ ಶ್ರುತಿವಾಕ್ಯಮೈಸೆ !
ತಪಕ್ಕನಧಿಕಾರಿ ಶೂದ್ರನ್
ಎಂಬುದದು ಶಾಸ್ತ್ರ ಪ್ರಸಿದ್ಧಂ.
ಕೃತಯುಗದೊಳ್ ತಪಕ್ಕರ್ಹರ್ ಬ್ರಾಹ್ಮಣರ್ ಮಾತ್ರಂ.
ತ್ರೇತೆಯೊಳ್ ಕ್ಷತ್ರಿಯರುಮ್ ಅರ್ಹರ್.
ವೈಶ್ಯರುಂ ತಪಂಗೆಯ್ವರಾ ದ್ವಾಪರದೊಳ್.
ಕಲಿಕಾಲಂ ಬರಲ್ ಶೂದ್ರನುಂ ತಪಸ್ವಿ!
ಅದು ಕಾರಣದಿಂ
ಕೃತಯುಗದೊಳ್ ನಾಲ್ಕುಂ ಕಾಲೊಳ್ ನಿಂತ ಧರ್ಮಂ
ತ್ರೇತೆಯೊಳ್ ಮೂಗಾಲಿಯಕ್ಕುಮ್;
ದ್ವಾಪರದೊಳ್ ದ್ವಿಪಾದಿ;
ಕಲಿಯುಗದೊಳ್ ಒಂಟಿಗಾಲೊಳ್ ಕುಂಟಿ
ತತ್ತರಿಸಿ ಸತ್ತುರುಳ್ವುದಾ ವಿಲಯದತ್ತಣ್ಗೆ.-
ಕೇಳ್, ವರ್ಣಾಶ್ರಮ ಧರ್ಮಪಾಲಕ,
ಪಾಲ್ ಪೂಜ್ಯಮಾದೊಡಂ,
ಜೀವಾತುವಾದೊಡಂ,
ತ್ಯಾಜ್ಯಮಾ ನಾಯ ಪಾಲ್:
ನಾಯ ಪಾಲ್ಗೆಣೆ ಶೂದ್ರನ ತಪಂ!

ಶ್ರೀರಾಮ

[ಕೋಪವನ್ನು ತೋರಗೊಡದೆ ವ್ಯಂಗ್ಯದಿಂದ]

ಸಾರ್ಥಕಮ್ ನೀಂ ಕಲ್ತ ಬಿಜ್ಜೆ, ಆಚಾರ್ಯ !

(ಸುಯ್ವನ್)

ನಿಮಗೆ ಸಮ್ಮತಮಲ್ತೆ ಬಾಣಪ್ರಯೋಗಂ ?

ಬ್ರಾಹ್ಮಣ

ಅಪ್ಪುದಯ್, ಧನುರ್ಧರ,
ಶಿಕ್ಷೆಗರ್ಹನೀ ಶೂದ್ರತಪಸ್ವಿ.

ಶ್ರೀರಾಮ

ಶೂದ್ರನಪ್ಪೊಡಂ ತಪಂ ಶಕ್ತಿದಾಯಕಂ.
ಸಾಲದೀತನ ಕೊಲೆಗೆ ಸಾಮಾನ್ಯಸಾಯಕಂ.

ಬ್ರಾಹ್ಮಣ

ಆವ ದಿವ್ಯಾಸ್ತ್ರದಿಂ ದೈತ್ಯೇಂದ್ರ ರಾವಣನ
ದಶಶಿರಗಳುರುಳಿದುವೊ ಅದನೆ ತುಡು, ಅರಿಂದಮ;
ಪಾಪ ಕರ್ಮದೊಳೀತನಾತಂಗೆ ಕೀಳಲ್ಲ.

ಶ್ರೀರಾಮ

ಬ್ರಹ್ಮಾಸ್ತ್ರಂ ಅತಿಭಯಂಕರಂ, ದ್ವಿಜನ್ಮ.
ತನ್ನರಿಯನ್ ಅರಿಯದೆಯೆ ಬಿಡದೆಂತಾದೊಡಂ.

ಬ್ರಾಹ್ಮಣ

ಈ ಪಾಷಂಡಿಗದು ತಕ್ಕುದೆ ವಲಂ ;
ತುಡು, ಕೋದಂಡಪಾಣಿ !

[ಶ್ರೀರಾಮನು ಬತ್ತಳಿಕೆಗೆ ಕೈಯಿಕ್ಕುತ್ತಾನೆ. ಭೂಮಿ ನಡುಗುತ್ತದೆ. ಗಗನ ಗುಡುಗುತ್ತದೆ. ಬ್ರಾಹ್ಮಣನು ಹೆದರಿ, ಸೆಡೆತು, ರಾಮನ ಮರೆಗೆ ಹೋಗುತ್ತಾನೆ. ಮೃತ್ಯು ಬೆಪ್ಪಾಗಿ ಕೂಗುತ್ತದೆ.]

ಮೃತ್ಯು

ತಾಳ್ ತಾಳ್, ಋತಪ್ರಭೂ !

ಶ್ರೀರಾಮ

(ಮೃತ್ಯುವನ್ನು ಲಕ್ಷಿಸಿ)

ನಿನಗಿದೇನ್ ತಲ್ಲಣಂ?

ಮೃತ್ಯು

ಇದೇನ್ ಆಟಮೋ ದಿಟಮೋ?
ನನಗರಿವುದೋರ್!
ನನಗಾವುದು ನಡೆವ ಬಟ್ಟೆ ?

ಶ್ರೀರಾಮ

(ಹುಬ್ಬುಗಂಟಿಕ್ಕಿ)

ಮೃತ್ಯೂ,
ಅಲಂಘ್ಯಮೇಗಳುಂ ಕರ್ತವ್ಯಮಖಿಲರ್ಗಂ!–
ಮಾರ್ಗದರ್ಶಿ ಈ ಮಹಾಸ್ತ್ರಂ.

ಮೃತ್ಯು

ಆಜ್ಞೆ!

(ತಲೆಬಾಗಿ, ಅನುಸಾರಿಯಾಗಲು, ಸಿದ್ಧವಾಗುತ್ತದೆ.)

[ಶ್ರೀರಾಮನು ಬ್ರಹ್ಮಾಸ್ತ್ರವನ್ನು ತೊಟ್ಟು, ''ಅರಸಿ ಕೊಲ್ ಅರಗುಲಿಯನ್!'' ಎಂದು ಆಘೋಷಿಸಿ, ಸೆಳೆದು ಬಿಡುತ್ತಾನೆ. ಮಿಂಚು ತಳಿಸುತ್ತದೆ. ಸಿಡಿಲೆರಗುತ್ತದೆ. ಬಿರುಗಾಳಿ ಭೋರಿಡುತ್ತದೆ. ಧೂಳಿ ಕವಿಯುತ್ತದೆ. ಅರಣ್ಯ ಸಮಸ್ತವೂ ತಪಿಸಿ ಚೀತ್ಕರಿಸುತ್ತದೆ. ಮೃತ್ಯುವಿನ ಕರಾಳಛಾಯೆ ರೌದ್ರರೋಷದಿಂದಲೂ ಶರವೇಗದಿಂದಲೂ ಅಸ್ತ್ರವನ್ನು ಹಿಂಬಾಲಿಸುತ್ತದೆ. ತಪಸ್ವಿಯ ಸಮೀಪಕ್ಕೈದಿದ ಬ್ರಹ್ಮಾಸ್ತ್ರವು ತನ್ನ ಉಗ್ರತೆಯನ್ನುಳಿದು, ವಿನೀತವಾಗಿ, ಶಂಬೂಕ ಋಷಿಯನ್ನು ಬಲಗೊಂಡು ಅಡ್ಡಬೀಳುತ್ತದೆ. ಮೃತ್ಯುವು ಅದನ್ನೇ ಅನುಕರಿಸುತ್ತದೆ. ಬೆಬ್ಬಳಿಸಿ ನೋಡುತ್ತಿರುವ ಬ್ರಾಹ್ಮಣನಿಗೆ ಶ್ರೀರಾಮನು ಮುಗುಳುನಗೆಗೂಡಿ ಹೇಳುತ್ತಾನೆ.)

ಶ್ರೀರಾಮ

ಇದೇನ್, ಆಚಾರ್ಯ?

ಬ್ರಾಹ್ಮಣ

ಹೇ ದಾಶರಥಿ, ಇದೆಲ್ಲಂ ಶೂದ್ರತಪಸ್ಸಿನ
ತಮಃಪ್ರಭಾವಮೆ ದಲ್!
ನೀನೆಚ್ಚ ಬ್ರಹ್ಮಾಸ್ತ್ರಮುಂ ಆಯ್ತೆ ನಿಷ್ಫಲಂ?

ಶ್ರೀರಾಮ

ಬ್ರಹ್ಮಾಸ್ತ್ರಮಾದಪುದೆ ನಿಷ್ಫಲಂ?
ಈಗಳೆಯೆ ಸಫಲಮುಕ್ಕುಂ.

ಬ್ರಾಹ್ಮಣ

[ಅಚ್ಚರಿಯಿಂದ]

ಎಂತು?

ಶ್ರೀರಾಮ

ಋಷಿವರಗೆ ಮರ್ಯಾದೆಯಂ ಸಲಿಸಿ,
ತದನಂತರಂ, ಬರ್ಪುದಿತ್ತಣ್ಗೆ.

ಬ್ರಾಹ್ಮಣ

ಮತ್ತಮಿತ್ತಣ್ಗೆ ಅದೇಕಯ್?

ಶ್ರೀರಾಮ

ಧ್ವಂಸಗೆಯ್ಯಲ್ಕೆ ತನ್ನ ಹಗೆಯನ್!

ಬ್ರಾಹ್ಮಣ

ಆರನ್?

ಶ್ರೀರಾಮ

ಅಧರ್ಮಿಯನ್.

ಬ್ರಾಹ್ಮಣ

ಆ ಶೂದ್ರನನೆ?

ಶ್ರೀರಾಮ

ಅಲ್ತಲ್ತು. ಬ್ರಾಹ್ಮಣವರೇಣ್ಯನನ್!

ಬ್ರಾಹ್ಮಣ

ಬ್ರಾಹ್ಮಣವರೇಣ್ಯನನ್?

ಶ್ರೀರಾಮ

(ದರ್ಪಧ್ವನಿಯಿಂದ)

ಪೂಜ್ಯರನ್ ಅವಜ್ಞೆಗೆಯ್ದಾತನನ್;
ಶಾಸ್ತ್ರಸಂಭ್ರಾಂತನನ್, ದುರ್ವಿನೀತನನ್!

ಬ್ರಾಹ್ಮಣ

[ಶ್ರೀರಾಮನ ಇಂಗಿತಕ್ಕಳ್ಕಿ]

ಆಃ ? !

ಶ್ರೀರಾಮ

[ಬ್ರಾಹ್ಮಣನ ಕಡೆಗೆ ನೋಡದೆ]

ನಿನ್ನನ್, ದ್ವಿಜೋತ್ತಮ!

ಬ್ರಾಹ್ಮಣ

ರಕ್ಷಿಸು, ಅನಾಥರಕ್ಷಕಾ, ದೀನಬಂಧೂ!

[ಕಾಲ್ವಿಡಿಯಲೆಳಸುತ್ತಾನೆ.]

ಶ್ರೀರಾಮ

[ಅವನ ಕಡೆಗೆ ನೋಡದೆ]

ನೀಮ್ ಅವಜ್ಞೆಗೆಯ್ದುದು ನನ್ನನಲ್ತು.

ಬ್ರಾಹ್ಮಣ

ಗತಿಯೇನೆನಗೆ ಬಟ್ಟೆದೋರಯ್,
ಕ್ಷಮಾಕನ್ಯಾ ಜೀವಿತೇಶ್ವರ!

ಶ್ರೀರಾಮ

[ಅವನ ಕಡೆಗೆ ನೋಡದೆ]

ಮಾರ್ಗದರ್ಶಿ ಆ ಮಹಾಸ್ತ್ರಂ!

ಬ್ರಾಹ್ಮಣ

ಅಂತೆಗೆಯ್ವೆನ್; ನಿನ್ನಾಜ್ಞೆ.

ಶ್ರೀರಾಮ

[ಅವನನ್ನು ನೋಡಿ ದಯೆಯಿಂದ]

ಸಾಲದಿಲ್ಲಿಗೆ ಬರಿಯ ಆಜ್ಞಾಪಾಲನಂ.
ಕಣ್‌ದೆರೆಯವೇಳ್ಕುಂ ಬುಧಪ್ರಜ್ಞೆಯುಂ, ದ್ವಿಜನ್ಮ:
ತಂದೆಯುಂ ಬರ್ದುಕುವನ್? ಕಂದನುಂ ಬಳ್ದಪನ್.

ಬ್ರಾಹ್ಮಣ

ಅಶಾಸ್ತ್ರಮೆಂದಳ್ಕುವೆನ್, ಕ್ಷತ್ರಿಯೋತ್ತಮ.

ಶ್ರೀರಾಮ

ಸನ್ಮತಿಯ ಸತ್ಕೃತಿಗೆ ಶಾಸ್ತ್ರದ ನೆರಂ ಬೇಕೆ?
ಆದೊಡಂ ನಿನಗೋಸುಗಮ್ ಒರೆವೆನೊಂದನ್
ಶ್ಲೋಕಪ್ರಮಾಣಮನ್: ಕೇಳ್, ಶ್ರೋತ್ರೀಯ!

ಆಕಾಶವಾಕ್

''ಕೇವಲಂ ಶಾಸ್ತ್ರಮಾಶ್ರಿತ್ಯ ನ ಕರ್ತವ್ಯೋ ವಿನಿರ್ಣಯಃ!
ಯುಕ್ತಿಹೀನ ವಿಚಾರೇ ತು ಧರ್ಮಹಾನಿಃ ಪ್ರಜಾಯತೇ॥''

ಬ್ರಾಹ್ಮಣ

[ಎವೆಯಿಕ್ಕದೆ ಶ್ರೀರಾಮನನ್ನೆ ನೋಡುತ್ತಾ ತುಸು ಹೊತ್ತು ನಿಂತು, ತೆಕ್ಕನೆ]
ಬೋಧಮಾಯ್ತೆನಗೀಗಳ್, ಮಹಾಪ್ರಾಜ್ಞ.
ಬುದ್ಧಿಗಲಿಸಿದಯ್ ಸಂಪ್ರದಾಯಬದ್ಧಂಗೆ,
ಶಾಸ್ತ್ರಸಂಮೂಢಂಗೆ, ಜಾತಿಗರ್ವಾಂಧಂಗೆ.–
ಆವ ಜಾತಿಯ ತರುವೊ? ಇಂಧನಕೆ ಹೊರತುಂಟೆ?
ಬೆಂಕೆಗೇಂ ಭೇದಮೆ? ದಳ್ಳುರಿಗೆ ದಾಕ್ಷಿಣ್ಯವೆ?
ಆರಾದರೇನ್? ಆರಾಧ್ಯರ್ ತಪೋಧನರ್!
ನಮಸ್ಕಾರಮೆ ಪುಣ್ಯಂ; ತಿರಸ್ಕಾರಮೆ ಪಾಪಂ!

ಶ್ರೀರಾಮ

ಅವರ್ಗೇನ್ ಗೆಯ್ದೊಡಂ ಪುಣ್ಯಮೆಂದರಿವಿರೀಗಳ್:
ಭೂಮದಿಂದೆಂತಾದೊಡಂ ಅಲ್ಪಫಲಮಕ್ಕುಮೇ?
ಪೀಡಿಸಿದೊಡಂ ಇಕ್ಷು ಮಧುರಸವನೀವಂತೆ,
ಕಡೆದೊಡಮ್ ಕಡಲ್ ಅಮೃತಮಂ ಕೊಡುವಂತೆ,
ನಿಮಗೊಳ್ಳಿತಕ್ಕುಮ್, ವಿಪ್ರದೇವ!

[ಮುಂದೆ ಮುಂದೆ ತೂಣಗೊಂಡವನಂತೆ ನಡೆದು ಬ್ರಾಹ್ಮಣನು ಶಂಬೂಕ ಮಹರ್ಷಿಗೆ ಾಷ್ಟಾಂಗಪ್ರಮಾಣ ಮಾಡುತ್ತಾನೆ. ವನವೆಲ್ಲ ಸಸಂಭ್ರಮವಾಗುತ್ತದೆ. ಹೂಮಳೆಗರೆಯುತ್ತದೆ. ೇವದುಂದುಭಿ ಮೊಳಗುತ್ತದೆ. ಮೃತ್ಯುಛಾಯೆ ಬೇಗ ಬೇಗನೆ ಓಡಿ ಕಣ್ಮರೆಯಾಗುತ್ತದೆ. ್ರಾಹ್ಮಣಕುಮಾರನು ಮಲಗಿದ್ದವನು ಏಳುವಂತೆ ಎದ್ದು ಕಣ್ಣುಜ್ಜಿಕೊಂಡು, ಸುತ್ತಲೂ ನೋಡಿ, ತನ್ನ ಂದೆಯನ್ನು ಕರೆಯುತ್ತಾನೆ.]

ಕುಮಾರ

ತಾತ! ತಾತ! — ಓ ತಾತ—
ಹೂ ಕುಯ್ಯುತಿದ್ದವನ್ ಇಲ್ಲಿಯೆ ಮಲಗಿದೆನೆ?-
ಎತ್ತವೋದನೊ ತಾತನ್ ನನ್ನನಿಲ್ಲಿಯೆ ಬಿಟ್ಟು?
[ಹೂಬುಟ್ಟಿ ತೆಗೆದುಕೊಂಡು ಮುಂಬರಿದು ರಾಮನನ್ನು ನೋಡಿ]
ಆರೀತನ್ ರುಂದ್ರಸತ್ತ್ವನ್? ದೇವತೆವೋಲ್ ಪೊಳೆವನ್!

ಶ್ರೀರಾಮ

ಅಂಜದಿರ್, ಬಾ ವತ್ಸ, ನಿನ್ನಯ್ಯನದೋ...
[ತೋರುತ್ತಾನೆ.]

[ಎದ್ದು ಬರುತ್ತಿದ್ದಾ ಹೊಸ ತೇಜಸ್ಸಿನಿಂದ ಹೊಳೆಯುತ್ತಿದ್ದಾ ಬ್ರಾಹ್ಮಣನನ್ನು ನೋಡಿ ಕುಮಾರನ "ತಾತ! ತಾತಾ!" ಎನ್ನುತ್ತಾ ಓಡಿಹೋಗಿ ತಬ್ಬಿಕೊಳ್ಳುತ್ತಾನೆ. ಮಾತಿಲ್ಲದ ಹರ್ಷದಿಂದ ಕಣ್ಣೀರಿಡುತ ಬ್ರಾಹ್ಮಣನು ಮಗನನ್ನು ರಾಮನೆಡೆಗೆ ಕರೆತರುತ್ತಾನೆ.]

ಬ್ರಾಹ್ಮಣ

[ಸಗದ್ಗದನಾಗಿ]
ಕೈಮುಗಿ, ಕಂದಾ, ಸೀತಾಪತಿಗೆ.
ರಾಜರಾಜೇಂದ್ರಂಗೆ ! ಶ್ರೀರಾಮಚಂದ್ರಂಗೆ !
ನಮ್ಮಿರ್ವರುಮನ್ ಪೊರೆದಂಗೆ !

[ಕುಮಾರನು ಹಿಗ್ಗಿ ಕೈಮುಗಿಯುತ್ತಾನೆ. ಶ್ರೀರಾಮನು ಅವನನ್ನೆತ್ತಿ ಮುದ್ದಾಡಿ, ಶಂಬೂ ಋಷಿಯನ್ನು ತೋರಿಸುತ್ತಾನೆ.]

ಶ್ರೀರಾಮ

ನಮಸ್ಕರಿಸಾ ಮಹಾತಪಸ್ವಿಗೆ, ದ್ವಿಜಕುಮಾರ.
ಋಷಿಕೃಪೆಯಿಂ ನೀನೀಗಳ್ ದಿಟದಿಂ ದ್ವಿಜನ್.
ತಪಂ ತಾನಿರ್ಪೆಡೆಯೊಳೆ ದೂರಕರ್ಮಿ !
[ಕುಮಾರನು ಕೈಮುಗಿಯುತ್ತಾನೆ.]
ನಿನ್ನ ಕೈಗಳೆ ನಿನ್ನನೆತ್ತಿರ್ಪನ್ನ ಕೈಗಳಕ್ಕೆ !
ಅಖಿಲರ್ಗಂ ಶ್ರೇಯಮಕ್ಕೆ!
ರಾಜ್ಯ ನಿರ್ವಿಘ್ನಮಕ್ಕೆ ! ಋತಂ ಗೆಲ್ಗೆ !

[ಕುಮಾರನಂತೆ ಬ್ರಾಹ್ಮಣನೂ ಕೈಮುಗಿಯುತ್ತಾನೆ. ಶಂಬೂಕಋಷಿಯನ್ನು ಸುತ್ತಿಮುತ್ತಿ ಹೊದೆಯ ಹಳು ಅಲುಗುತ್ತದೆ. ತೋಳ್ಗಳೆರಡು ಹೊರದೋರಿ ಒಯ್ಯನೆ ಆಶೀರ್ವಾದ ಮುದ್ರೆಯ ಸ್ಥಾಯಿಯಾಗುತ್ತವೆ. ದೇವವೀಣಾ ಗಾನವು ವಾಯುಮಂಡಲವನ್ನೆಲ್ಲ ತುಂಬುತ್ತದೆ. ಪುಷ್ಪವೃಷ್ಟಿಯಾ ಆ ವೃಷ್ಟಿ ಧಾರೆಯೆ ನೆಯ್ದ ಜವನಿಕೆಯೆಂಬಂತೆ ದೃಶ್ಯದ ಮೇಲೆ ತೆರೆ ಬೀಳುತ್ತದೆ.]

ಬೆರಳ್ ಗೆ ಕೊರಳ್

ಪಾತ್ರಗಳು

ಅಬ್ಬೆ

ಏಕಲವ್ಯ

ಅಶ್ವತ್ಥಾಮ

ದ್ರೋಣ

ಶ್ರೀಯವರಿಗೆ

ಅಂದು ನಿಮ್ಮಳ್ಕರೆಯೆ ಪರಸಿತೆನ್ನಂ ಮೊದಲ್:
ಇಂದು ರಾಮಾಯಣಕೆ ತಿರುಗಿ ಆ ಕೊಳಲಿನ ತೊದಲ್
ಕಾವ್ಯಗೈದಿದೆ ಬೃಹದ್‌ಗಾನಮಂ. ''ನನ್ನೊಡನೆ ಬಾ;
ಕನ್ನಡದ ನಾಡನೆಳ್ಚರಿಸುವಾವೇಶಮಂ ತಾ.
ವಾಙ್ಮಯ ತಪೋಬಲದಿ ಜಿಹ್ವಾತಟಿಚ್ಛಕ್ತಿ ತಾಂ
ಹೃದಯ ಗಹ್ವರದಲ್ಲಿ ಚಿಜ್ಜ್ಯೋತಿಃ ಪ್ರದೀಪಮಂ.
ಪೊತ್ತಿಪೋಲ್ ಮಾಳ್ಪಂ, ತವಿಸಿ ತಮಶ್ಶಾಪಮಂ.''
– ಇಂತೆನಿತ್ತೆನಿತೊ ನೀಂ ಪೆಳ್ದೆನ್ನ ಕರೆದೊಡಂ
ನಾಂ ಪೊರಮಟ್ಟೆನಿಲ್ಲೆನ್ನ ಪೊಕ್ಕ ವಲ್ಮೀಕದಿಂ:
''ನಿಮ್ಮ ಧರ್ಮಂ ನಿಮಗೆ; ನನ್ನ ಧರ್ಮಂ ನನಗೆ.
ಪಲವು ಬಟ್ಟೆಗಳಲ್ತೆ ಭಗವದಿಚ್ಛೆಯ ಮನೆಗೆ?
– ಕೈಕೊಂಡ ರಸತಪಸ್ ಸಿದ್ಧಿಯ ಅನಂತರಮೆ
ನೋಳ್ಪೆನ್; ಅದಕಿಂ ಮುನ್ನ ಏಳ್ವುದೇಂ ತರಮೆ?''
ಎಂದೆನ್. ಅರಿತವರಲ್ತೆ ಸೊಗಸುತೆಂದಿರಿ ''ನಲ್!
ನಿನ್ನಾ ತಪಸ್ಯೆಯಿಂ ನಮಗಕ್ಕೆ ಋದ್ಧಿ! ಗೆಲ್!''
ಆ ಋದ್ಧಿಯ ಸಮುದ್ರದ ತರಂಗಮೊಂದೆನಲ್
ನಿಮಗಿದು ನಿವೇದನಂ ಈ ''ಬೆರಳ್ ಗೆ ಕೊರಳ್!''

ಬೆರಳ್ ಗೆ ಕೊರಳ್

ದೃಶ್ಯ ೧

ಗುರು

[ಚುಕ್ಕಿ ಕಿಕ್ಕಿರಿದ ಬಾನೆ ಕಣ್ಣಾಗಿ ಸಹಸ್ರಾಕ್ಷಿಣಿಯಾದ ವ್ಯೋಮದೇವಿ ಭೂಮಿಯ ಕಡೆ ನೋಡುತ್ತಿದ್ದಾಳೆ. ಕರಿಯಿರುಳು ತುದಿಯನೆಯ್ದುತಿದೆ. ಕತ್ತಲೆಯ ದಟ್ಟತೆರೆ ಬೆಟ್ಟಗಾಡಿನ ಮೇಲೆ ಕವಿದಿದ್ದರೂ ಮೂಡಣದ ನಿಡುದೂರದ ದಿಗಂತ ರೇಖೆಯ ಗುರುತು ಕಾಣುವಂತೆ ಬಾನ ಕರೆಯಲ್ಲಿ ನಸುಗುವೆಳಗು ಮಲರತೊಡಗಿದೆ. ಮೆಲ್ಲಮೆಲ್ಲನೆ ಉಷಃಕಾಂತಿ ಹೆಚ್ಚಿದಂತೆಲ್ಲ, ಕತ್ತಲೆಯ ಕಡಲಿನಲ್ಲಿ ಮುಳುಗಿ ಹುದುಗಿದಂತಿದ್ದ ಕಣಿವೆ ಮಲೆಗಾಡು ಶ್ರೇಣಿ ಶ್ರೇಣಿಯಾಗಿ ಇನಿತಿನಿತೆ ದೃಗ್ಗೋಚರವಾಗುತ್ತವೆ. ಒಮ್ಮೆ ಇಮ್ಮೆ ಕೋಳ್ಳಿಗಗಳ ಗರ್ಜನೆಯಿಂದ ಕ್ಷುಬ್ಧವಾಗಿ ಮತ್ತೆ ಅಬ್ಬಿಯ ದುಮುಕುದನಿ ವಿನಾ ನಿಶ್ಶಬ್ದ ಅಬ್ಧಿಯಾಗಿದ್ದ ಅರಣ್ಯದಲ್ಲಿ ಅಲ್ಲೊಂದು ಇಲ್ಲೊಂದು ದನಿಯ ಅಲೆ ಹಕ್ಕಿಗೊರಲಿಂದುಣ್ಮಿ, ಇಂಚರವಾಗಿ ಸಂಚರಿಸಿ, ವಿಪಿನ ದೇಶದ ಅನಿಲ ಶರೀರ ಪುಲಕಿತವಾಗುತ್ತದೆ. ಕತ್ತಲೆಯ ಬಸಿರ ಅಂತರಾಳದಿಂದಲೆಂಬಂತೆ, ಬಹುದೂರದಿಂದ ಮೊದಲಾಗಿ ಹತ್ತೆ ಹತ್ತೆ ಬಳಿಸಾರುವಂತೆ, ಗುರುಸ್ತುತಿ ಧೀರವಾಗಿ, ಮಧುರವಾಗಿ, ಭಕ್ತಿಭಾವ ಪೂರ್ವಕವಾಗಿ, ತರಂಗ ತರಂಗಾಯತವಾಗಿ, ದಿಗಂತದಿಂದ ಒಯ್ಯೊಯ್ಯನೆ ತುಳುಕುವ ಬೆಳಕಿನೊಡನೆ ಸ್ಪರ್ಧಿಸುವಂತೆ ಬುಗ್ಗೆಯುಕ್ಕಿ ಕೇಳಿಬರುತ್ತದೆ.]

ಓಂ

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।
ಗುರುರೇವ ಪರಂಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥
ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥
ಅಖಂಡ ಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಂ ।
ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥
ಚಿನ್ಮಯಂ ವ್ಯಾಪಿತಂ ಸರ್ವಂ ತ್ರೈಲೋಕ್ಯಂ ಸಚರಾಚರಂ ।
ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥
ಅನೇಕ ಜನ್ಮ ಸಂಪ್ರಾಪ್ತ ಕರ್ಮಬಂಧ ವಿದಾಹಿನೇ ।
ಆತ್ಮಜ್ಞಾನ ಪ್ರದಾನೇನ ತಸ್ಮೈ ಶ್ರೀಗುರವೇ ನಮಃ ॥
ಮನ್ನಾಥಃ ಶ್ರೀ ಜಗನ್ನಾಥೋ ಮದ್ಗುರುಃ ಶ್ರೀ ಜಗದ್ಗುರುಃ ।
ಮಮಾತ್ಮಾ ಸರ್ವಭೂತಾತ್ಮಾ ತಸ್ಮೈ ಶ್ರೀಗುರವೇ ನಮಃ ॥
ಬ್ರಹ್ಮಾನಂದಂ ಪರಮಸುಖದಂ ಕೇವಲಂ ಜ್ಞಾನಮೂರ್ತಿಂ
ದ್ವಂದ್ವಾತೀತಂ ಗಗನಸದೃಶಂ ತತ್ತ್ವಮಸ್ಯಾದಿ ಲಕ್ಷ್ಯಂ ।

ಏಕಂ ನಿತ್ಯಂ ವಿಮಲಮಚಲಂ ಸರ್ವಧೀ ಸಾಕ್ಷಿಭೂತಂ
ಭಾವಾತೀತಂ ತ್ರಿಗುಣರಹಿತಂ ಸದ್ಗುರುಂ ತಂ ನಮಾಮಿ ॥
ನಿತ್ಯಂ ಶುದ್ಧಂ ನಿರಾಕಾರಂ ನಿರಾಭಾಸಂ ನಿರಂಜನಂ ।
ನಿತ್ಯಬೋಧಂ ಚಿದಾನಂದಂ ಗುರುಂ ಬ್ರಹ್ಮ ನಮಾಮ್ಯಹಂ॥

ಕ್ರಮೇಣ, ಬೆಳಕು ತುಳುಕಿ, ಪರ್ವತ ವಿಪಿನ ಕಂದರಾಳಿ ಸುಸ್ಪಷ್ಟತರವಾದ ಹಾಗೆಲ್ಲ, ಅಡವಿಯ ತುಂಬು ಮೌನವೆ ಮೊಳೆತು ಕವಲೊಡೆದು ವಿಧವಿಧ ವಿಹಂಗಗಳ ತರತರದ ಮಧುರ ಕೂಜಿತದಿಂದ ನಾದಮಯವಾಗುತ್ತದೆ. ಮರಮರದ ಹಸುರುಗಳೂ ಹೂವುಗಳ ಬಿಳಿದು ಹಳದಿ ಕೆಂಪು ಬಣ್ಣಗಳೂ ಕಂಗೊಳಿಸುತ್ತವೆ. ರಾತ್ರಿಯ ತಿಮಿರ ಗರ್ಭದಿಂದ ಇವುಗಳೆಲ್ಲ ಮೂಡಿದಂತೆಯೆ, ಅರುಣ ಮಾಗುತ್ತಿರುವ ಪ್ರಾಚೀದಿಕ್ತಟಕ್ಕೆದುರಾಗಿ ಮಲೆತು ತಲೆಯೆತ್ತಿರುವ ಮಲೆಯ ನೆತ್ತಿಯೊಂದರಲ್ಲಿ ಗಿಡ ಬಳ್ಳಿಗಳ ಇಡುಕುರೆಡೆಯೆಡೆ ಬೆಳ್ನೊರೆಯ ಚವರವೀಸಿ ಕಲ್ಲರೆಯ ನಡುವ ದುಮುಕುತ್ತಿರುವೊಂದಬ್ಬಿಯ ಬಳಿ, ಅದರ ಚರಣ ಸ್ಥಾನದಂತಿರುವ ಒಂದು ಹಾಸುಬಂಡೆಯ ಮೇಲೆ ಏಕಲವ್ಯನ ಗಾತ್ರ ಕೊರೆದು ಬಿಡಿಸಿದಂತೆ ಮೂಡಿ ಕಣ್‌ಗೊಳಿಸುತ್ತದೆ.

ಮೊದಮೊದಲು ಮಬ್ಬಾಗಿ ಸುತ್ತಲೂ ಎದ್ದಿರುವ ಕೋಡುಗಲ್ಲುಗಳೊಡನೆ ತಾನೂ ಒಂದು ಮನುಷ್ಯಾಕಾರದ ಕಲ್‌ಕೋಡಾಗಿ ಕಾಣಿಸಿಕೊಳ್ಳುತ್ತಾನೆ. ಉಷಃಕಾಂತಿ ಅರುಣ ದೀಪ್ತಿಗೆ ತಿರುಗಿದಂತೆಲ್ಲ ಅವನ ಆಕಾರದಿಂದ ರೂಪ ಹೊಮ್ಮುತ್ತದೆ. ಅಸ್ಥೂಲಕಾಯದ ದೀರ್ಘೋನ್ನತಾಕೃತಿ ನಸುಗಪ್ಪು, ಆದರೆ ಕಪ್ಪಲ್ಲ, ಮೈಬಣ್ಣ. ಸೊಂಟಕ್ಕೆ ಚಿರತೆಯ ಚರ್ಮ ಅಲಂಕೃತವಾಗಿದೆ ಬತ್ತಲೆಯಾಗಿರುವ ವಿಶಾಲ ವಕ್ಷಸ್ಥಲವು ತುಂಬಿದ ಮೆಯ್ಗೆ ಸೌಂದರ್ಯದ ಜೊತೆಗೆ ಗೌರವವನ್ನೂ ನಿವೇದಿಸುತ್ತಿದೆ. ಹುಲಿಯುಗುರುಗಳ ಕೋದ ಕಂಠಾಭರಣವೊಂದು ತುಂಬೆದೆಗೆ ಕಣ್ಣಾಸರಾಗದಂತೆ ರಕ್ಷೆಯಾಗಿದೆ. ತೋಳ್ಗಳೆರಡಕ್ಕೂ ಕಲ್ಮಣಿಗಳ ತೊಡವುಗಳಿವೆ. ಸರಳು ತುಂಬಿದ ಬತ್ತಳಿ ಹೆಗಲತ್ತಣಿಂದ ಹೆಡೆಯೆದ್ದಿದೆ. ಅದನ್ನು ಬೆನ್ಗೆ ಬಿಗಿದ ಸರ್ಪಚರ್ಮಪಟ್ಟಿಕೆ ಅಡ್ಡಡ್ಡವಾಗಿ ಹಾದುಹೋಗಿರುವ ವಕ್ಷ ದೇಶ, ಹಾವು ಸುತ್ತಿದ ಹುತ್ತದಂತೆ, ಭೀಮಕಾಂತವಾಗಿದೆ. ಮಿಂದು ಕೆದರಿದ ಕೂದಲು ಹೆಗಲಮೇಲ್ ಬಿದ್ದು ಬತ್ತಳಿಕೆಗೆ ಸಂವಾದಿಯಾಗಿ ಮತ್ತೊಂದು ಕಡೆಯಿಂದ ಬೆನ್ದೆಸೆಗೆ ಹರಿದಿದೆ. ಉದಯಸಮಯದ ಪೂರ್ವಾಕಾಶದಲ್ಲಿ ನಿಡು ಬೆಳ್‌ಮುಗಿಲು ಗೆರೆಹರಡುವಂತೆ ಹಣೆಯ ಮೇಲಣ ವಿಭೂತಿ ಪಟ್ಟೆಪಟ್ಟೆಯಾಗಿದೆ! ಕಣ್ಣು ಕರ್ರಗೆ, ಉಜ್ವಲ. ಮೂಗು ನೀಳವಾಗಿ ಗಿಣಕೊಕ್ಕಿನಂತೆ ತುಸು ಬಾಗಿದೆ. ತುಪ್ಪುಳ್ ಮೀಸೆ ಬಹು ಮೋಹಕ. ತೆಳ್‌ದುಟಿ ಮೂಗಿನ ನೀಳ್ಪಿಗೂ ಕಣ್ಣಿನ ಉಜ್ವಲತೆಗೂ ಹೊಯ್‌ಕಯ್ ಆಗಿ ಸಂಸ್ಕಾರದ ರುಚಿಸೂಕ್ಷ್ಮತೆಗೆ ಸಾಕ್ಷಿಯಾಗಿದೆ. ಎಡಗೈ ಮುಷ್ಟಿ ಹೆದೆಯೇರಿಸಿದ ಬಿಲ್ಲಿನ ತುದಿಯನ್ನು ಹಿಡಿದಿದೆ. ಬಿಲ್ಲಿನ ಮತ್ತೊಂದು ತುದಿ ಕಲ್ಲಿನ ಮೇಲೆ ಊರಿದೆ. ನಾರಿ ಸಡಿಲವಾಗಿದೆ.

ಅವನಿಗೆ ಬೆನ್ನೆಲೆ ನೀರ್‌ಬೀಳ. ಅಕ್ಕಪಕ್ಕದಲ್ಲಿ ನಿಡುಬಂಡೆಗಳು ಕೋಡು ಕೋಡಾಗಿ ಧೀರಭಂಗಿಯಿಂದ ಕರ್ರಗೆ ಎದ್ದು ನಿಂತಿವೆ. ಗಿಡಬಳ್ಳಿ ಅಲ್ಲಲ್ಲಿ ಹೆಣೆದುಕೊಂಡಿವೆ. ಏಕಲವ್ಯನ ಬಲಭಾಗಕ್ಕೆ, ಅವನಿಗೆ ಮುಟ್ಟಮುಟ್ಟ ಪಕ್ಕದಲ್ಲಿ, ಅತಿ ಸ್ಥೂಲ ದೃಷ್ಟಿಯಿಂದ ನರಾಕಾರ ಎನ್ನಬಹುದಾದ ಒಂದು ಬಂಡೆಗೋಡು ಕಾಣಿಸುತ್ತಿದೆ. ಅದರ ತುಂಬ ಹೂವು, ಎಲೆ, ನವಿಲ್‌ಗರಿ, ಹಕ್ಕಿಯ ಬಣ್ಣಪುಕ್ಕ, ಹಂದಿಯ ಐಕಿಲ್ ಬೆಳ್‌ಕೋರೆ, ಚಿರತೆಯ ಚಿತ್ರಮಯ ಚರ್ಮ ಮೊದಲಾದುವುಗಳಿಂದ ವಿರಚಿಸಿದ ಅಲಂಕಾರಗಳು ಮೆರೆಯುತ್ತವೆ. ಆ ಕಲ್‌ಗೋಡಿನ ಅಗ

ದೇಶದಲ್ಲಿ ಸುಣ್ಣದ ದಪ್ಪ ಗೆರೆಗಳಿಂದ ಮನುಷ್ಯ ಮುಖರೂಪ ಚಿತ್ರತವಾಗಿದೆ. ಆ ಶೈಲವಿಗ್ರಹಕ್ಕೆ ಬಹುಕಾಲದಿಂದಲೂ ಪೂಜೆ ನಡೆಯುತ್ತಿದೆ ಎಂಬ ಲಕ್ಷಣ ಸುತ್ತಮುತ್ತಲೂ ಸುಸ್ಪಷ್ಟ. ಅದುವೆ ಏಕಲವ್ಯನು ಗುರುವೆಂದು ಪೂಜಿಸುತ್ತಿರುವ ದ್ರೋಣಪ್ರತೀಕ.

ಏಕಲವ್ಯ – (ಪೂರ್ವೋಕ್ತ ವರ್ಣನೆಗೆ ವಿವರವಿವರವಾಗಿ, ಅನುಸಾರವಾಗಿ, ವಾಚಿಕ ಆಂಗಿಕ ವ್ಯಾಪಾರಗಳು ಅನ್ವಿತವಾಗುವಂತೆ)

ಈಸು ದಿನ ಬದುಕಿದುದಕೀ ಸುದಿನಮನ್ ಕಂಡೆನ್:
ಇಂದು ಗುರುವೈತಪ್ಪನೆನ್ನೀ ವನಸ್ಥಲಕೆ!
ಪವಿತ್ರತರಮಪ್ಪುದೀ ಕಾಡುಮಲೆ ದಲ್ ದಿಟಂ,
ಪೂಜ್ಯ ಗುರುಪದ ಧೂಳಿಯಿಂ!

(ಉಷಃಕಾಲದ ದಿಗಂತದ ಕಡೆಗೆ ನಿಡುನೋಡಿ ಉನ್ಮೇಷಿತ ಉತ್ಸಾಹದಿಂದ)

ದಿಟಮ್ ಇಂದು ಗುರು ಬರ್ಪುದೆನ್ನೀ ವನಸ್ಥಲಕೆ!
ಕಣ್ ತೆರೆ, ಓ ನಿಮೀಲಿತಾ ಉಷಾಲಲಿತೆ,
ನಿನ್ನಾ ದಿಗಂತ ದೀರ್ಘ ಕಟಾಕ್ಷ ವಿಕ್ಷೇಪದಿಂ
ಸುಪ್ರಸನ್ನತೆಯಕ್ಕೆ ಈ ಗಿರಿಧರಾ ಚೇತನಕೆ.
ಮೂಡಿ ಬಾ, ಓ ನಲ್ ಪಗಲೆ,
ರಶ್ಮಿಸೂತ್ರದ ಕಾಂತಿಧೌತ್ರದಿ ಅಲಂಕರಿಸುತೀ
ವಿಪಿನ ಸುಂದರ ಪರ್ವತಾಂಗಮಂ!

(ತುಸುಹೊತ್ತು ನೀರವವಾಗಿ ದೃಷ್ಟಿಪ್ರಸಾರಮಾಡುತ್ತಾ ಮತ್ತೆ ಉಕ್ಕುವ ಉತ್ಸಾಹದಿಂದ)

ದಿಟಮ್ ಇಂದು ಗುರು ಬರ್ಪನೆನ್ನೀ ವನಸ್ಥಲಕೆ!
ಕಂದರದೊಳಲೆಯುತಿಹ ಮಂಜು ಮೋಡಂ, ನೋಡ,
ಗುರುಪೃಷ್ಟ ಧವಳೋತ್ತರೀಯದಂಚಲಮನಲ್
ಸಂಚಲಿಸುತಿಪ್ಪುದು ಕೆರಳ್ದುತ್ಕಾಂಕ್ಷೆಯಿಂ.
ಆ! ಆಲಿಸಾ ಅಲೆಯುತಿಹ ಪರಪುಟ್ಟಸಂಚರಂ
ಬೆಳ್ಳಂಗೆಡೆಯುವೀ ಅಬ್ಬ್ರಯೊಂಕಾರಮಂ ಬೀರ್ದು
ಸಾರುತಿಹುದಿಂಗಿತದಿ ಗುರುದೇವನಾಗಮನಮಂ!
ಮಧುಕರೀ ಅಬ್ಬ್ರಮೊರೆಯುಂ ಸ್ತುತಿಯುಪ್ರೋಲ್ಲಾಸ್ಯಯುತಿ
ತಾನತಾನದಿ ಗಾನಗೈಯುತಿದೆ ಕಾಜಾಣವದೊ
ಸುಸ್ವನದಿ, ಕೇಳ್, ಸುಖಾಗಮನ ಸಂಗೀತಮಂ!

(ಮತ್ತೆ ಅತ್ತ ಇತ್ತ ಆಲಿ ನಟ್ಟು ನೋಡಿ)

ಅಲರಿಮ್, ಎಲೆ ಸಸ್ಯ ಸೋದರರಿರಾ,
ಪುಷ್ಪಮಯಮಪ್ಪವೋಲ್ ಗುರು ಬರ್ಪ ಗಿರಿಪಥಂ.
ಮೂಡಿ ಬರ್ಪೀ ಮುಂಬಿಸಿಲ ಹೊಂಬಣ್ಣದೊಳ್
ಮಿರುಮಿರುಗುವಿರ್ಬನಿಯ ತಳಿರ ತೋರಣಗಟ್ಟಿ
ಮದ್ಗುರುಗೆ ಸುಸ್ವಾಗತಂಗೆಯ್ಯಿಂ, ಓ ತರುಗಳಿರ.

(ತನ್ನ ಹಿಂಬದಿಯಿರುವ ಜಲಪಾತದ ಕಡೆ ನೋಡಿ, ಕಣ್‌ನಟ್ಟು, ಭಾವಾವೇಗದಿಂದ ಅದಕ್ಕೆ ಕೈಮುಗಿದು)

ದಿಟಂ, ದಲ್! ಇಂದು ಗುರು ಬಂದಿಪ್ಪನಾಗಳೆಯೆ
ನನ್ನೀ ಮನಃಸ್ಥಲಕೆ! ಗಿರಿಜಾತೆ, ಮನೋಲ್ಲಾಸೆ,
ಹೇ ಮಧುರೆ, ದುಮುದುಮುಕಿ ಮುತ್ತೆರಚಿ ನಲಿವ,
ಓ ಲಾಸ್ಯಮಯಿ, ನಿರ್ಝರಿಣಿ, ನಿನಗಿದೊ ನಮಸ್ಕಾರ!
ಗಿರಿ ಶಿವ ಜಟಾಜೂಟದಿ ಜಗುಳ್ದಿಳಿವ ಗಂಗೆ,
ಶೈಲ ಶಂಕರನಂಕವನಲಂಕರಿಪ
ಅರಣ್ಯ ಪಾರ್ವತಿಯ ತಂಗೆ,
ನನ್ನ ಕಿವಿಗಿಂದಾವ ಮಂತ್ರವನಿಂತು ಘೋಷಿಸುವೆ?
ಕಾಲ ಗಹ್ವರ ಗುಹ್ಯ ಗರ್ಭದೊಳ್
ಸುರುಳಿ ಸುತ್ತಿರುವಾವ ವಿಧಿಯಂ ಮೊರೆದು ಕರೆದು
ಜಾಗ್ರತಂಗೊಳಿಸುತಿಹೆ? ಪುಟ್ಟಿದಂದಿಂ ತೊಟ್ಟು
ನಿನ್ನ ಜೋಗುಳವೆನ್ನ ತೊಟ್ಟಿಲಂ ತೂಗಿರ್ಪುದಾದೊಡಂ
ನಿನ್ನ ನೀರ್ಗೊರಳಿಂದು ಬೇರೆಯೆಂಬಂದದಿಂ
ಹೃದಯಮಸ್ಥಿರಮಾಗೆ ಸಾರುತಿಹುದಾದೇಶಮಂ.
ಪೋದ ಜನ್ಮದ ಮೊರೆಯೊ? ಬರ್ಪ ಪುಟ್ಟಿನ ಕರೆಯೊ?
ಮೇಣ್, ಮುಂದಿರ್ಪ ಬಾಳಂ ಮುನ್ನೊರೆವ
ತೊರೆಯ ಮರೆಯಾಂತುಲಿವ ಬಿದಿಯ ನಾಲಗೆಯೊ?

(ಅಂತರ್ಮುಖಿಯಾಗಿ ನಿಡುಸುಯ್ದು ಚಿಂತಾಮುದ್ರೆಯಿಂದ)

ಪೋದಿರುಳ್ ಅದೆಂತಪ್ಪ ಕನಸು ಕಂಡೆನ್!

(ಹುಸು ಹೊತ್ತು ಭಾವಿಸುತ್ತ ನಿಂತು ಚಿಂತಾ ಪ್ರವಾಹವನ್ನು ತಡೆಗಟ್ಟಿ ನಿಲ್ಲಿಸುವ ಮುಖಮುದ್ರೆಯಿಂದ)

ದುಃಸ್ವಪ್ನಮಾದೊಡಂ ದಿವ್ಯಂ ದಿಟಂ!
ಇಂತಪ್ಪ ಶುಭದಿನಕೆ ಅದೆಂತಪ್ಪ ನಾಂದಿಯೊ!-

ಅದಂತಿರ್ಕೆ!-
ಶುಭಂ ಬಪ್ಪ ರೀತಿಯಂ ತರಿಸಲಲ್ ನಾಮಾರ್?
ದೈವಮೆ ಸಮರ್ಥಂ! ಮಾಣ್, ಮನಮೆ, ಮಾಣ್!
(ಇದ್ದಕ್ಕಿದ್ದಂತೆ ಮರುಕೊಳಿಸಿದ ಉತ್ಸಾಹದಿಂದ)
ಕಾಣ್, ಕಾಣ್, ಏನ್ ಚೆಲ್ವು ಮೂಡುತಿಹುದೀ
ಬೆಳ್ಳಂಗೆಡೆವ ನೀರ್‌ಬೀಳದೊಳ್!
ನೇಸರ್ ಕದಿರ್‌ಚವರಿ ತಾನ್ ಕುಂಚಮಂ ಬೀಸಲ್ಕ
ದೇನ್ ಮಾಯೆ! ಅದೊ ಕಾಣ್, ಪವಾಡಮೆ ದಿಟಂ
ಈ ಬಣ್ಣಂಗುಣಿವ ಕಾಮಧನುಗಳ್!

(ತನ್ನ ಧನುರ್ದಂಡವನೆತ್ತಿ ನೀರಾಟವಾಡುತ್ತಾನೆ. ಆರೊ ಕೂಗುವ ಸದ್ದು ನೀರ್ಮೊರೆಗೂಡಿ ಕೇಳಿಬರುತ್ತದೆ. ಅದನ್ನು ಗಮನಿಸದ ಏಕಲವ್ಯ ನೀರಾಡುತ್ತಲೆ ಇರುತ್ತಾನೆ. ಆ ಕರೆ ಇನ್ನೂ ಹತ್ತಿರವಾಗಿ ಸ್ಪಷ್ಟತರವಾಗುತ್ತದೆ. 'ಬಚ್ಚಾ ! ಓ ಬಚ್ಚಾ!' ಎಂಬ ದನಿಗೆ ಏಕಲವ್ಯ ತಟಕ್ಕನೆ ನಿಮಿರಿ ಕಿವಿಗೊಡುತ್ತಾನೆ.)

ಆರೊ ಕೂಗುವರಲ್ತೆ? ಈ ಅಬ್ಬಿಯಬ್ಬರಮೊ
ಪುಲಿಯ ಗರ್ಜನೆಯುಮಂ ನುಂಗಿ ನೊಣೆದಪುದು!
(ಮತ್ತೆ ''ಓ ಬಚ್ಚೂ! ಬಚ್ಚೂ ಓ!'' ಕೇಳಿಬರುತ್ತದೆ)
ಓವೊ, ಅಬ್ಬೆ ಇರಲ್‌ವೇಳ್ಕುಂ! (ನಗೆಗೂಡಿ)
ಅಬ್ಬಿಯಂ ಮಿರಲ್ಕೆ ಸೆಣಸಿದಪಳಲ್ತೆ! (ಚಿಂತಿಸಿ)
ಅರಸಿ ಬಂದಪಳೆನಗೆ ಬೆಳಗಿನುಣಿಸಂ ಕುಡಲ್:
ಇರುಳ ಕರ್ಪಳಿವ ಮುನ್ನಮೆಯೆ ಮುಂಬೊಳ್ತಿನೊಳೆ
ಅಬ್ಬೆಗೊರೆಯದೆ ಬಂದೆನೀಯೆಡೆಗೆ,
ಗುರುವಿನಾಗಮನದೊಂದು ಉತ್ಸಾಹದೊಳ್ ಕೊಚ್ಚಿ,
ವಿನಯಮಂ ಮರೆತು!

(ಮತ್ತೆ ಕರೆ ಕೇಳಿಸುತ್ತದೆ. ಏಕಲವ್ಯ ಗಟ್ಟಿಯಾಗಿ ಓ ಕೊಳ್ಳುತ್ತಾ ಮರಹಸುರು ತುಂಬಿ ಏರಿದ ಮಲೆಯ ಓರೆಯ ಕಡೆಗೆ, ಕರೆ ಕೇಳಿಬಂದ ದಿಕ್ಕಿಗೆ ಕಣ್ಣಾಗುತ್ತಾನೆ. ಮುಖದಲ್ಲಿ ನಗೆ ಅರಳುತ್ತದೆ. ತಾಯಿಯನ್ನು ಕಂಡ ಉಲ್ಲಾಸಕೆ.)

ಅಕ್ಕೊ, ಅಲ್ಲೆ ಬರುತಿರ್ಪಳಬ್ಬೆ!
ಏರಲಾರದೆ ಕೋಡುಗಲ್ಲೇರುತಿರ್ಪಳ್!
ಬಟ್ಟೆದಪ್ಪುವಳೇನೂ ಈ ಕಲ್ಮರಗಳಿರ್ಕಟ್ಟಿನೊಳ್!

(ಚಪ್ಪಾಳೆ ತಟ್ಟಿ ''ಅಬ್ಬೇ!'' ಎಂದು ಕೂಗಿ ತಾಯಿಯ ಗಮನವನ್ನು ತಾನಿರುವೆಡೆಗೆ

ನೆಳೆಯುತ್ತಾನೆ. ತಾನಿರುವ ಜಲಪಾತದ ದಿಬ್ಬಕ್ಕೆ ಬರುವಂತೆ ದಾರಿ ತೋರುವ ಸಲುವಾಗಿ ಕೈಸನ್ನೆ ಮಾಡುತ್ತಾನೆ.)

ಇತ್ತಲಿತ್ತಲ್, ಅಬ್ಬೆ,
ಆ ತಾರಿಮರನೆಡೆವಿಡಿದು ಬಾ!

(ಹಾಗೆಯೆ ನೋಡುತ್ತಿದ್ದು ತಾಯಿ ಸರಿದಾರಿ ಹಿಡಿದು ಕಣ್ಮರೆಯಾದುದನ್ನು ಕಂಡು ತುಂಟಗಣ್ಣು ಮಾಡಿ, ವಿನೋದವನ್ನು ನೆನೆದು ನಕ್ಕು)

ಇನ್ನೆಗಂ, ಒರ್ಮೆಯಾದೊಡಂ,
ಎನಿತೊ ಸೂಳ್ ಬಾ ಎಂದು ಪೀಡಿಸಿದೊಡಂ,
ಅಬ್ಬೆ ಇಲ್ಲಿಗೈತಂದುದಿಲ್ಲ.
ಇಂದಚ್ಚರಿಯನೊಂದನೊಡ್ಡುವೆನ್,
ಬಿನದಂ ಬಡಿಸಿ ನಗಿಸುವೆನ್!

(ಜಲಪಾತದ ಹಿಂಗಡೆಗೆ ನೀರಧಾರೆಯ ಬೆನ್ನ ಮುಳುಗಿ ಹೋದನೆಂಬಂತೆ ಮರೆಯಾಗುತ್ತಾನೆ. ಏಕಲವ್ಯನ ತಾಯಿ ಹೊಂಬಾಳೆಯಲ್ಲಿ ಉಣಿಸುಹೊತ್ತು ಏದುತ್ತ ಪ್ರವೇಶಿಸಿ, ಏಕಲವ್ಯನು ನಿಂತಿದ್ದ ಹಾಸುಬಂಡೆಗೆ ಬರುತ್ತಾಳೆ. ಅವಳಿಗೆ ನಡುವಯಸ್ಸು ಮೀರಿದೆ. ಮಲೆಯರ ಉಡುಗೆ ಬಿಗಿದುಟ್ಟಿದ್ದಾಳೆ. ತೊಡುಗೆ ಇಲ್ಲ. ಹಣೆಗೆ ವಿಭೂತಿ. ಸುತ್ತಲೂ ನೋಡಿ, ಯಾರನ್ನೂ ಕಾಣದೆ ಬೆರಗಾಗುತ್ತಾಳೆ.)

ಅಬ್ಬೆ- ಬಚ್ಚಾ! ಏ ಬಚ್ಚಾ! (ಸುತ್ತಲೂ ಹುಡುಕುನೋಡಿ)
ಈ ಎಡೆಯೆ ಇರ್ದವನ್ ಮತ್ತೆತ್ತಲೆಯ್ದಿದನ್?
ಕೂಳ್‌ವೊತ್ತು ಉಣಿಸನೀಯಲ್ಕರಿಸಿ ಸಾಕಾಯ್ತು!
ಉಂಡ ಮೇಲಾದಡಂ ಪೋಗಲಾಗದೆ ಅಡವಿಗೆ?
ಕಾಡೇನ್ ಮಂಜೆ? ಬಿಸಿಲೇರ್ದೊಡಳಿವುದಕೆ?
ನಿಚ್ಚಮುಂ ಇವನದು ಇದೊಂದು ಪಾಡು!
ಕಾಡು! ಕಾಡು! ಕಾಡು!
ಬೈಗು ಬೆಳಗೂ ಕಾಡು!
ಕನಸಿನಲ್ಲಿಯು ಕಾಡು!

(ತಕ್ಷಣ ಏಕಲವ್ಯನು ಪೂಜಿಸಿದ್ದ ದ್ರೋಣಪ್ರತೀಕವನ್ನು ಕಂಡು ಅಚ್ಚರಿಯಿಂದ ಕಣ್‌ನಟ್ಟು ನಿಲ್ಲುತ್ತಾಳೆ. ಅಚ್ಚರಿ ಬಿನದಕ್ಕೆ ತಿರುಗಿ ಮುಗುಳುನಗುತ್ತಾ ತಲೆಯೊಲೆಯುತ್ತಾ)

ಇದೇನ್ ಗೊಂಬೆಯಾಟಮೊ, ನನ್ನಣುಗಂಗೆ!
ಈ ಅಡವಿಯೊಳಗೆಲ್ಲಿ ನೋಡಿದೊಡಲ್ಲಿ
ಇವನ ಈ ಗೊಂಬೆಗಳ್! (ಒಂದು ತರನಾದ ನಿರ್ವೇಗದಿಂದ)

ಹ್ಲು! ಅಣುಗನಲ್ತೆ ಆಡಲಿ!
ಪಿಂತಿಲ್ಲ, ಮುಂತಿಲ್ಲ, ಬೆನ್ನಿಲ್ಲ, ಬಸಿರಿಲ್ಲ;
ಒರ್ವನೊಂಟಿಗನಲ್ತೆ? ಬೇಸರ್ ಕಳೆವುದೆಂತು?
ಮಿಗಗಳ್, ಪಕ್ಕಿಗಳ್, ಮರಗಳ್, ಕಲ್ಗಳ್,
ತಿಂಗಳ್, ನೇಸರ್, ಉದಯಾಸ್ತಂಗಳ್,
ತೊರೆಗಳ್, –(ಜಲಪಾತವನ್ನು ನೋಡುತ್ತಾ)
ಮೇಣೆಂತಪ್ಪ ನೀರ್‌ಬೀಳಗಳ್?
ಇವೆ ಅಲ್ತೆ ಒಡವುಟ್ಟುಗಳ್ ಮೇಣ್ ಒಡನಾಡಿಗಳ್!

(ಜಲಪಾತದ ಹಿಂದಿನಿಂದ ಏಕಲವ್ಯ ''ಅಬ್ಬೇ!'' ಎಂದು ಕೂಗಿ ಕರೆಯುತ್ತಾನೆ. ಅಬ್ಬೆ ಬೆಚ್ಚಿಬಿದ್ದು ಸುತ್ತಲೂ ನೋಡಿ)

ಇದೇನ್ ಬಚ್ಚನೊ? ಅರ್ಬ್ಬಿಯ ಪರೇತಮೊ?
ಆರ್ ಕರೆದವರ್!

(ತಾಯಿ ದಿಗ್‌ಭ್ರಾಂತೆಯಾಗುತ್ತಿರುವುದನ್ನು ಕಂಡು ಜಲಪಾತದ ನೀರ್‌ತೆರೆಯ ಹಿಂದಿನಿಂದ ಹಪ್ಪುಹ್ಹು ಎಂದು ಚಪ್ಪಾಳೆ ಹೊಡೆದು ನಗುತ್ತ ಏಕಲವ್ಯನು ತಾಯೆಡೆಗೆ ನೆಗೆದೋಡಿ ಬರುತ್ತಾನೆ.)

ಅಬ್ಬೆ–(ಬೆಚ್ಚಿ ಬಿದ್ದು ಹುಸಿಮುನಿಸಿನಿಂದ)

ಚಿಃ! ನಿನಗಿದೇನ್ ಬಿನದಮೊ ನನ್ನೊಡನೆ, ಬಚ್ಚು?
ಮೀಸೆ ಮೊಳೆದೋರ್ದಡಂ ನಿನಗಣುಗು ಬಿಡದು.

ಏಕಲವ್ಯ–(ಮುಗುಳು ನಗುತ್ತ)

ಅಬ್ಬೆ, ನೀನಿದಿರ್ ನಿಂದಿರಲ್
ಗಡ್ಡ ನರೆತೊಡಂ ಅಣುಗೆ ನಾನ್!
ಏನ್ ಪುಕ್ಕೊ ನಿನಗೆ? ದೆಯ್ಯಮೆಂದಳ್ಕಿದೆಯಾ?

ಅಬ್ಬೆ–(ಬೆರಗಾಗಿ ಒಂದಿನಿತೂ ಒದ್ದೆಯಾಗದ ಮಗನ ಮೆಯ್ಯನ್ನು ಈಕ್ಷಿಸುತ್ತಾ)-

ನೀರೊಳ್ ಅದೆಂತಿರ್ದೆಯೊ?
ಮುಳುಗಿಯುಂ ಮೆಯ್ ತೊಯ್ದುದಿಲ್ಲ!

ಏಕಲವ್ಯ–(ಹಾಸ್ಯಕ್ಕೆ)–ಮಂತ್ರಶಕ್ತಿ, ಅಬ್ಬೆ; ಜಲಸ್ತಂಭಮೆಂಬರ್!

ಅಬ್ಬೆ–ಮೊನ್ನೆ ಆ ಮಡುವಿನೊಳ್ ಅಡಿ ಜಗುಳ್ದುರುಳ್ದು
ತೊಪ್ಪನೆಯ ತೊಯ್ದು ನಡುನಡುಗುತ್ತೆಯ್ತಂದೆ!

ಏಕಲವ್ಯ–(ಹಾಸ್ಯ ಮುಖಮುದ್ರೆಯಿಂದ)

ನಿನ್ನೆ ತಾನಾದುದೀ ಸಿದ್ಧಿ, ಅಬ್ಬೆ!

(ತಾಯಿ ಬೆಕ್ಕಸವಡುತ್ತಿರಲು ಏಕಲವ್ಯನು ಜಲಪಾತದ ಕಡೆ ಕೈದೋರಿ)

ನಿನಗೇಂ ಮಂಕೆ, ಅಬ್ಬೆ?
ನಾನೇನಂ ಪೇಳ್ದೊಡಂ ನಂಬಿ ಬೆರಗಪ್ಪೆ.
ಒಂದಿನಿತೂ ಬಿನದಮನರಿಯಲಾರೆ!

ಅಬ್ಬೆ – (ದುಃಖಧ್ವನಿಯಿಂದ) - ಪಿಂತೆ ಪೋದುದಾ ಪೊಳ್ತು, ಬಚ್ಚು,
ನಿನ್ನಯ್ಯಂಗೆ ಉಸಿರ್ ನಿಂದಂದೆ
ನನ್ನನಿತು ಬಿನದಮುಂ ಆ ಬೆಂಬಳಿಯೆ ನಡೆದತ್ತು!
ಮತ್ತೆ ನಾನ್ ಬಿನದಮನರಿವುದೆಂತು? -
ಇನ್ ನಂಬುಗೆಯ ಮಾತು?
ನಿನ್ನಂ ಮೇಣ್ ನಿನ್ನೆಂಬುದನ್ ನಾನ್ ನಂಬದಂದು
ದೆಸೆಗೆಟ್ಟೆನೆಂದೆ ತಿಳಿ.

ಏಕಲವ್ಯ – (ತನಗಿಂತಲೂ ಕುಳ್ಳಾಗಿ ಕೃಶಳಾಗಿದ್ದ ತಾಯನ್ನು ಅಕ್ಕರೆಯಿಂದ ತಬ್ಬಿ)

ಅಳಲದಿರ್, ಅಬ್ಬೆ!
ವಿನೋದಂ ವಿಷಾದಮಂ ಬಗೆಗೆ ತಂದುದು,
ನನ್ನದಪರಾಧಮಾಯ್ತು. –
ಕಾಣ್, ಅಬ್ಬೆ; ಅಲ್ಲಿ ಆ ನೀರ್ ಬೀಳುವಾಚೆ
ನೀರ್ ಕೊರೆದ ಕಲ್‌ಪೊಟರೆಯಿರ್ದ್ದುಂ.
ನೀನಾದೊಡಂ ಅಲ್ಲಿ ತೊಯ್ಯದೆಯೆ ಇರಲ್ ಬರ್ಪುದು.
ಬಿಸಿಲಳುರೆ ಎನಿತ್ತೆನಿತೊ ಬೇಸಗೆಯ ಪಗಲೊಳ್
ನಾನಲ್ಲಿ ಪೊಕ್ಕು ಹಿಮಗುಹೆಯ ತಣ್ಪನನುಭವಿಸುವೆನ್.
ನೀರೀಂಟಲೈತರ್ಪ ಕಾಳ್ಮಿಗಗಳನ್
ಮರೆಯಿಂ ಸಮೀಕ್ಷಿಸಲ್ ಸೊಗಸುದಾಣಂ!

ಅಬ್ಬೆ – (ತಾನು ತಂದ ಹೊಂಬಾಳೆಯನ್ನು ಹಾಸುಗಲ್ಲಿನ ಮೇಲೆ ಇಡುತ್ತಾ)
ಏನ್ ಮಿಗಮೊ? ಏನ್ ಖಗಮೊ? ಏನ್ ಗಿರಿಯೊ? ಏನ್ ದರಿಯೊ
ಪಸಿವು ನೀರಳ್ಕೆಗಳಂ ಮರೆಯಿಪ್ಪವೋಲ್ ಮಾಳ್ಪ
ಆ ಪ್ರಕೃತಿಗಳ್ ದಿಟಂ ಸುಕೃತಿಗಳ್!
ನನ್ನನುಂ ಮರೆವವೋಲ್ ಮಾಳ್ಪುವೆಂಬುದೆ ನನಗೆ ಶಂಕೆ!

ಏಕಲವ್ಯ – (ಮಾತೃಪ್ರೇಮಾತಿಶಯದಿಂದ)
ಅಬ್ಬೆ! ಅಬ್ಬೆ! ಚುಚ್ಚುನುಡಿ ನುಡಿಯದಿರ್!

ನನ್ನ ಬರ್ದುಕೆಲ್ಲಮಂ ನೀನೆ ತುಂಬಿರ್ಪೆಯಯ್:
ನೀನ್ ಎರ್ದೆಯ ತುಂಬಿರಲ್ ಬಾಳ್ ತುಂಬುವುದು ನನಗೆ.
ಇಲ್ಲದಿರೆ ಬರಿದಪ್ಪ ಬಾಳ್ ಬರಿಯ ಗಾಳ್!
ನಿನ್ನೊಲ್ಮೆ ಬಾಳ್ಗೆ ಬೆಳಕಾಗಿರಲ್
ಖಗಂ ಮಿಗಂ, ಗಿರಿ ದರಿ, ಬಾನ್ ಕಾನ್,
ಎಲ್ಲವುಂ ಸವಿ;
ನೀನಿಲ್ಲದಂದವೆಲ್ಲಂ ಕಳ್ತಲೆಯ ಸೊನ್ನೆಗವಿ!

ಅಬ್ಬೆ–(ಮುದ್ದು ಸೂಸೆ ಮೊಗ ನೋಡಿ)
ಮತ್ತೆ, ನೀನಿಂದೇಕೆ ಬೆಳಗಪ್ಪ ಮುನ್ನಮೆಯೆ
ನನಗೆ ಪೇಳದೆಯೆ ಪೊರಮಟ್ಟುದಯ್ ಬನಕೆ?
ಪೊಳ್ತರೆಯ ತಣ್ಣೂಗ್ಗಳುಮಂ ಪಣ್‌ಜೇನ್ಗಳಂ
ಪೊಂಬಾಳೆಯೊಳ್ ಪೊತ್ತು ಕರೆದಲೆದು ದಣಿದೆನಲ್ತೆ?
ಬಾ ಕೊಳ್, ಕುಳಿತು ಉಣ್;
ಇದೆಕೊ ಜೇನ್, ಇದೆಕೊ ಪಣ್.
(ಹೊಂಬಾಳೆಯನ್ನು ಅಣಿಮಾಡಿಡುತ್ತಾಳೆ)

ಏಕಲವ್ಯ–(ಮೊಗವರಳಿ ಅಣಿಯಾದ ಉಣಿಸಿದ ಕಡೆಗೆ ನೋಡಿ)
ಅಬ್ಬೆ, ನಿನ್ನಕ್ಕರೆಯೆ ಮೆಯ್ವೆತ್ತವೋಲ್
ಇರ್ಪುದೀ ಜೇನ್!
ಪಣ್ತಾಯ್ತನದ ಪಡಿಮೆಯೆ ದಿಟಂ
ತನಿರಸಂ ತುಂಬಿ ತುಳ್ಕುತಿರ್ಪೀ ಇನಿವಣ್!

ಅಬ್ಬೆ–ಇರ್ಕೆ. ಸಾಲ್ಗುಂ ಬಣ್ಣನೆ. ಬಾ, ಉಣ್.
ಪೊಡೆ ತಣಿವುದೇನ್ ತಣಿಯಲ್ಕೆ ಕಣ್?

ಏಕಲವ್ಯ–ಇಂದೊಂದು ನೋಂಪಿಯನ್ ನೋಂತಿಹೆನ್;
ನೋಂಪಿ ಮುಗಿದಿಂಬಳಿಯೆ, ಅಬ್ಬೆ, ಉಣ್ಬೆನ್.

ಅಬ್ಬೆ–ಪಾರ್ವರಾ ಪಾಡು, ಬಿಯದರ್ಗದೇಂ ನೋಂಪಿ?

ಏಕಲವ್ಯ–ಬಿಯದರೇಂ? ಪಾರ್ವರೇಂ? ನೋಂಪಿಗೆರಡುಂಟೆ?

ಅಬ್ಬೆ–(ಮುಗುಳುನಗೆಯಿಂದ) ಆವುದೊ ಬಯಕೆ? ಚೆಲ್ವು ಪೆಣ್?

ಏಕಲವ್ಯ–ನನಗೇವುದಾ ಚಿಂತೆ! ಪೆಣ್ ಪಾಡು ನಿನಗಲ್ತೆ?

ಅಬ್ಬೆ–ಮತ್ತದೇನ್, ಬಲ್ ಬೇಂಟೆ ಕೈಗೂಡಲೆಂದೆ?

ಏಕಲವ್ಯ– ಆ ಅಂಬೆಗಾಲಿಕ್ಕುವುದನೆಂದೊ ನಾನ್ ಪಿಂತಿಕ್ಕಿದೆನ್.
ಗುರುಕೃಪೆಯಿಂದಾ ಬಿಜ್ಜೆ ಕರತಲಾಮಲಕಂ.
ಪುಲಿಯೊ? ಸಿಂಹಮೊ? ಫಣಿಯೊ? ಪೇರಾನೆಯೊ?
ಬಳಿಯೊ? ಗಂಟರೊ? ಕಾಣ್ಗೆ ಮೇಣ್ ಕಾಣದಿರ್ಕೆ
ಕಣ್‌ಬೊಲದೊಳಿರ್ಕೆ ಮೇಣ್ ಪೊರಗಿರ್ಕೆ
ಹೆದೆಯನೇರಿಸಿ ಬಿಲ್ಗೆ ಬಾಣಮಂ ಪೂಡಿ,
ನೆನೆದು ಗುರುದೇವನಂ, ಬಿಟ್ಟೆನೆನೆ
ತಪ್ಪದೆಂದರಿ ನಾನಿಟ್ಟ ಗುರಿ!
ಮೊನ್ನೆ ನಿನಗಾನ್ ಪೇಳ್ದೆನಲ್ತೆ ನಡೆದೊಂದು ಕತೆಯಂ.

ಅಬ್ಬೆ– ಅದಾವ ಕತೆ?
ಎನಿತೆನಿತೊ ಪೇಳ್ವೆ ನೀನೆನಗೆ ಕತೆಗಳಂ.

ಏಕಲವ್ಯ– ಕಟ್ಟುಕತೆಯಲ್ತು. ನಡೆದ ಕತೆ.
ಪೇಳ್ದೆನಿಲ್ಲವೆ ನಿನಗೆ,
ನನಗೆ ಮೇಣಾ ಅರ್ಜುನನಗೆ ನಡೆದ ಕಲಹಮಂ.

ಅಬ್ಬೆ– ಏನ್ ಕಲಹಮ್? ಆರ್ ಅವನ್? ಏಕೆ?

ಏಕಲವ್ಯ– ಬಲ್ ಸೊಗಸದನ್ ನಿನಗೆ ಪೇಳ್ದೆನೆಂದಿರ್ದೆನ್.
ಬಾ ಇಲ್ಲಿ; ಈ ಅರೆಯ ಮೇಲ್ ಕುಳ್ತು ಕೇಳ್.

(ಬಳಿಯಿದ್ದ ಬಂಡೆಯ ಮೇಲೆ ತಾಯಿಯನ್ನು ಕುಳಿತುಕೊಳ್ಳುವಂತೆ ಮಾಡಿ ತಾನು ಇದಿರಿಗೆ ನಿಂತು ಉತ್ಸಾಹದಿಂದ ಹೇಳುತ್ತಾನೆ.)

ಬಲ್ ಸೊಗಸು ಆ ಕತೆ, ಅಬ್ಬೆ!

ಅಬ್ಬೆ– ಕಂಡು ನಿನ್ನುತ್ಸಾಹಮಂ ಈ ನೀರ್‌ಬೀಳಮೇ
ನಾಣ್ಚಿ ಬೆಳ್ಳಂಗೆಡೆಯುತಿದೆ. ಪೇಳ್, ಬಚ್ಚು, ಪೇಳ್:
ನಿನ್ನ ದನಿಗೇಳ್ವುದೆಯೆ ನನಗೆ ಹಬ್ಬಮೆನೆ,
ಆ ದನಿಗೆ ಸಲ್‌ಗತೆಯ ಸವಿ ನೆರೆಯೆ ಕಿವಿಗೆ ಜೇನ್!

ಏಕಲವ್ಯ– ಬಲ್ ಸೊಗಸು, ಅಬ್ಬೆ! ಬಲ್ ಸೊಗಸು, ಕೇಳ್.
ಆ ಕತೆಗೆ ನಾಯಕಂ ನಾನೆ, ಕವಿಯುಂ ನಾನೆ!
ನೆನಹಿರ್ಪುದೇನ್ ನಿನಗೆ?
ಅಂದು ಪೊಳ್ತರೆ,
ಪುತ್ತೋಕರ್ವಾ ತುಡುವೆ ಜೇನಂ ಕಿಳ್ತು

ತುಪ್ಪಮಂ ತಂದಿತ್ತೆನಲ್ತೆ ಆ ಪೊಳ್ತರೆ-
(ತಲೆಯೆತ್ತಿ ದೂರ ನೋಡಿ ಆ ದಿಕ್ಕಿಗೆ ತೋರ್‌ಬೆರಳು ಮಾಡಿ)
ನೋಡಲ್ಲಿ ಮೇಲೆದ್ದು ನಿಮಿರ್ದು ಮೆರೆದಿದೆ ಕೋಡು,
ಆ ಮಲೆಯ ತಲೆಗೆ ಪೋದೆನ್.
ನಟ್ಟ ನಡುಗಾಡಿನೊಳ್ ಗೂಡುಗೆಯ್ದು
ಮೊಟ್ಟೆಯಿಟ್ಟಿರ್ದೊಂದು ನವಿಲಿರ್ಕೆದಾಣಮಂ
ನೋಳ್ಪೆನೆಂಬಾತುರದಿ ಓಡಿ ನಡೆದೆನ್,
ಕಾಲ್ಗೆ ಗರಿಮೂಡಿತೆಂಬಂತೆವೋಲ್.
ಪೋಗಿ ನೋಳ್ಪೆನ್: ನೋಳ್ಪುದೇನನ್?
ಮೊಟ್ಟೆಯಂ ತಿನಲೆಂದು ಬಂದಿರ್ದ ಪಾವೊಡನೆ
ಬಲ್‌ಗಾಳಗಂಗೊಡುತ್ತಿರ್ದುದಂ ಕಂಡೆನಾ ನವಿಲನ್.
ಸರಳೆಚ್ಚು ಫಣಿಯನಾಯೆಡೆಯೆ ಕೊಂದು,
ನವಿಲಬ್ಬೆಯಂ ಸಂತಯ್ಸಿ ರಕ್ಷೆಯನಿತ್ತು,
ಮೊಟ್ಟೆಮೇಲದನ್ ಕಾವ್ ಕೂರುವೋಲ್ ಮಾಡಿ,
ಬಿನದಕ್ಕೆ ಪೆರ್ಮರವನೊಂದನ್ ನೆತ್ತಿಗೇರ್ದು,
ಕಣ್ಬೊಲದ ದೃಶ್ಯವೈಶಾಲ್ಯಮಂ ನೋಳ್ಪ
ಪ್ರಕೃತಿ ಭೋಗದೊಳಾಸಕ್ತನಾಗಿರ್ದೆನ್.
ಇರಲಿರಲ್,
ದೂರದಿಂ ಕಿವಿಗೆವಂದುದು ಬೇಂಟೆಯಬ್ಬರಂ.
ಕೇಳುತಿರೆ ಹತ್ತೆಸಾರ್ದುದಾ ತುಮುಲರವಂ.
ಮುನಿಸುರಿದುದೆನಗೆ:
ನನ್ನ ರಕ್ಷೆಯಿಾ ಆರಣ್ಯ ಸೀಮೆಯಂ
ಮುತ್ತಿದವರಂ ಸೊರ್ಕಿಳಿಸಿ ಪಿಂತೆಳ್ಚಿದಪೆನೆಂದು
ರೋಷದಿಂ ತರಿಸಂದು, ಮರದಿಂದಿಳಿದು,
ಬಿಲ್ಲಕೊಪ್ಪಿಗೆ ಹೆದೆಯನೇರಿಸುತ್ತಿರೆಯಿರೆ
ತೆಕ್ಕನೆಯೆ ಕಿವಿಗೆ ಕಿಕ್ಕಿರಿಯಿರಿದುದೊಂದಾರ್ಭಟಂ
ಹೂಂಕರಿಸುವೆಕ್ಕಲನ!
ಮಲೆಯೆ ಗುಡುಗಿತ್ತು; ಕಾಡೆ ನಡುಗಿತ್ತು;
ಪೂಡಿದೆನ್ ಕೂಡೆ ಸರಳನ್ ಹೆದೆಗೆ!

ಹೂಂಕೃತಿಯ ಕೇಳ್ದು ಗುರಿಯಿಟ್ಟೆನ್, ಎಚ್ಚೆನ್!

ಅಬ್ಬೆ–(ಮಗನನ್ನು ರಕ್ಷಿಸಲು ತಬ್ಬುವಂತೆ ಅಭಿನಯಿಸಿ)

ಅಬ್ಬ! ನೀನಿರ್ದೆಡೆಗೆ ನುರ್ಗಿದುದೆ ಆ ಎಕ್ಕಲಂ?

ಏಕಲವ್ಯ– ಅಲ್ತಲ್ತು, ಕಣ್ಬೊಲಂ ಮೀರ್ದಿರ್ದುದಾ ಕಾಳ್ಮಿಗಂ,

ದೂರದೊಳ್ ಪೇರಡವಿ ಪೊಡೆಯೊಳ್,

ಅಬ್ಬೆ– ಮತ್ತೆ? ಗುರಿಗಂಡುದೆಂತು ನೀನ್?

ಏಕಲವ್ಯ– ಶಬ್ದವೇಧಿ ಎಂಬ ಬಿಜ್ಜೆಯಿಂದಬ್ಬೆ!

ಅಬ್ಬೆ– ಅಂತೆನಲ್?

ಏಕಲವ್ಯ– ಗುರಿ ಕಣ್ಗೆ ಕಾಣದಿರ್ದೊಡಂ

ಎಚ್ಚಂಬು ತಗುಳ್ವುದು ಗುರಿಗಮೋಘಂ,

ಅದೊಂದತೀಂದ್ರಿಯ ಸಾಮರ್ಥ್ಯಂ.

ಅಬ್ಬೆ–(ಬೆರಗಾಗಿ ಮಗನನ್ನು ಮೆಚ್ಚಿ ನೋಡಿ)

ನೀನೆಂತು ಕಲಿತಯ್, ಬಚ್ಚು, ಅಂತಪ್ಪ ಬಿಜ್ಜೆಯಂ?

ಏಕಲವ್ಯ– ಗುರುಕೃಪೆಯಿಂ.

ಅಬ್ಬೆ– ಆರ್ ಆ ಗುರು?

ಏಕಲವ್ಯ–(ದ್ರೋಣನ ಪ್ರತೀಕವಾದ ಶಿಲಾಕಾರವನ್ನು ತೋರಿಸಿ?

ಆ ಪೂಜ್ಯನ್!

ಅಬ್ಬೆ-ಕಲ್‌ಗೊಂಬೆಯದು ಕಲಿಪುದೆಂತಯ್?

ಅದೇನ್ ದೇವರೆ?

ಏಕಲವ್ಯ– ದೇವರೆ ದಿಟಂ!

ಅಬ್ಬೆ– ಆವ ದೇವರೊ?

ನಮಗಿರ್ಪುದೊಂದೆ: ಬೇಂಟೆ ದೇವರ್!

ನೀನಾಡುವಾ ಗೊಂಬೆ ಬೇಂಟೆ ದೇವರೇನ್?

ಏಕಲವ್ಯ– ಅಲ್ತಲ್ತು. ಗುರುದೇವನ್.

ಅಬ್ಬೆ– ಅದಾವುದಾ ಪೊಸದೇವರ್? ಪುಟ್ಟಿದುದೊ?

ಬೇಂಟೆ ದೇವರ ಮರಿಯೊ?

ಏಕಲವ್ಯ–(ನಗುತ್ತ)

ಮರಿಯಿಕ್ಕಲೇಂ ನೀನ್ ಸಾಕುವಾ ಕೋಳಿಯೋ?

ಅಬ್ಬೆ– ಇರ್ಪೊರ್ವ ದೇವರ್ ಮರಿಯಿಕ್ಕದಿರೆ

ಮತ್ತೆಂತು ಬರ್ಕುಮಾ ಪೊಸತು ದೇವರ್?

ಏಕಲವ್ಯ – ಕಾಡೊಳಿರ್ಪೀ ನಮ್ಮ ಬೇಂಟೆ ದೇವರೆ ದೇವರ್;
ಇನ್ನಿಲ್ಲಮೆಂದರಿತೆಯೇನ್?
ಎನಿತೆನಿತೊ ದೇವರ್ಕಳಿರ್ಪರ್ ಆ ನಾಡಿನೊಳ್.

ಅಬ್ಬೆ – ಅವರೊಳೊಂದೋ ಈ ಕಲ್ ಗೊಂಬೆ?

ಏಕಲವ್ಯ – ಅಂತಪ್ಪ ದೇವರಲ್ತು, ಈತನ್ ಗುರು.
ಉಣ್ಬನ್, ಉಸಿರ್ವನ್, ನಮ್ಮಂತೆ ಬರ್ದುಕಿರ್ಪನ್.
ಹಸ್ತಿಪುರ ರಾಜಧಾನಿಯೊಳೀತನಿರ್ಪನ್.
ಅರಸುಮಕ್ಕಳ್ಗಿವನೆ ಗರುಡಿಯಾಚಾರ್ಯನ್.
ಬಿಲ್ಲೋಜನ್, ಪಾರ್ವರೊಳ್ ಪಾರ್ವನ್.
ದ್ವಿಜವರೇಣ್ಯನ್, ಗಣ್ಯನ್, ಅಗ್ರಗಣ್ಯನ್.
ದ್ರೋಣನೆಂಬುದು ಪೆಸರ್.
ಪರಮಗುರು ನನಗೆ; ಅವನ ಕೃಪೆಯಿಂದೆನಗೆ
ಬಿಲ್‌ಬಿಜ್ಜೆ ದೊರಕೊಂಡುದಿನ್ನೆಣೆಯೆ ಇಲ್ಲದೊಲ್.
ನೀನ್ ಕಾಣ್ಬುದೀ ವಿಗ್ರಹಂ ದ್ರೋಣಂಗೆ ಪ್ರತಿಮೆ.

ಅಬ್ಬೆ-ಅಯ್ಯೊ, ನಾನೆಂತಪ್ಪ ಬೆಪ್ಪು!
ನಿನ್ನಣುಗುತನದಾಟಕ್ಕೆ ಸಮೆದೊಂದು
ಕಲ್ ಗೊಂಬೆಯೆಂದಿರ್ದೆನ್! ತಪ್ಪಾಯ್ತು!

(ವಿಗ್ರಹಕ್ಕೆ ಕ್ಷಮೆ ಬೇಡುವಂತೆ ಕೈಮುಗಿಯುತ್ತಾಳೆ)

ಏಕಲವ್ಯ – ಅಬ್ಬೆ, ನೀನರಿಯೆ ಆ ಗುರು ಮಹಿಮೆಯನ್:
ತಿಳಿದವನ್, ಅಳ್ಕರೆಯುಳ್ಳವನ್, ತಿಳಿಗೊಂಡವನ್.
ದಿವ್ಯಜ್ಞಾನಿಯೆಂಬರ್, ಸಮದರ್ಶಿಯೆಂಬರ್,
ಧನುರ್ವಿದ್ಯಾದೇವನೆಂಬರ್.
ಅಂದು, ನನ್ನಯ್ಯನಿರ್ದಂದು, ಕೇಳ್ದೆನವನಿಂ
ದ್ರೋಣ ಮಹಿಮೆಯಂ, ಸಾಮರ್ಥ್ಯಮಂ.
ನಾನುಮಾ ಗುರುವಿನೆಡೆಗೆಯ್ದಿ ಬಿಲ್‌ಬಿಜ್ಜೆಯನ್
ಕಲ್ತು ಬರ್ಪೆನ್ ಎಂದು ಬೇಡಿದೆನ್.
ಅಯ್ಯನೆಂದನ್: ''ಅವರ್ ಪಾರ್ವರ್.
ಬಿಯದರ್ಗೆ ಒವಜುಗೆಯ್ಯಲ್ಕೆ ಒಪ್ಪರ್.
ನಿನ್ನನ್ ಗಹಗಹಿಸಿ ನಕ್ಕು ನೂಂಕುವರ್.''

ನಾನೆಂದೆನ್: ''ನಿನ್ನ ಕಾಲ್ವಿಡಿವೆನಯ್ಯ,
ಕಳಿಪು ನನ್ನನ್.
ಎಂತಾದೊಡಂ ಗುರುಮನವನೊಲಿಸಿ
ಕಲ್ತು ಬರ್ಪೆನ್.''
ಅಯ್ಯನ್ ಎನ್ನಾಸೆಯಂರಿಯನ್ ಕಂಡು ಕನಿಕರಿಸಿ
ಪೋಗಿ ಬಾ ಎಂದೊಪ್ಪಿ ಪರಸಿದನ್.
ನಾನ್ ಪೋದೆನ್.
ಅರಸರೂರೊಳ್ ಕಾಡಂಗೆನಗೆ ಕಣ್‌ಗೆಟ್ಟವೋಲಾಯ್ತು.
ನನ್ನ ಸೈಪೆನಲೆ ವೇಳ್ಕುಂ:
ಗುರುಪುತ್ರನ್, ನನ್ನೋರಗೆಯಾತನ್,
ನನ್ನೊಳ್ ನೇಹಮುಕ್ಕಿ ತನ್ನಯ್ಯಂಗೆ ಕಾಣಿಸಿದನ್.
ಅಬ್ಬೆ! ಏನ್ ತೇಜಮಾ ಆಚಾರ್ಯನದು!
ತಳತಳಿಪ ಆಯುಧಾಗಾರಮಂ ಪೊಕ್ಕವೋಲಾಯ್ತು
ನನಗಾತನಂ ಕಂಡು!
ನಾಣ್ಚಿ ಬೆದರುತ್ತಿರ್ದೆನ್ನಂ ಅಕ್ಕರಿಂ ನುಡಿಸಿದನ್.
ತೊದಲ್ ಒರೆದು ಪೇಳ್ದೆನ್ ಎನ್ನೆರ್ದೆಯ ಪೇರಾಸೆಯಂ.
ನಾನ್ ಶೂದ್ರನೆಂಬುದನರಿತೊಡಂ-
ನಮ್ಮನಾ ಪಾರ್ವರ್ ಶೂದ್ರರೆಂದಾಡುವರ್-
ಪೂಜ್ಯನ್ ತಿರಸ್ಕರಿಸಲಿಲ್ಲ.
ಮುಡಿಯಿಂದಮಡಿವರೆಗೆ ನನ್ನಂ ನೋಡಿ
ಮಗನ ಕಡೆ ತಿರುಗಿ ಪೇಳ್ದನ್;
''ಅಶ್ವತ್ಥಾಮ, ನಮ್ಮ ಚಟ್ಟರೊಳಿವನುಮೊರ್ವನ್'
ನಿನ್ನ ನೇರ್ಗಿರಿಯನೆಂದೀತನನ್ ಕಾಣ್,''
ಕೇಳ್ದದನ್, ನನಗೆ ಮೂಡಿದ ಕೋಡು
ಸಗ್ಗದೈರಾವತದ ದಂತಮಂ ಸೆಣಸಿ
ತಿವಿದುದಲ್ತೆ? – ಆದೊಡೇನ್? –
ಅರಸು ಮಕ್ಕಳ ಅಸೂಯೆ ಅಡ್ಡವಂದುದು ನನಗೆ.
ಪಾಂಡವರೊಳೊರ್ವನಾ ಜಿಂಕಗುಳಿ ಅರ್ಜುನನ್
ನನ್ನ ಬಿಲ್ಲೋಳ್ಗೆಯಂ ಕಂಡು ಕರುಬಿದನ್.

ಶೂದ್ರನೊಡನೆಮಗೆ ಸಮಚರ್ಯ ಸಲ್ಲದೆಂದಾಡಿ
ಸಿಡೆತನ್, ಮುನಿದನ್; ಕೀಳವೋಲಾಡಿದನ್.
ಆಚಾರ್ಯನೆಂದನ್ ''ಶೂದ್ರನಾದೊಡಮೇನ್?
ಸಮರ್ಥನ್, ವಿನಯಶಾಲಿ. ಕಲ್ತ ಮೇಲಿಂ ಬಳಿಂ
ನಿಮಗೆ ಸಲ್ವನ್, ನಿಮ್ಮ ಸೇವೆಯೊಳೆ ನಿಲ್ವನ್.
ಬಲ್ಲಿದನ್ ಕೈಂಕರ್ಯವೆಸಗೆ ಬಲ್ಲಿದರ್ ನೀಮಲ್ತೆ?''
ದ್ರೋಣನುಪದೇಶಮನ್ ಕಡೆಗಣ್ಚಿದರ್.
ಪೊರಗಟ್ಟಿದರ್ ನನ್ನನ್.
ಕಣ್ಬನಿದುಂಬಿದೆನ್ನಂ ನೋಡಿ ಕರುಣೆ ಗುರು
ಕೈವಿಡಿದು ತಲೆದಡವಿ ಸಂತಯ್ಸಿ ಪೇಳ್ದನ್:
'ಏಕಲವ್ಯ'– ಅವನಿತ್ತುದೆಯೆ ಆ ಪೆಸರ್:
ಬಚ್ಚನೆಂದೊಡೆ ನಗುವರೆಂದು
ಬೇರೊಂದು ಪೆಸರನಿಟ್ಟನ್.–
ಪೇಳ್ದನ್ ಗುರು ''ಏಕಲವ್ಯ, ಅಳಲದಿರ್,
ಆಸೆಗೆಡದಿರ್. ನೀನೆಮ್ಮ ಮನೆಯೊಳಾಳಾಗಿರು.
ಈ ಗರುಡಿಗೆನ್ನ ಸೇವೆಗೈತರುತೆ
ದೂರದಿಂ ಕಂಡು ಕಲಿ, ಕಲ್ವನಿತಂ.
ಮತ್ತುಳಿದುದಂ ಮನೆಯೊಳೆಯೆ ಕಲಿಯುವನಿತಂ
ಕಲಿಪೆನಶ್ವತ್ಥಾಮನೊಡನೆ.''
ಕೇಳ್ದು, ಧೈರ್ಯಂ ಮೊಳೆತುದೆನಗೆ;
ಕೃತಜ್ಞತೆಗೆ ಕಾಲ್ವಿಡಿದು ಪೊಡಮಟ್ಟೆನ್.
ಆಶೀರ್ವದಿಸಿದನ್ ಗುರು–
ಕಲಿಸಿದನ್ ಬಿಲ್‌ಬಿಜ್ಜೆಯೊಡನೆ ಸಕ್ಕದಕ್ಕರ ಬಿಜ್ಜೆಯಂ.
ನಿಚ್ಚಮುಂ ನಾಂ ಪಾಡುವಾ ಕಬ್ಬಂಗಳಂ
ಕೇಳ್ದಿರ್ಪೆಯಲ್ತೆ? ಅವೆಲ್ಲಂ ಸಕ್ಕದಂ.
ಕಲ್ತು ಪೂರೈಸುವನಿತರೊಳೆ ನನ್ನಯ್ಯನ್
ಬಗ್ಗನಿಂದೇರುಗೊಂಡಾ ಸುದ್ದಿಯಂ ತಂದನ್
ನೀನಟ್ಟಿದಾ ಆಳ್.
ಜಿಲ್ಲೋಜನಾಣೆಯಂ ಮೇಣ್ ಪರಕೆಯಂ ಪಡೆದು

ಮರಳಿ ಬೇಗಂ ಬಪ್ಪೆನೆಂದಾಡಿ,
ಓಡೋಡಿ ಬಂದೆನ್ ನಿನ್ನೆಡೆಗೆ-
ಅಯ್ಯೊ, ಮಡಿದನಯ್ಯನ್ ಪುಣ್ಯಾತ್ಮರ್ದ! –
ನಿನ್ನೊರ್ವಳನೆ ಬಿಟ್ಟು ನಾನೆಂತು ಮರಳ್ವೆನ್?

(ಅಬ್ಬೆ ಕಣ್ಣೀರೊರಸಿಕೊಳ್ಳುತ್ತಾಳೆ. ಏಕಲವ್ಯನೂ ಮೂಗೊರಸಿಕೊಳ್ಳುತ್ತಾನೆ.)

ಇಲ್ಲಿಯೆ ನಿಂದೆನ್.
ಈ ಗುರುಪ್ರತಿಮೆಯನೆ ದ್ರೋಣಂಗೆತ್ತು
ಮುಂಬರಿಸಿದೆನ್ ಬಿಲ್‌ಬಿಜ್ಜೆಯಭ್ಯಾಸಮಂ.
ಅಬ್ಬೆ, ಸೋಜಿಗವನೇನೆಂಬೆ!
ಎಳ್ಚರ್ತ್ತ ಪೊಳ್ತು ನನಗರಿಯದಭ್ಯಾಸಮಂ
ಕನಸಿನೊಳ್ ಬಂದು ಬೋಧಿಸಿದನಾ ದಿವ್ಯಗುರು!
ಎಂತೆಂತಪ್ಪ ಬಿಜ್ಜೆಗಳೊ ಕೈಸಾರ್ದುವೆನಗೆ!
ಶಬ್ದವೇಧಿಯುಮದರೊಳೊಂದು.

ಅಬ್ಬೆ – (ಮೆಚ್ಚಿ) ಅರಿತೆನ್, ಈಗಳರಿತೆನ್. ಆ ಪಂದಿ ಬಿಳ್ದುದೊ?

ಏಕಲವ್ಯ – ಕೆಡೆದುರುಳ್ದುದು: ಆಲಿಸಬ್ಬೆ, ಮುನ್ನಡೆದುದಂ.
ಕೆಡದೊರಲುತಿರ್ದೆಕ್ಕಲನ ದಿಕ್ಕರಿತು ನುಗ್ಗಿ
ಓಡಿದೆನ್ ಪಳುವದೊಳ್. ನೋಡಿದೆನ್;
ಕಂಡೆನೊಂದಚ್ಚರಿಯ ನೋಟಮನ್.
ಒರ್ವನ್ ತರುಣನ್ ರಾಜಪುರುಷನ್
ಆಜಾನುಬಾಹು, ತೇಜಸ್ವಿ,
ಬಿಲ್ದಾ ಪೆರ್ಬಂದಿಯ ಬಳಿಯೆ,
ಮಿಗದ ಬಿಸುಗೆನ್ನೀರ್ ತೊಯ್ದ ನೆಲದೊಳ್ ನಿಂದು,
ಪೊರಳ್ವ ಪಂದಿಯ ಬರಿಯೊಳ್ ನಟ್ಟುದಂ
ನನ್ನ ಬಿಟ್ಟಾ ಬಾಣಮಂ,
ನಟ್ಟಾಲಿಯಾಗಿ ನಿಟ್ಟಿಸುತ್ತಿರ್ದನ್!
ನಾನ್ ಬಳಿ ಸಾರಲ್, ಪಳುವನಾಲಿಸಿ,
ಶಿರವನುನ್ನತಮೆತ್ತಿ ನನ್ನನ್ ನೋಡಿದನ್.
ಮುಗಳ್‌ನಗೆಯ ತೆರೆಯೊಂದು ಮೊಗದೊಳಲೆಯಲೆಯಾಗಿ
ಸುಳಿಯುತಿರೆ ಕೇಳ್ದನ್: ''ವನಚರ,

ಆರ್ ಎಚ್ಚರಿೀ ವರಾಹಮನ್?''
ಪೇಳ್ದೆನ್: ''ನಾಗರಿಕ, ಓದಿ ತಿಳಿ;
ಕಲಿಪುದಾ ಬಾಣಾಕ್ಷರಂ!''
ಮೊಗಂ ಕೆಂಪೇರ್ದುದಾತಂಗೆ.
ನಟ್ಟು ನೋಡಿದನೆನ್ನ ಮೊಗಮಂ;
ನಾನುಂ ನೋಡಿದೆನ್.
ನೋಡಿ, ಕುರುಪುವಿಡಿದೆನ್ ಆತನನ್!

ಅಬ್ಬೆ – ಆರ್ ಅವನ್?

ಏಕಲವ್ಯ – ಮುನ್ನಮಾನ್ ನಿನಗೆ ಪೇಳ್ದಾ ಅರ್ಜುನನ್.
ಪಾಂಡುಪುತ್ರನ್,
ಗುರುದ್ರೋಣಂಗೆ ನಚ್ಚಿನ ಶಿಷ್ಯನ್:
ಕಿರಾತನೆಂದೆನ್ನನ್ ಸಹಾಧ್ಯಾಯಿಯಾಗಲೊಲ್ಲದೆ
ಅಸೂಯೆಯಿಂ ತಿರಸ್ಕರಿಸಿದಾತನ್!

ಅಬ್ಬೆ – (ಕೆರಳ್ದ ಕುತೂಹಲದಿಂದ) ಮುಂದೆ?

ಏಕಲವ್ಯ – ಪುಸಿನಗೆ ನಕ್ಕು ಮತ್ತೆ ಕೇಳ್ದನ್: ''ಆರೊ ನೀನ್?''
ನುಡಿದೆನ್: ನೀನೆ ಸಂಬೋಧಿಸಿದವೊಲ್ ವನಚರನ್!''
ನಸುಕೆರಳ್ದೆಂದನ್: ''ನಾಲಗೆಯ ನೆರಂ ಬೇಕೆ?
ನಿನ್ನಿರ್ಕೆಯೆ ಪೇಳ್ದಪುದದನ್,
ನಿನ್ನ ಕೈರಾತ್ಯಮಂ!
ನಾನ್ ಕೇಳ್ದುದು ನಿನ್ನ ಪೆಸರನ್;
ಅನಾಮನೇನ್ ನೀನ್?''
ಮಾರ್ನುಡಿದೆನ್ ''ವನಚರರ್ ಅನಸೂಯಾಶೀಲರ್,
ಅರಿಯರ್ ಪೆಸರಂ ಮೆರೆವ ಅಹಂಕಾರಮಂ.
ಪೆಸರಾಸೆ, ಅದೊಂದು ನಾಗರಿಕರ್ಗೆ ಮಿಾಸಲಾಗಿರ್ಪ
ಮನೋಜಾಡ್ಯಂ ಕಣಾ!
ಮೊದಲ್ ಪೇಳ್ ನಿನ್ನ ಪೆರ್ಮೆಯಾ ಪೆಸರಂ.''
''ಕಾಡವಂಗೇಂ ಬಿಂಕಂ!'' ಎಂದುಕೊಂಡನ್;
ಮತ್ತೆಂದನ್ ''ನಾವಾರೆಂದಿರ್ಪೆ? ಆಳ್ವವರ್! ನೀನಾಳ್!''
ಮಾರ್ನುಡಿದೆನ್ ಬಿಂಕಕ್ಕೆ ಬಿಂಕಮೊಡ್ಡಿ

''ನನ್ನಯ್ಯನಿಂದೆನಗೆ ಬಂದಡವಿ ಈ ಪೊಡವಿ.
ನನ್ನಯ್ಯನಾದಿಂ ಬಳಿಂ ನಾನಿಲ್ಲಿಗೊಡೆಯನ್.
ನನ್ನಾಜ್ಞೆಯಿಲ್ಲದೆಯೆ ನನ್ನಡವಿಯಂ ಪೊಕ್ಕು
ರಕ್ಷೆಯ ಮೃಗಂಗಳಂ ಬೇಂಟೆಯಾಡುವ ನೀನ್
ಕೊಳ್ಳೆಗಾರನ್, ಕಳ್ಳನ್, ದಂಡನಾರ್ಹನ್!
ನಿನ್ನ ಊರತ್ತಣ್ಗೆಯಿರ್ಕೆ ನಿನ್ನಾಳ್ವ ಬಿಂಕಂ.
ನಾನೆಚ್ಚುದೀ ವರಾಹನನ್ ಉಳಿದು
ಕ್ಷೇಮದಿಂ ಬಿಟ್ಟು ತೊಲಗೀ ಅಡವಿಯಂ!''
ಕಿಲಕ್ಕನೆ ನಕ್ಕನಾತನ್, ಲಘುವೆಣಿಸಿ ನಾನೆಂದುದನ್.
ಕೇಳ್ದನ್: ''ನೀನೆಚ್ಚುದೆಂತೊ, ಬಿಯದ?
ನಾನಿಲ್ಲಿಗೈತಂದ ವೇಳೆಯೊಳ್
ನೀನೆಲ್ಲಿಯುಂ ಕಣ್ಬೊಲದೊಳಿರ್ದುದಿಲ್ಲ.
ಹೂಂಕಾರಮಂ ಕೇಳ್ದು ಗುರಿಯೆಚ್ಚೆಯೋ?''
ಹಾಸ್ಯಕಾ ಪ್ರಶ್ನೆಗೇಳ್ದನ್. ನಾನೆಂದೆನ್:
''ದಿಟವೊರೆದೆಯಯ್!
ನಿನಗೆಂತೊ ತಿಳಿದುದಾ ನನ್ನ ಬಿಲ್‌ಜಾಣ್ಮೆ?''
ನಕ್ಕಾಡಿದನ್: ''ಓವೊ ನೀನ್ ಬಲ್‌ಜಾಣನ್?
ಶಬ್ದವೇಧೀ ವಿದ್ಯೆ ನಿನಗೆ ಅಂಗಯ್ ನೆಲ್ಲಿಯಲ್ತೆ?''
ಉತ್ತರಂಗೊಟ್ಟೆನ್: ''ನೀಂ ದಲ್ ಸತ್ಯವಾಕ್ ಕಣಾ!
ಕರತಲಾಮಲಕಮಾ ಬಿಜ್ಜೆ ನನಗೆ!''
ಕಿಚ್ಚು ಕೆರಳ್ದೆಂದನ್: ''ಪುಸಿಯದಿರ್, ಕಾಡ!
ಜಗತ್ರಯದೊಳೊರ್ವನಿರ್ಪನ್,
ಅವನರಿವನಾ ವಿದ್ಯೆಯಂ.''
ಎಂದೆನ್: ''ನನಗರಿಯದಾ ಸರ್ವಜ್ಞತೆಯ ಪೆರ್ಮೆ.
ಆದೊಡಂ, ನೀನ್ ಪೇಳ್ದುದದು ನನ್ನಿಯಪ್ಪೊಡೆ,
ನನ್ನಿದಿರೆ ನಿಂದಿರ್ಪನಾ ನೀನ್ ಬಣ್ಣಪಾತನ್!''
ಕನಲ್ದೆಂದನ್ ಕೂಗಿ: ''ನೀನವನಲ್ತೊ! ನಾನ್ ಬಲ್ಲೆನ್!''
ನಾನ್ ಚುಚ್ಚಿದೆನ್: ''ಎಂತು ಬಲ್ಲೆಯ್?
ಸರ್ವಜ್ಞನೋ ನೀನ್?''

ಏದುತೆಂದನ್: ''ಎಂತೆನೆ.....ಎಂತೆನೆ.....ಕೇಳ್....
ನಾನೆ ಅವನ್! ಕೇಳ್ದರಿಯೆಯಾ ನೀನ್
ತ್ರೈಲೋಕ್ಯ ವೀರನನ್ ಅರ್ಜುನ ನಾಮನನ್?''
ನಕ್ಕು ಬೆರಗಂ ನಟಿಸಿ ಕೇಳ್ದೆನ್: ''ಅವನಾರ್?''
ಅವನೆಂದನ್: ''ಅಜ್ಞಾತ ನೀನ್; ವನಚರನ್;
ನಿನಗಿರ್ಪುದೆಂತಾ ಜ್ಞಾನಮ್? ಕೇಳ್, ತಿಳಿ;
ಅರ್ಜುನನ್ ಪಾಂಡುಪುತ್ರನ್?''
ಎಂದೆನ್: ''ಆರ್ ಅವನ್ ಆ ಪಾಂಡು?''
ಧಿಃಕರಿಸಿ ನುಡಿದನ್: ''ರಾಜೇಂದ್ರನ್!''
ನಾನುಂ ತಿರಸ್ಕರಿಸುತೆಂದೆನ್: ''ಅಲ್ಪಖ್ಯಾತರಾ
ಸಂಬಂಧಮಂ ಪೇಳ್ದೇನ್ ಪ್ರಯೋಜನಂ?
ನಿನಗೆ ಸಂಬಂಧರೊಳರೆ ಪ್ರಖ್ಯಾತರೊರ್ವರುಂ?
ತನ್ನ ಪೆಸರಂ ಪೇಳ್ವೆ;
ತನ್ನ ಮೆಯ್ಯಂ ಪೆತ್ತವರ ಪೆಸರ್ವೇಳ್ವೆ!
ನಿನಗಲ್ತೆ ಆತ್ಮಮಂ ಕೊಟ್ಟವರ್?
ಬಿಜ್ಜೆಗಲಿಸಿದವರ್?
ಎಲವೊ ಗರ್ಜನ, ಕೇಳ್,
ನಿನಗೊಂದು ನಯಮಂ ಕಲಿಪನೀ ವನಚರನ್.''
ತನ್ನ ಪೆಸರಂ ತಪ್ಪು ವೇಳ್ದುದಕೆ
ಅಹಂಕಾರಂ ಪೊತ್ತಿ ಗರ್ಜಿಸಿದನ್:
''ಗರ್ಜನ ಎಂದಲ್ತೊ! ಅರ್ಜುನ ಎಂದೊರೆ, ಅನಾಗರಿಕ!''
''ಅಕ್ಕಕ್ಕೆ! ಅರ್ಜುನ, ಕೇಳ್'' ಎಂದೆನ್
''ನನಗುಮಿರ್ಪುದೊ ನಿನಗಿರ್ಪವೊಲ್ ಒರ್ವೆಸರ್.
ಆದರದು ಅಹಂಕಾರಮಂ ಮೆರೆಯಲ್ಕಲ್ತು,
ವಿನಯಮಂ ನಿವೇದಿಸಲ್ಕಿರ್ಪುದು.''
ಎನುತ್ತೊಡನೆ ಪಂದಿಯಂ ನಟ್ಟಿರ್ದ ಬಾಣಮಂ
ಕಿಳ್ತೆನ್; ನೆತ್ತರ್ ಕೀಸಿ ತಳಿರ್ಗೊರಸಿದೆನ್;
ನೀಡಿದೆನವನ ಕಯ್ಗೆ.
ಕೊಳ್ಳಲೊಲ್ಲದೆಯೆ ಮಲೆತಿರ್ದವಂಗೆಂದನ್:

''ಅಣ್ಣ ಓದಿದನ್.
ಓದುವುದೆ ಪೂಜೆಯಪ್ಪುದು ನಿನಗೆ!
ಪುಣ್ಯಮಂ ಪೊತ್ತು ತಂದಪುದಾ ಪೆಸರ್!
ನಿನಗೆ ಬೇಡದ ಕಾಡ ಬೇಡನನ್ ನನ್ನನ್
ನಿನಗೆ ತಮ್ಮನಂ ಮಾಳ್ಪುದಯ್!
ಓದು, ಅಣ್ಣ.''
ನನ್ನ ವಿನಯದಾ ದಾಕ್ಷಿಣ್ಯಕ್ಕೊಳಗಾಗಿ
ಬಾಣಮಂ ಕೈಗಾಂತು, ಕಣ್‌ಮುಂದೆ ಪಿಡಿದು,
ನೋಡತೊಡಗಿದನ್. ಇರಲಿರಲ್,
ಕಣ್ ಅರಳ್ದುದು. ಮಲರ್ದುದು ಮೊಗದೊಳೊರ್ ಬೆರಗು.
ಮತ್ತಮೊಯ್ಯನೆ ನಡುವೆ ಹೆಡೆಯಿಣುಕಿತೊರ್ ಕೊರಗು!
ತಲೆಯೆತ್ತದೆಯೆ ಕೇಳ್ದನ್:
''ಇದೆಯೆ ನಿನ್ನಾ ಪೆಸರ್!''
''ಓದಣ್ಣ, ಏನೆಂದಿದೆ?'' ನಗುತೆಂದೆನಾನ್.
''ಇದೆನಗುಂ ಪೆಸರಕ್ಕುಂ'' ಎಂದನವನ್
ಕೇಳ್ದೆನ್: ''ಅರ್ಜುನ ಎಂದಿದೆಯೆ?''
ಪೇಳ್ದನ್: ''ದ್ರೋಣ ಶಿಷ್ಯನ್ ಎಂದಿದೆ!''
ಕೇಳ್ದೆನ್: ''ನೀನೇನ್ ನನ್ನ ಗುರುದೇವಂಗೆ ಶಿಷ್ಯನೊ?''
''ಶಿಷ್ಯನ್? ಮೆಚ್ಚಿನ ಶಿಷ್ಯನ್! ಶಿಷ್ಯೋತ್ತಮನ್!''
ಎನುತೆ ಮಲೆತು ನಿಮಿರ್ದಂಗೆ ನಾನೆಂದೆನ್:
''ಆ ಗರ್ವಮೆನತಲ್ತು, ಕ್ಷತ್ರಿಯ ಕುಮಾರ!
ಆಚಾರ್ಯನೆನಿತೊ ಶಿಷ್ಯರೊಳ್ ಆನುಂ ಒರ್ವನ್:
ಭಕ್ತಿಯೊಳ್ ಮತ್ತಾರ್ಗಂ ದ್ವಿತೀಯನಲ್ತು!''
ಕೇಳ್ದನ್: ''ನೀನೆಂತೊ ಗುರು ದ್ರೋಣಂಗೆ ಶಿಷ್ಯನ್?''
''ನೀನೆಂತೋ ಅಂತೇ!'' ಮಾರ್ನುಡಿದೆನ್.
ಮತ್ತೆಂದನ್: ''ಕುರುಪಾವುದೋ ಪೇಳ್ ಅದರ್ಕೆ?''
ಪೇಳ್ದೆನ್: ''ಈ ಬಾಣಮೆ ಪೇಳದೆ?
ತಾನೆ ಪೇಳದೆ ಶಬ್ದವೇಧೀ ವಿದ್ಯೆ?''
ಅಸೂಯೆಯಿಂದೆಂದನ್:

''ಭಾಷೆಯಿತ್ತಿಹನೆನಗೆ ಗುರು.
ನನಗಲ್ಲದನ್ಯರ್ಗೆ ದೊರೆಕೊಳ್ಳದಾ ವಿದ್ಯೆ!''
ನಗುತ್ತೆಂದನ್: ''ಅದೊಂದೆಯೆ ಅಲ್ತು.
ಆಚಾರ್ಯ ಕೃಪೆಯಿಂ ಮೇಣೆನ್ನ ಗುರುಭಕ್ತಿಯಿಂ
ನಿಖಿಲಾಸ್ತ್ರ ವಿದ್ಯೆಗಳ್ ಕೈಸೇರ್ದುವೆನಗೆ!''
ಅಬ್ಬೆ, ಮುಂತೇನ್ ನಡೆಯುತಿರ್ದುದೊ ಅರಿಯೆನ್.
ಅನಿತರೊಳ್ ಬಂದುದಲ್ಲಿಗೆ ಅವನ ಪರಿವಾರಂ.
ಅಚ್ಚರಿಯೊಳಚ್ಚರಿ! ಕಂಡೆನಶ್ವತ್ಥಾಮನಂ,
ಬೇಂಟೆಪಡೆಯೊಡನೆ ಬಿನದವಂದಿರ್ದನಂ.
ಓಡಿ ಬಂದೆನ್ನನಪ್ಪಿದನ್;
ಪರಿಚಯವನೊರೆದನರ್ಜುನಂಗೆ;
ಪೇಳ್ದನಾ ಪೂರ್ವ ವೃತ್ತಾಂತಮಂ.
ನಾನುಂ ಪೇಳ್ದೆನೆನ್ನ ಕಥೆಯಂ.
ಕೇಳ್ದದನ್ ಮೂಗುವೆರಗಾದರನಿಬರುಂ.
ಮೇಲೆಮೇಲರ್ಜುನನ್ ನಗುತ್ತೆನ್ನನಭಿನಂದಿಸಿದನ್;
ಆದೊಡಂ ಒಳಗೊಳಗೇಗುತಿರ್ದುದು ಅಸೂಯಾಗ್ನಿ!

ಅಬ್ಬೆ – ಕಾಡವರೊಡನೆ ಮಚ್ಚರಮೆ ನಾಡವರ್ಗೆ?
ಅರಸು ಮಕ್ಕಳ್ ಗೊಡವೆ ನಮಗೇಕೆ?
ಮಾಣ್, ಬಚ್ಚು, ಮಚ್ಚರಮಂ:
ಅವರ ನಾಡವರ ಪಾಡು; ನಮಗಿರ್ಕೆ ನಮ್ಮ ಕಾಡು.

ಏಕಲವ್ಯ – ಅವರ್ಗೆತ್ತಣಿಂದಂ ಪೇಳ್ ಅಂತಪ್ಪ ತೃಪ್ತಿ?
ತಮಗೆ ಬಾಯ್ಕೇಳವೇಳ್ಕುಮೆಂಬರ್
ಕಾಡುನಾಡೆಲ್ಲಮುಂ. (ಸ್ವಲ್ಪ ರೋಷವುಕ್ಕಿ)
ನನ್ನಡವಿ ಗೊಡೆವೆಗವರ್ ಬರದಿರ್ಕೆ.
ಬಂದೊಡಕ್ಕುಂ ತಕ್ಕ ಶಾಸನಂ!-

(ಇವರಿಬ್ಬರೂ ಮಾತಾಡುತ್ತಿರುವಾಗ ಸುತ್ತಲೂ ದೃಶ್ಯಕ್ಕೆ ಉಚಿತವಾದ ಅರಣ್ಯ ಮೃಗಪಕ್ಷಿಗಳ ವನ್ಯವ್ಯಾಪಾರಗಳು ಸಾಗುತ್ತಿರುತ್ತವೆ. ಜಿಂಕೆಮರಿಯೊಂದು ಆಡುತ್ತ ಬಂದು ಹೊಂಬಾಳೆಯಲ್ಲಿದ್ದ ಹಣ್ಣನ್ನೂ ಜೇನನ್ನೂ ಫಲಾರಮಾಡುತ್ತಿದ್ದುದನ್ನು ಕಂಡು)

ಅಕ್ಕೊ, ಅಬ್ಬೆ! ನೀನೆನಗೆ ತಂದುದಾ ಎಡೆ

ನೈವೇದ್ಯಮಾಯಿತ್ತು, ಕಾಣ್, ಬೇಂಟೆದೇವರ್ಗೆ!

ಅಬ್ಬೆ – (ನೋಡಿ)

ಕಂಡೆಯಾ;-ನಾನೆನಿತ್ತಟ್ಟಿದೊಡಂ
ಬಿಡದೆ ಬೆಂಬಳಿವಿಡಿದು ಪುಡುಕಿ ಬಂದುದಲ್ತೆ!
ಛೀ ಕಳ್ಳಮರಿ!
ಒರ್‌ದಿನಂ ತೋಳನುಣಿಸಪ್ಪೆ ನೀನ್
ಇಂತಲೆಯೆ ಕಾಡನ್!

(ಮಿಗದ ಮರಿಯಿಂದ ಹೊಂಬಾಳೆಯನ್ನು ಎಳೆದುಕೊಳ್ಳುತ್ತಾಳೆ.)

ಏಕಲವ್ಯ – (ಮೋರೆಯೆತ್ತಿ ಹೊಂಬಾಳೆಯನ್ನೆ ಹಿಂಬಾಲಿಸಿದ ಮರಿಯನ್ನು ಬಾಚಿ ಎ ಮುಂಡಾಡುತ್ತಾ)

ತೋಳನೆ?
ತೋಳನೆಲ್ಲಿರ್ಕುಮ್ ಈ ನನ್ನ ಮಲೆಯೊಳ್?

(ಕಲ್ಲಮೇಲಿಟ್ಟಿದ್ದ ಬಿಲ್ಲನ್ನು ನಿರ್ದೇಶಿಸಿ)

ಈ ಬಿಲ್ಲ ಸಿಂಜಿನಿಯ ಟಂಕೃತಿಗೆ ಬೆಬ್ಬಳಸಿ
ಕೋಳ್ಮಿಗಗಳಿತ್ತಣ್ಗೆ ಸುಳಿಯವಬ್ಬೆ!

(ಮಿಗವರಿಯನ್ನು ಮುಂಡಾಡುತ್ತಾ ಅದನ್ನು ಸಂಬೋಧಿಸಿ)

ಮುದ್ದ, ಮನಂ ಬಂದತ್ತ ನೀನ್ ಅಲೆ!
ನಿನ್ನ ಮೈಗಾವಲಲ್ತೆ ನಾನ್!

ಅಬ್ಬೆ – ಬಚ್ಚು, ಈಗಳೇನ್ ನೀನುಣ್ಬೆಯೋ..........

ಏಕಲವ್ಯ – (ನಡುವೆ ಬಾಯಿಹಾಕಿ) ಆಗಳೆಯೆ ಪೇಳ್ದೆನಲ್ತೆ?

ನೋಂಪಿ ಮುಗಿದಿಂ ಬಳಿಯೆ ಉಣ್ಬೆನೆಂದು!
ಇಂದು (ದ್ರೋಣದ ಪ್ರತೀಕವನ್ನು ತೋರಿಸಿ)

ಆ ಗುರು ನನ್ನನ್ ಅನುಗ್ರಹಿಸೆ ಬಂದಪನ್.

ಅಬ್ಬೆ – ಆರ್ ಪೇಳ್ದರ್ ನಿನಗದನ್?

ಏಕಲವ್ಯ – ಮಿತ್ರನಾ ಗುರುಪುತ್ರನಟ್ಟಿದೋರ್ವನ್ ಓಲೆಕಾರನ್.

ಅಬ್ಬೆ – (ಹಮ್ಮಿಂದ) ಬಂದಪನೆ ಗುರು? ಏಕೆ ಬಂದಪನ್?

ಏಕಲವ್ಯ – ಮತ್ತೇಕೆ? ಶಿಷ್ಯನಂ ಪರಸಲ್ಕೆ!

ಅಬ್ಬೆ – (ಸ್ವಲ್ಪ ಆಲೋಚಿಸಿ ಹಿಗ್ಗಿ) ಮೇಣ್.......

(ಮಗನಕಡೆ ಅರ್ಥಪೂರ್ಣವಾಗಿ ನೋಡುತ್ತಾಳೆ.)

ಏಕಲವ್ಯ – (ಅಕ್ಕರೆಯ ತೋಳ್ತೆರೆಯಿಂದ ತಪ್ಪಿಸಿಕೊಳ್ಳಲು ಒದ್ದಾಡಿಕೊಳ್ಳುತ್ತಿದ್ದ ಮರಿಯನ್ನು ಕೆಳಕ್ಕೆ ಬಿಟ್ಟು, ಅದು ಚಂಗನೆ ನೆಗೆದು ಓಡಿಹೋಗುವುದನ್ನೆ ನೋಡುತ್ತಾ)

ಮೇಣ್?

ಅಬ್ಬೆ – (ಹುಬ್ಬು ಸುಕ್ಕಾಗುವಂತೆ ಚಿಂತಾಮಗ್ನಳಾಗುತ್ತಾ)

ನಿನ್ನ ಬಿಲ್‌ಜಾಣ್ಮೆಯಂ ಕೇಳ್ದು
ಅರಸರ್ಗೆ ಕೆಳೆಯ ನೆರಮಾಗಲೇಂ
ಬಳಿಯನಟ್ಟುವರೊ?

ಏಕಲವ್ಯ – (ಹಾಸ್ಯದಿಂದ)

ಅಬ್ಬೆ, ನಿನ್ನಳ್ಕರೂಹೆ
ದಬ್ಬೆಯೊಳ್ ಕಬ್ಬಂ ಕಾಣ್ಬ ಕಬ್ಬಿಗಂಗಂ
ಅಬ್ಬಬ್ಬಮಕ್ಕುಂ!

ಅಬ್ಬೆ – (ಮಗನ ವಿಡಂಬನೆಯನ್ನು ಕಡೆಗಾಣ್ಬ ಲೆಕ್ಕಿಸದೆ)

ನೀನಾ ದೊರೆಗಳೂರ್ಗೆ ತೆರಳಲ್
ಈ ಕಾಡೊಳ್ ನಾನೆಂತೊರ್ವಳಿರ್ಪೆನ್? (ಸುಯ್ವಳ್)

(ಕಾಡಿನ ಕಣಿವೆಯ ದೂರದಲ್ಲಿ ಕಹಳೆಯ ಸದ್ದಾಗುತ್ತದೆ. ಏಕಲವ್ಯನು ಉಕ್ಕಿದುತ್ಸಾಹಸದಿಂದ ನೆಗೆದು ನಿಂತು ತನ್ನ ಸೊಂಟದಲ್ಲಿದ್ದ ಸುರುಳಿಗೊಂಬನ್ನು ತೆಗೆದು ಬಾಯ್ಗಿಟ್ಟು ಕಾಡೆಲ್ಲ ತುಂಬುವಂತೆ ದೀರ್ಘವಾಗಿ ತುತ್ತುರಿಯೂದುತ್ತಾನೆ. ಮತ್ತೆ ಕಹಳೆ ಪ್ರತ್ಯುತ್ತರ ಕೊಡುತ್ತದೆ.)

ಅಬ್ಬೆ – (ಬೆಚ್ಚಿ ನಿಂತು ಬೆರಗಾಗಿ) ಏನದು, ಬಚ್ಚು?

ಏಕಲವ್ಯ – ಏನಿಲ್ಲ, ಅಬ್ಬೆ, ಬೆದರದಿರ್.

ನಾನಾಜ್ಞೆಯಿತ್ತಂತೆ ಗುರುವಿನಾಗಮನಮಂ
ಸಾರುತಿದೆ ನಮ್ಮ ಕಾವಲ್‌ಕಹಳೆ? ನೀನ್ ನಡೆ ನಮ್ಮರವೀಡಿಂಗೆ.
ಅಣಿಗೆಯ್ ಪಣ್‌ಪಲಂಗಳ ಪಾರ್ವರುಣಿಸಂ.
ನಾನ್ ಬಿಲ್ಲೋಜನನ್ ಕಂಡಿದಿರ್‌ಗೊಂಡು
ಪೊಡೆವಟ್ಟು ಕರೆದು ತರ್ಪೆನ್.

ಅಬ್ಬೆ – (ಮಗನ ವೇಷಭೂಷಣಗಳ ಕಡೆಗೆ ಕೈದೋರುತ್ತಾ)

ನೀನಿಂತೆ ಪೋಗಿ ಕಾಣ್ಬುದೇನ್?
ಬಿಯದರೊಡೆಯಂಗೆ ತಗುವುಡುಗೆ ತೊಡುಗೆಯನಾಂತು
ಪೋಪುದೊಳಿತಲ್ತೆ?
ರಾಜಗುರುಗಾ ಮರ್ಯಾದೆವೇಳ್ಕುಂ.

ಏಕಲವ್ಯ – ಅಂತಪ್ಪ ಹಮ್ಮುಬಿಮ್ಮಿನ ಬೆಳ್ಪಲ್ತು
ನನ್ನ ಬಿಲ್ಲೊವಜನ್, ಅಬ್ಬೆ.
ಅಲ್ಲದೆಯೆ, ನೀನ್ ಪೇಳ್ವ ನಮ್ಮುಡುಗೆತೊಡುಗೆಗಳ್,-
ಕವಡೆ, ಗರಿ, ಪಲ್, ಉಗುರ್ ತೊವಲ್‌ಗಳ್,-
ಸೇರವವರಾ ನಾಗರಿಕ ರುಚಿಗೆ! (ಮತ್ತೆ ಕಹಳೆ ಕೇಳಿಸುತ್ತದೆ)
ತಳುವದಿರ್, ನಡೆ ಬೇಗಂ, ಅಬ್ಬೆ!

(ಅಬ್ಬೆ ಹೊಂಬಾಳೆ ಎತ್ತಿಕೊಂಡು ಹೊರಡುತ್ತಾಳೆ)

ಏಕಲವ್ಯ – (ಏರುತ್ತಿರುವ ಬಿಸಿಲಿನಲ್ಲಿ ಹಣೆಗೆ ಕೈಮರೆಮಾಡಿ ದೂರ ಹಬ್ಬಿರುವ ಕಣಿವೆಗಳ ಕಡೆಗೆ ದೃಷ್ಟಿಪ್ರಸಾರಮಾಡಿ)

ಓ ಅತ್ತಣಿಂದ್ಯೆತರ್ಪುದಾ ಕಹಳೆ ದನಿ.
ಧನ್ಯನಾನಿಂದು ಧನ್ಯಂ ದಿಟಂ!
ಗುರುಚರಣ ಧೂಳಿಯಿಂ ಧನ್ಯಮಾಯೆನ್ನಡವಿಪೊಡವಿ!
ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ
ಗುರುರೇವ ಪರಂಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

(ಆಘೋಷಿಸುತ್ತಾ ದ್ರೋಣಪ್ರತೀಕಕ್ಕೆ ದೀರ್ಘದಂಡಪ್ರಣಾಮ ಮಾಡುತ್ತಾನೆ. ಗಾ ಬೀಸುತ್ತದೆ. ಸುತ್ತಲೂ ಮರದ ಹೂ ಉದುರುತ್ತವೆ. ಜಲಪಾತದ ನೀರು ತುಂತುರು ತುಂತುರೆದ್ದು ಚಿಮ್ಮುತ್ತದೆ. ಅದುರ ಮೊರೆ ಹಕ್ಕಿಗಳುಲಿಯೊಡನೆ ಬೆರೆತು ಓಂಕಾರಲಯವಾಗುತ್ತದೆ.)

ದೃಶ್ಯ ೨

ಕರ್ಮ

[ಅಲೆ ಏರಿ ಅಲೆ ಇಳಿವ ಕಾಡುಮಲೆ. ಕಡಿದಾಗಿ ಎತ್ತರವಾಗಿ ಗಿರಿಶ್ರೇಣಿ ಅವಿಶ್ರಾಂತವೆಂಬಂತೆ ದಿಗಂತಗಾಮಿಯಾಗಿದೆ. ಪೂರ್ವಾಹ್ನದ ತರುಣಾತಪವು ತರಂಗಿತ ಹರಿದ್ವರ್ಣದ ಪರ್ಣಾರ್ಣವದ ಮೇಲೆ ಹಬ್ಬಿದೆ, ಪನಿ ತಳ್ತ ಮರದಲೆಯ ತಳಿರರಾಶಿ ಮಿರು ಮಿರುಗುವಂತೆ. ದಟ್ಟವಾಗಿ ಹಳುಬೆಳೆದು ಮುಳ್ಳುಬಳ್ಳಿ ಪಿಣಿಲಾಗಿ ಹೆಣೆದುಕೊಂಡ ಒಂದು ಕಂದರ ಪ್ರಾಂತದಲ್ಲಿ ಅಶ್ವತ್ಥಾಮ ಪ್ರವೇಶಿಸುತ್ತಾನೆ. ಏಕಲವ್ಯನಷ್ಟೆ ತರುಣ. ಮಲ್ಲಗಚ್ಚೆ ಬಿಗಿದು ಬೇಂಟೆಗಾರರ ವೇಷದಲ್ಲಿದ್ದಾನೆ. ಕೈಯಲ್ಲಿ ಬಿಲ್ಲು; ಬೆನ್ನ ಮೇಲೆ ಬತ್ತಳಿಕೆ. ಬಟ್ಟೆಗೆ ಹಿಡಿದ ಮುಳ್ಳುಗಳನ್ನು ಬಿಡಿಸಿಕೊಳ್ಳುತ್ತಾ ಶ್ರಮದಿಂದ ನಡೆದು ಬರುತ್ತಾನೆ. ಅವನ ಸೊಂಟದೆತ್ತರಕ್ಕೂ ಮಿಗಿಲಾಗಿ ಬೆಳೆದಿದೆ ಹಳು. ಮರಗತ್ತಲೆಯಲ್ಲಿ ನಡುನಡುವೆ ತೂರಿಬಂದ ಬಿಸಿಲ ಕೋಲುಗಳು ಅವನ ಮೆಯ್ಯ ಮೇಲೆ ಬಿದ್ದಹಾಗೆಲ್ಲ ಆಯುಧಕಾಂತಿ ಮಿಂಚುತ್ತದೆ.]

ಅಶ್ವತ್ಥಾಮ– (ನಿಂತು ಸುತ್ತಲೂ ಕಣ್ ಬೀಸಿ)

ಅಬ್ಬ ಎಂತಪ್ಪ ಪೇರಡವಿ ಇದು!
ಬಟ್ಟೆದೋರದೀ ಮುಳ್‌ಪಳುವದೊಳ್ ನುಗ್ಗಿ ನುಗ್ಗಿ
ಪರಿದು ಚೂರಾದುದುಟ್ಟುದೆಲ್ಲಂ. (ಮೇಲೆ ನೋಡಿ)
ಏನ್ ಮರಗಳಿವು, ಬಾನ್ ಮುಟ್ಟುತಿವೆ;
ಭೀಮ ವೃಕ್ಷಂಗಳ್! (ಹಿಂತಿರುಗಿ ನೋಡಿ ಕರೆಯುತ್ತಾನೆ.)
ಆರ್ಯ, ಇತ್ತಲ್, ಇತ್ತಲ್, ಎಡಕ್ಕೆ ತಿರುಗಿಮ್;
ಆ ವೇತ್ರಪುಂಜದ ದಕ್ಷಿಣಕೆ.
ಅಲ್ತಲ್ತು, ಅತ್ತಲಲ್ತು; ಅತ್ತ ಕೊರಕಲ್!
ಹ್ಣಾ! ಅಪ್ಪುದಪ್ಪುದು! ಅದೇ ಬಟ್ಟೆ! ಬನ್ನಿಮ್!

(ಆ ಕಡೆಯೆ ನೋಡುತ್ತಾ ನಿರೀಕ್ಷಿಸುತ್ತಿರುತ್ತಾನೆ. ಆಚಾರ್ಯ ದ್ರೋಣನು ಪೊದೆಗಳ ನಡುವೆ ತೂರಿ ತೂರಿ ಪ್ರವೇಶಿಸುತ್ತಾನೆ. ಎತ್ತರದ ಆಳು. ಚಿಂತಾಗಂಭೀರವಾದ ಮುಖಮುದ್ರೆ. ತಲೆಯುಡೆಯಿಂದ ಕೂದಲು ಇಳಿಯಬಿದ್ದಿದೆ. ಕಬಚ ತೊಟ್ಟಿದ್ದಾನೆ. ಮಲ್ಲಗಚ್ಚೆ ಹಾಕಿದ್ದಾನೆ. ಉತ್ತರೀಯ ಸ್ವಲ್ಪ ಅಸ್ತವ್ಯಸ್ತವಾಗಿ ಬಂದ ಹಾದಿಯ ಸ್ವರೂಪಕ್ಕೆ ಸಾಕ್ಷಿಯಾಗಿದೆ. ಬ್ರಾಹ್ಮಣ್ಯದ ಚಿಹ್ನೆಗಳಿಂದ ತೇಜಸ್ವಿಯಗಿ ತೋರುತ್ತಾನೆ.)

ದ್ರೋಣ– (ನಿಂತು ಸುತ್ತಲೂ ದೃಷ್ಟಿಯಟ್ಟಿ, ಮಗನ ಕಡೆ ನಸುನಗೆಮೊಗವಾಗಿ ನೋಡಿ)

ಬಟ್ಟೆಯಿರದೆಡೆ ಬಟ್ಟೆಯರಸುತಿರ್ಪಯ್, ವತ್ಸ!
ಪುಟ್ಟುಗುಣಮದು ನಿನಗೆ. ಚಿಹ್ನೆಯಾವುದುಮಿಲ್ಲಿ
ತೋರದಯ್ ನರ ಚರಣ ಸಂಚಾರದಾ!

(ಮೇಲೆ ನೋಡಿ, ಕಿಲಕ್ಕನೆ ನಕ್ಕು)

ಬಿಸಿಲುಮಡಿಯಿಡಲಳ್ಕುತಿರ್ಪುದೀ ಪಳುವೆಡೆಯ
ಕಾಳ್ಗಳ್ತಲೆಯ ಮುಳ್ಮನದ ಮುನಿಸಿಗಂಜಿ!
ಏನ್ ಬಿದಿರ ಮೆಳೆಗಳ್!
ಏನುಗ್ರ ಕಂಟಕದ ವೇತ್ರ ಪುಂಜಗಳ್!
ಏನ್ ತುರುಚೆಪಳು! ಕಾಲೂದುತಿರ್ಕುಂ!
ಸರುವಿನೆಡೆ ನೀರ್ ತಣ್ಪಲೊಳ್ ಜಿಗಣೆಗಳ್,
ಪತ್ತಿ ಪೀರ್ವುವು-ನೆತ್ತರುಣಿಗಳ್!
ಎಂತುಂ ನಲ್‌ಬಟ್ಟೆಗೆಳೆತಂದೆ ನೀನೆನ್ನನ್!

(ಬಗ್ಗಿ ಕಾಲಿಂದೇನನೊ ತೆಗೆದೆಸೆಯುವಂತೆ ಮಾಡಿ ಎದ್ದು)

ಪರಿವಾರಮಂ ಕರೆತರ್ಪಮೆಂದೊಡೆ
ಬೇಡಮೆಂದವರನಾ ಮಲೆಯಂಚಿನೊಳೆ ತೊರೆದೆ!
ಈಗಳ್ ಬಟ್ಟೆಗೆಟ್ಟುಂ
ಬಟ್ಟೆಯಿರದೆಡೆ ಬಟ್ಟೆಯರಸುತಿರ್ಪಯ್:
ಪುಟ್ಟೊಡನೆ ಬಂದುದಲ್ತೆ ನಿನಗೀ ವಕ್ರವರ್ತ್ಮಂ!

ಅಶ್ವತ್ಥಾಮ–(ನಸುನಗುತ್ತಾ)

ಆರ್ಯ, ಇದೇನ್ ಹಸ್ತಿನಪುರದ ಉದ್ಯಾನದೊಂದು
ಬಹಿರ್ವಲಯಂಗೆತ್ತಿರೇನ್? ಇದು, ಅಡವಿ!
ಪರಿವಾರಮಂ ಕರೆತಂದ ಮಾತ್ರದಿಂ
ನಿಮಗೆ ಪಾದವೇದಿಕೆಯಾಗೆ ಅಡವಿಗೇಂ
ಬೈತಲೆಯ ಬಟ್ಟೆಯಂ ತೆಗೆಯುತಿರ್ದಪರೆ ಅವರ್?
ನೀಮಿಲ್ಲಿರಿಮ್;
ಪಳು ಸುತ್ತಿದೀ ಬಂಡೆಯಗ್ರದೊಳ್ ಕುಳ್ಳಿರಿಮ್.
ಮುನ್ನಡೆದು ನೇರ್ವಟ್ಟೆಯರಿತಾನ್ ಮರಳ್ವಪೆನ್,
ಬೇಗಮೈತರ್ಪೆನ್! (ಹೆಜ್ಜೆಯಿಟ್ಟು ನಿಂತು)
ಕೋಳ್ಕಿಗಳಿರ್ಪುವು; ಈ ಬಿಡುಗಮಿಲ್ಲಿರ್ಕೆ!

(ಕತ್ತಿಯನ್ನು ಬಂಡೆಯ ಮೇಲೆ ಸಶಬ್ದವಾಗಿ ಇಟ್ಟು ಹಳುವಿನಲ್ಲಿ ನುಗ್ಗಿ ಮರೆಯಾಗುತ್ತಾನೆ.)

ದ್ರೋಣ– (ಮುನ್ನಡೆದು ಕತ್ತಿಯಿದ್ದಾ ಬಂಡೆಯ ನೆತ್ತಿಯನ್ನಡರಿ ಕುಳಿತು ಚಿಂತಾಮಗ್ನನಾಗಿ ಸುಯ್ಯುತ್ತಾನೆ.)

ಎನಿತು ತಣ್ಪಿರ್ಪುದೀ ಅಡವಿಯೆರ್ದೆಯೊಳ್!
ಕಾಡಾದೊಡಂ ನೂರುಮಡಿ ಲೇಸು
ಕರುಬು ಕಿಚ್ಚುರಿವ ಆ ನಮ್ಮ ನಾಡಿಗಿಂ.
ಧರ್ಮಸಂಕಟದೊಂದು ಚಿಂತಾಗ್ನಿಯಿಂದಳುರ್ವ
ನನ್ನೀ ಮನಕ್ಕೀ ವಿವಿಕ್ತದೇಶಂ
ವರ್ಷಿಸುತ್ತಿದೆ ಶಾಂತಿಪೀಯೂಷಮಂ.
(ತುಸುವೊತ್ತು ಅರೆಗಣ್ಣಾಗಿ ಶಾಂತಿಯನ್ನು ಅನುಭವಿಸುತ್ತಾನೆ)
ಅರಸುಮಕ್ಕಳ್ಗೊವಜುಗೆಯ್ವುದುಂ, ಮೇಣ್,
ಸಿಡಿಮದ್ದನರೆವುದುಂ ಎರಡುಮೊಂದೆ!
ಸೋಲ್ತುದೆನ್ನೀ ಜೀವಮಾ ಕೌರವರ ಪಾಂಡವರ
ದಾಯಾದಿ ಮಚ್ಚರದ ಬೇಗೆಯೊಳ್ ಬೆಂದು–
(ಏನನ್ನೊ ಆಲೋಚಿಸಿ ಒಂದು ನಿರ್ಣಯಕ್ಕೆ ಬಂದಂತೆ)
ಈ ಅಹಂಕಾರಮೆಯೆ ಮೂಲಮನಿತರ್ಕಂ.
ಅಲ್ಲದಿರೆ ನಾನೇತಕಾ ಅರ್ಜುನಗೆ ಗುರುವಾಗಿ,
ದ್ರುಪದನಂ ಗೆಲ್ದು ತಂದೆನ್ನಡಿಗೆ ಕೆಡೆವವೊಲ್
ಮಾಡಿ, ನನ್ನೆರ್ದೆಯ ಬಿಂಕದ ದೆವ್ವಕೆಡೆಯಿತ್ತು,
ಸವ್ಯಸಾಚಿಯ ಹಂಗಿಗೊಳಗಾಗುತಿರ್ದೆನ್?
ಲೋಕತ್ರಯಂಗಳೊಳ್ ನಿನ್ನಂ ಮಿರ್ದರಿಲ್ಲಮೆನೆ
ನಿನಗೆ ಬಿಲ್‌ಬಿಜ್ಜೆಯಂ ಕಲಿಪೆನೆಂದಾಡುತಿರ್ದೆನ್?
ಈಗಳೋ ಪಿಡಿದಿರ್ಪುದಾತಂಗೆ ಕೀರ್ತಿಶನಿ:
ಪೆಸರ್! ಪೆಸರ್! ಪೆಸರ್!
ತನ್ನೊಂದು ಪಿರಿಯ ಪೆಸರ್,
ಇನ್ನಿಲ್ಲಮೆಣೆ ತನಗೆ ಎಂಬಾ ಪೆಸರ್
ತನ್ನದಾಗಲ್ ವೇಳ್ಕುಮೆಂಬುದಾತಂಗೆ ಪೈತ್ಯಂ!
ಏನಹಂಕಾರಮೋ ಈ ಕ್ಷತ್ರಿಯರ ಮಕ್ಕಳ್ಗೆ!
ಪೆಸರ ಬಿಂಕಂ! ರಕ್ತ ಪಂಕಂ!

ಸೆಣಸುವಂಕಂ! ಲೋಕಕಾತಂಕಂ!-
ಪೆಸರಂತೆ ಪೆಸರ್? ಕೆಸರ್! ನೆತ್ತರ್ಗೆಸರ್!

(ಜುಗುಪ್ಸೆಯಿಂದ ಚಿಂತಾಮಗ್ನನಾಗುತ್ತಾನೆ. ಕಣ್‌ಮುಚ್ಚಿ ಸುಯ್ಯುತ್ತಾನೆ. ಮುಖ ಸುಕ್ಕಾಗುತ್ತದೆ. ಮತ್ತೆ ಕಣ್ದೆರೆದು)

ಬಿಂಕಕ್ಕೆ ಡೊಳ್ಳೀವುದದು ವಿದ್ಯೆಯೆ? ಅವಿದ್ಯೆ!
ತವಿಪುದಾವುದೊ ಅಹಂಕಾರಮಂ ಅದು ವಿದ್ಯೆ;
ಮಿಕ್ಕುದೆಲ್ಲಂ ಅವಿದ್ಯೆ!
ವಿದ್ಯೆಯೆಂಬಾ ಪೆಸರ ಮರೆಯೊಳಾನ್
ಅವಿದ್ಯೆಯಂ ಪೋಷಿಸುವ ಗುರುವಾದೆನಲ್ತೆ!
ಮತ್ತೇನ್? ಅಹಂಕಾರದೊಂದು ಛದ್ಮನೆಯಲ್ತೆ
ಕೀರ್ತಿಯೆಂಬಾ ಪೆಸರ ಪೆಸರಾಸೆ?
ಪೆಸರಂತೆ ಪೆಸರ್? ಏನವಿದ್ಯೆಯೊ ನಮಗೆ?
ಈ ಜನ್ಮದೊಳ್ ಈ ಪೆಸರ್;
ಮರುವುಟ್ಟೊಳಿನ್ನೊಂದು ಪೆಸರ್.
ಭರತಖಂಡದೊಳಿಂದು ದ್ರೋಣನ್!
ಬರ್ಪ ಜನ್ಮದೊಳಾದ ದೇಶದೊಳ್ ಅದಾವ ಪೆಸರೊ?
ಕೆನ್ನೀರ ನೀರ್ವೊಯ್ದು ಸಾಕಿ ಸಲಹುವೆವಲ್ತೆ
ಈ ಪುಸಿಯ ಪೆಸರೆಂಬ ಕನಸು ಮರಮಂ?
ನಾನುಮಾ ಕೆಸರೊಳಳ್ದುವೆನಲ್ತೆ ಇಂದು!–
ಮಾತೃಸೇವೆಯೊಳಿರ್ಪನ್,
ತಂದೆಯಿಲ್ಲದ ತಬ್ಬಲಿ;
ಆ ಕಾಡ ಬೇಡರ ಹುಡುಗನನ್ ಬೆರಳ್‌ಕೊಯ್ದು,
ಆ ರಕ್ತಪಂಕದೊಳಿವನ ಕೀರ್ತಿಪಂಕೇಜಮಂ
ಮೆರೆಯವೇಳ್ಕಂತೆ!
'ಪೋಗು, ನೀನೆಯೆ ಮಲ್ಲಯುದ್ಧಂಗೆಯ್ದು ಗೆಲ್;
ಅವನೊಡನೆ ಕಾದಾಡಿ ಅವನನ್ ಕೊಲ್!'
ಎಂದೊಡದು ತನಗೆ ಪಳಿಯಂತೆ!
ಯಃಕಶ್ಚಿತನ್ ಆ ವ್ಯಾಧಬಾಲಕನೊರ್ವನನ್
ದ್ವಂದ್ವಯುದ್ಧಕ್ಕೆಂತು ಕರೆದಪನ್, ಪಾಪ,

ಈ ಪಾರ್ಥಿವ ಕುಲೋದ್ಭವನ್, ಪಾರ್ಥನ್?

(ವಿಡಂಬನದ ನಗೆ ಬೀರಿ)

ಏನ್ ಬಿಮ್ಮೊ? ಹಮ್ಮಿಗೊರ್ ಕೋರೆ ತಾನ್!

(ಕೊಂಬಿನ ದನಿ ಮಲೆಗಾಡು ಮರುದನಿಗೊಡುವಂತೆ ಕೇಳಿಸುತ್ತದೆ. ದ್ರೋಣನು ಜಾಗ್ರತನಾಗಿ ಎದ್ದು ನಿಲ್ಲುತ್ತಾನೆ. ಆಲಿಸುತ್ತಾನೆ)

ಏನಿದೀ ತೂರ್ಯರಾವಂ,
ಅನುರಣಿತವಾಗುತಿದೆ ಗಿರಿಗಹ್ವರ ಗುಹಾಕಂಠದಿಂ!
ಎತ್ತಲಲೆದನೊ ವತ್ಸನ್?
ಬಟ್ಟೆದಪ್ಪಿದನೊ? ಮೇಣ್ ಪುಸಿವಟ್ಟೆವಿಡಿದನೊ?

(ತುಸುಹೊತ್ತು ಕೆಮ್ಮನಿದ್ದು ಕಾಡಿನ ನೀರವತೆಯನ್ನೂ ನಿರ್ಜನತೆಯನ್ನೂ ಬೃಹತ್ತನ್ನೂ ಮನಂಗೊಳ್ಳುವಂತೆ ಸಂವೀಕ್ಷಿಸಿ)

ಅಃ ದಿಟಂ ಭೀಮಕಾಂತಮಿಾ ಕಾಂತಾರಂ!
ಸಿಂಹಭವ್ಯಂ! ವ್ಯಾಘ್ರಸುಂದರಂ! ಹರಿಣಚಾರು!
ಫಣಿಭೈರವಂ! ಶತಲಲಿತಂ! ಪಕ್ಷಿಮಧುರಂ!
ಏಂ ರುದ್ರ ರಮಣೀಯಮಿಾ ರುಂದ್ರಾಟವಿ!

(ಕೊಂಬಿನ ಕೂಗು, ಪರೆಯ ದನಿ, ಆಳ್ಗಳ ಗೆಲ್ಲುಲಿ–ಮಲೆಯ ನೆತ್ತಿಯ ಕಡೆಯಿಂದ ಕೇಳಿಬರುತ್ತದೆ. ದ್ರೋಣನು ತುಸು ಮೊಗವೆತ್ತಿ ನಿಂತು ಕುತೂಹಲ ನಯನನಾಗಿ ನಿಟ್ಟಿಸುತ್ತ ನಿಲ್ಲುತ್ತಾನೆ. ಅಶ್ವತ್ಥಾಮನು ಶೀಘ್ರಗತಿಯಿಂದ ಪ್ರವೇಶಿಸುತ್ತಾನೆ.)

ಅದೇನ್, ವತ್ಸ, ಕಹಳೆ ಕೂಗುತಿದೆ?

ಅಶ್ವತ್ಥಾಮ–(ನಿಡಿದಾಗಿ ಉಸಿರೆಳೆದು ಬಿಡುತ್ತಾ)
ಆ ಕೇಳ್ದುದದು ಏಕಲವ್ಯನ ಕಾವಲ್‌ಕಹಳೆ!
ಸಾರುತಿದೆ ನಾವ್ ಬಂದುದನ್!

ದ್ರೋಣ–ಎಂತರಿತರಾಮ್ ಬಂದುದನ್!

ಅಶ್ವತ್ಥಾಮ–ಮರಮರನ ಏರಿರ್ಪರವನ ಕಾವಲಾಳ್!
ಪಳುವದೊಳ್ ಬಟ್ಟೆಯರಸುತ್ತಾನ್ ಸಾಗುತ್ತಿರಲ್
"ನಿಲ್! ಮುಂಬರಿಯದಿರ್!"
ಎಂದೊರಲ್ದುದೊರ್ ಕೊರಲ್.
ಅಳ್ಕೆಗಲ್ತಚ್ಚರಿಗೆ ನಿಂದು ಸುತ್ತುಂ ನೋಡಿದೆನ್!
ಕಂಡೆನಿಲ್ಲಾರುಮನ್! ದನಿಗೆ ಸೋಜಿಗವಡುತೆ
ಒಂದೆರಳ್ ಪಜ್ಜೆ ಪರಿದುದೆ ತಡಂ, ಮತ್ತೆ,

''ನಿಲ್! ಮುಂಬರಿಯದಿರ್! ಪರಿಯೆ ಪೆಣನಪ್ಪೆ ನೀನ್!''
ಎಂದಾಣೆಯಿತ್ತುದಾ ಬನಗೊರಲ್.
ಬಿಲ್ಗೆ ಬಾಣಂ ಪೂಡಿ ಸೆಣಸಲಣಿಯಾಗಿ ನಿಂದೆನ್.
ನಾಂ ನಿಂದ ಬಳಿಯ ಪೆರ್ಮರನ ತಲೆಯೊಲೆದ ಸದ್ದಾಯ್ತು.
ಕಣ್ಣೆತ್ತಿ ನೋಡಿ ಕಂಡೆನ್, ಒರ್ವನಂ ಬಿಯದ ಬೀರನಂ.
ನೋಡುತಿರೆ ಮರನೆತ್ತಿಯಿಂದೆ ಚಣದೊಳಿಳಿದನ್,
ಕಿಳ್ಗೆ ನೆಗೆದನ್; ಬಳಿಸಾರ್ದನ್;
'ಆರ್ ನೀಮ್? ಕೆಳೆಯೊ, ಪಗೆಯೊ?' ಎನುತ್ತಾರ್ದನ್.
ನಗುತೆ ಮಾರ್ನುಡಿದೆನ್ ''ಕೆಳೆಗೆ ಕೆಳೆ; ಪಗೆಗೆ ಪಗೆ!''
ಸಂತೋಷದಲೆಯನೊಂದನ್ ಮೊಗದಿ ಸುಳಿಸಿ ಕೇಳ್ದನ್:
'ಆನೆವೂರಿಂ ಬರ್ಪ ಬಿಲ್ಲೋವಜರೇಂ?'
ಮೊದಲೆನಗೆ ತಿಳಿಯದಿರ್ದೊಡಮೊಡನೆ ಅರಿತೆನ್
ಆನೆವೂರ್ ಎಮ್ಮ ಹಸ್ತಿನಪುರಕೆ ಕಾಡುವೆಸರೆಂದು!
'ನಾನವರ ಕಡೆಯವನ್' ಎಂದೆನ್.
ಕೈಮುಗಿಯುತೆಂದನ್ ''ಬನ್ನಿ, ಒಳ್ವಟ್ಟೆಗುಯ್ವೆನ್.
ನಮ್ಮೊಡೆಯನಾಣೆಯಾಗಿರ್ಪುದೆಮಗೆ
ತಮ್ಮಡಿಯನ್ ಕಂಡೊಡನೆ ಕರೆತರ್ಪುದೆಂದು.''
ನಾನೆಂದನ್: ''ಬಿಲ್ಲೋಜರಿಲ್ಲಿಲ್ಲಯ್,
ಕೆಳಗೆ ಕಣಿವೆಯೊಳಿರ್ಪರ್.
ಪಳುವಟ್ಟೆ ತಪ್ಪಿದುದು. ನಾನವರನ್ ಒರ್ಕಡೆ
ಕುಳ್ಳಿರಿಸಿ, ಬಟ್ಟೆಯರಿಯಲ್ಕೆಂದು ಬಂದೆನ್.''–
ಒಡನೆ ಸೊಂಟದೊಳಿರ್ದ ಕೊಂಬನ್ ಬಾಯ್ಗಿಟ್ಟು
ಬನಮದಿರೆ ಊದಿದನ್.
ಬೆಸಲೆಯಾದುವೊ ಮರಮರದ ಗರ್ಬಂಗಳೆನಲ್
ಮೂಡಿ ಬಂದರ್ ಪಡೆಪಡೆಯ ವೇಡರ್.
ಬೆಸಸಿದನ್ ದಂಡಿಗೆಯನೊಂದನ್ ತರಲ್ಕೆ.
ನಮ್ಮನವರೊಳ್ ಪೊತ್ತು ಮಲೆನೆತ್ತಿಗುಯ್ಕಲ್.
ಅವರತ್ತ ಪೋದರ್; ನಾನಿತ್ತ ವಂದೆನ್.

ದ್ರೋಣ– ನೀನವರ್ಗೀ ತಾಣಮಿರ್ಪೆಡೆಯನ್ ಪೇಳ್ದೆಯೇನ್?

ಅಶ್ವತ್ಥಾಮ– ಪೇಳ್ದೆನ್.

ದ್ರೋಣ– ಅಂತಪ್ಪೊಡಿನ್ ನೀನ್ ಪಿಂತಿರುಗು

ನಮ್ಮವರ್ ಬೀಡುವಿಟ್ಟೆಡೆಗೆ.

ನಾನೊರ್ವನೆಯೆ ಪೋದಪೆನ್.

(ಪ್ರಶ್ನ ದೃಷ್ಟಿಯಾಗಿ ಆಶ್ಚರ್ಯಪಡುತ್ತಾ ನಿಂತಿದ್ದವನನ್ನು ನೋಡಿ)

ಏಕಾಂತವೊಂದಿರ್ಪುದಾ ಏಕಲವ್ಯನ ಕೂಡೆ!

ಅಶ್ವತ್ಥಾಮ-(ತಂದೆಯ ಮೊಗದ ಕಡೆಗೆ ನೋಡುತ್ತಾ ತನ್ನ ಕಣ್ಣನ್ನು ಸಂಧಿಸದೆ ಅತ್ತ ಇತ್ತ ನೋಡುವ ನಿಮಿತ್ತ ವಂಚಿಸುತ್ತಿದ್ದ ದ್ರೋಣನ ಕಣ್ಣುಗಳಲ್ಲಿ ಹನಿಯಾಡುತ್ತಿದ್ದುದನ್ನು ಕಂಡು)

ಆರ್ಯ, ನಿಮ್ಮ ಏಕಾಂತಕಾನ್ ಭಂಗಮನ್ ತಾರೆನ್.

ಒಡವಂದೊಡಂ ದೂರಮಿರ್ಪೆನ್.

ದ್ರೋಣ–(ಅಸಹನೆಯಿಂದ)

ಒಡನೆ ವಂದೇನ್ ಮಾಳ್ಪಯ್!

ನಡೆವುದನ್ ತಡೆವೆಯೇನ್? ಮೇಣ್

ನೀನೆನಗೆ ಮೆಯ್‌ಗಾವಲೇನ್?

ನನ್ನ ನಾನ್ ರಕ್ಷಿಸಲ್ ಬಲ್ಲೆನಯ್!

(ಮೊಗದಿರುಹಿ ಕಹಳೆ ಕೇಳಿಸಿದ ಕಡೆಗೆ ನೋಡುತ್ತಿರುತ್ತಾನೆ.)

ಅಶ್ವತ್ಥಾಮ–(ತನ್ನೊಳಗೆ)

ಇದೇನಾರ್ಯನೀ ವರ್ತನಂ?

ಅಪ್ರಸನ್ನನಾಗಿರ್ಪನ್!

ಅವುದೊ ಗುಹ್ಯಸಂಕಟಂ ಕೊರೆಯುತಿಹುದೊಳಗಂ!

ಪೇಳಲೊಲ್ಲನ್, ವಂಚಿಸುತ್ತಿರ್ಪನೆನ್ನನ್.

ಈ ಪಯಣಮಂ ಬೆಸಸಿದಾಗಳೆ ನನಗೆ

ಪುಟ್ಟಿದುದು ಶಂಕೆ! ಆವುದೊ ಅಮಂಗಳಕೆ

ಕೈಕೊಂಡನೀ ವನಯಾತ್ರೆಯಂ!

ಎಂತಾದೊಡಂ ತಿಳಿವೆನ್;

ಏನಾನುಮಕ್ಕೆ ತಿಳಿಯದೆಯೆ ಮಾಣೆನ್!

(ತಂದೆಯ ಕಡೆ ನೋಡಿ)

ಆರ್ಯ, ನಿಮ್ಮನ್ ರಕ್ಷಿಸಲ್ಕಾನೆನಿತು ಬಲ್ಲಿದನ್!

ರಕ್ಷಿಸಲ್ಕಲ್ತು, ಸೇವಿಸಲ್ಕೈತರ್ಪೆನ್.

ದ್ರೋಣ–(ಮಗನ ಕಡೆ ನೋಡದೆ, ದಿಟ್ಟದನಿಯಿಂದ)

ಕೈಂಕರ್ಯಕಿರ್ಪನಾ ಏಕಲವ್ಯನ್;
ನಡೆ ನೀನ್ ಪಿಂತಿರುಗಿ ಬೀಡಿಂಗೆ.

ಅಶ್ವತ್ಥಾಮ– ಏಕೆ ಅಸ್ಥಿರರಾಗಿ ತೋರ್ಪಿರಿ, ಆರ್ಯ?
ದೇಹಮಸ್ವಸ್ಥಮೋ? (ತುಸು ತಡೆದು)
ಮೇಣ್ ಮನಮೊ?

ದ್ರೋಣ– (ಮುನಿದಂತೆ)
ವತ್ಸ, ನಿನಗೆ ಲೇಸಾಗುವಾಸೆಯಿರ್ಪೊಡೆ
ನನ್ನನೊರ್ವನೆಯೆ ಬಿಟ್ಟು ನಡೆ.

ಅಶ್ವತ್ಥಾಮ– ಮುನಿಯದಿರಿ, ಆರ್ಯ!
ನಿಮ್ಮಾಜ್ಞೆಯಂತೆ ಪೋದಪೆನ್. ಆದೊಡಂ
ನಾನ್ ಗೆಯ್ದ ತಪ್ಪೇನ್ ಅದನ್ ತಿಳಿದೆ ಪೋದಪೆನ್.

ದ್ರೋಣ– (ಮಗನನ್ನು ದುರುದುರು ನೋಡುತ್ತಾ)
ನಿನ್ನದೇನ್ ತಪ್ಪಿಲ್ಲ.
ಮನದೊಂದು ತುಮುಲಮೆಯೆ ಕಾರಣಂ.
ಆ ವ್ಯಾಧಿಗೀಗಳ್ ನಿರ್ಜನತೆ ಭೇಷಜಂ;
ನಿಶ್ಯಬ್ದಮೇ ತಾಂ ಪಥ್ಯಂ!

ಅಶ್ವತ್ಥಾಮ– ಕ್ಷಮಿಸಿಮಾರ್ಯ. ನಾನ್ ಪೆರನಲ್ಲನ್ ನಿಮಗೆ.
ಮೊನ್ನೆಯಿಂದಾವುದೋ ಗೂಢಶೋಕಂ
ಕೊರೆಯುತಿರ್ಪುದು ನಿಮ್ಮ ಜೀವಮಂ.
ಕಂಡೆನಾದೊಡಂ ಅರಿತೆನಿಲ್ಲ.
ದಿಟಂ ಪೇಳಿ; ಕಾಲ್ವಿಡಿದು ಬೇಡುವೆನ್:
ಆವುದೊ ಅಮಂಗಳಕೆ ಕೈಕೊಂಡಿರೀ ಪಯಣಮಂ!

ದ್ರೋಣ– (ಸುಯ್ದು) ನೀನೆಂದುದಹುದಾದೊಡಂ.....
ಅನಿವಾರ್ಯಮದು, ವತ್ಸ!

ಅಶ್ವತ್ಥಾಮ– (ಉದ್ವೇಗದಿಂದ)
ಏನದು, ಆರ್ಯ, ಪೇಳಿಮ್.
ದಿಟಮಪ್ಪವೋಲ್ ತೋರ್ಪುದೆನ್ನಾಶಂಕೆ:
ಆ ಅರ್ಜುನನೆನೊ ಅದಕೆ ಕಾರಣಂ?

ದ್ರೋಣ– (ಉದಾಸೀನವಾಣಿಯಿಂದ ಆದರೂ ದೃಢವಾಗಿ)

ವಿಧಿ, ಕಾರಣಂ!
ಅಂದು ಆ ಅರ್ಜುನನ ಕೈಯಿಂದಮಾ ದ್ರುಪದನಂ
ಭಂಗಿಸಿದ ಕತದಿಂದಮಾತಂಗೆ ನಾನಿಂದು
ಋಣಿಯಾಗಿ ಕೈಕೊಂಡೆನೀ ಹೇಯಕಾರ್ಯಮಂ!
ನನ್ನಹಂಕಾರದಾ ಛಲಮೆ ಮರಿಯಿಕ್ಕಿದುದು
ಪಾರ್ಥನ ಅಹಂಕಾರದೀ ಕ್ರೂರ ಈರ್ಷ್ಯೆಯಂ.

ಅಶ್ವತ್ಥಾಮ–(ಉಗ್ರವಾಗಿ ಅಕ್ಷರಗಳನ್ನು ವಿರಳವಿರಳವಾಗಿ ಉಚ್ಚರಿಸುತ್ತಾ)
ಕರುಬಿದನೊ ಏಕಲವ್ಯಂಗೆ ಆ ಕೀಳೆರ್ದೆಯನ್?

ದ್ರೋಣ–(ಸುಯ್ದು)
ದ್ರುಪದನಂ ಗೆಲ್ದೆನ್ನ ಬಿಂಕಕ್ಕೆ ಬೇಳ್ವೆಯಂ
ಸಲ್ಲಿಸಿದ ಸಂತೋಷ ಸಮಯದೊಳ್ ಪೇಳ್ದೆನ್!
''ಅರ್ಜುನ, ನಿನಗಿದೊ ಮೆಚ್ಚಿ ಪೂಣ್ದಪೆನ್:
ಜಗತ್ರಯದಿ ನಿನಗೆಣೆಗಳಿಲ್ಲದೊಲ್
ನಿನಗೆನ್ನ ಬಿಲ್‌ಕಲ್ಪಿಯಂ ದಾನವೀವೆನ್!
ನಿನ್ನ ಪೆಸರಂ ಗಗನಕೆತ್ತುವೆನ್; ಮೇಣ್ ಅದನ್
ದಿಕ್ಕರಿಲಲಾಟದೊಳ್ ರಕ್ತಾಕ್ಷರದಿ ಕೆತ್ತುವೆನ್;
ಆಚಾರ್ಯ ದ್ರೋಣಂಗಿನ್ನಿಲ್ಲ ಶಿಷ್ಯನ್,
ನಿನ್ನಂ ಮೀರ್ವ ಶಿಷ್ಯನ್,
ಎಂಬ ಕೀರ್ತಿಯೆ ಕಿರೀಟಮೆನೆ ಕಿರೀಟಿ ಎನಿಪೆನ್!''
ಅಂದಾಂ ಪೇಳ್ದುದನ್ ಅದನೆ ಬಲ್ವಿಡಿವಿಡಿದು
ಆ ಬೇಡರಣುಗಂಗೆ ಕರುಬಿದನ್,
ಒಲ್ಲದೆನ್ನನ್ ಈ ಪೊಲ್ಲಗೆಯ್ಮೆಗೆ ತರುಬಿದನ್.

ಅಶ್ವತ್ಥಾಮ–(ಸುಯ್ದು)
ಈಗಳೇನ್ ಮಾಳ್ಪರಾ ಬೇಡರಣುಗಂಗೆ?

ದ್ರೋಣ–(ಬಾನೆಡೆಗೆ ನೋಡುತ್ತ)
ಏನಾನುಮೊಂದನ್: ಪೂಣ್ಕೆ ನಿಲ್ವಂತೆ, ಮೇಣ್
ಅರ್ಜುನನ ಮಚ್ಚರಾಗ್ನಿಗೆ ಬೇಳ್ವೆ ಸಲ್ವಂತೆ!

ಅಶ್ವತ್ಥಾಮ–(ದೃಢಧ್ವನಿಯಿಂದ)
ಪೇಳಿಮೇನ್ ಮಾಳ್ಪರೆಂಬುದಂ.
ಅಲ್ಲದಿರೆ ಬರ್ಪೆನಾನ್ ನಿಮ್ಮ ಬೆಂಬಳಿಯೆ.

ದ್ರೋಣ–(ಕನಲ್ದು) ಬಂದೇನ್ ಮಾಳ್ವಯ್?
ಅಶ್ವತ್ಥಾಮ–(ದೃಢವಾಗಿ) ತಡೆವೆನನ್ಯಾಯಮಂ!
ದ್ರೋಣ–ದ್ರೋಣನ್ ತಾನೆ ತಡೆಯಲಾರದುದನ್
ಎಂತು ತಡೆವನ್, ಪೇಳ್, ದ್ರೋಣಾತ್ಮಜನ್?
ಅಶ್ವತ್ಥಾಮ–(ಕುಪಿತನಾಗಿ)
ಆ ಅರಸು ಮಕ್ಕಳ ಕೊಳ್ಗೆ ಆಳಾಗಿ
ಬಾಳ್ಗೋಣನೊಡ್ಡುತಿರ್ಪಿರಿ ನರಕನಕ್ರದ ಬಾಯ್ಗೆ!
ದ್ರೋಣ–(ಗಂಭೀರ ವಾಣಿಯಿಂದ ಸಾವಧಾನವಾಗಿ)
ಬರಿಯ ಜೋಳದ ಪಾಳಿಯಲ್ತು, ವತ್ಸ.
ಕೊಳ್ಮಿಣಿಯ ಪಿಡಿದಿರ್ಪುದಾ ಬಿದಿಯ ಕಯ್!
ನೂಂಕುತಿಹುದನಿಬರಂ ತನ್ನ ಲೀಲಾರ್ಥಂ.
ಅಂತಲ್ಲದಿರೆ, ನಮ್ಮನೆತ್ತಣಿಂದಲೊ ಕರೆದು
ಒಯ್ದು ತಂದೀ ನೃಪಾಲರೊಳಿಗಕೆ ತಳ್ಳುತಿರ್ದುದೆ
ಈಶ್ವರೇಚ್ಛಾರೂಪದೆಮ್ಮ ಕರ್ಮಪಾಶಂ?
ವತ್ಸ, ಉಬ್ಬೆಗಂಗೊಳ್ಳದಿರ್ ನೀನ್;
ದೈವವೊಂದೊಳ್ವಟ್ಟೆಯಂ ಸೂಚಿಸಿರ್ಪುದು ನನಗೆ.
ಆ ದೈವಮಂ ನೆಮ್ಮಿ ಕೆಲಸಮಾಳ್ಪೆನ್,
ತಣಿಯುವಂತರ್ಜುನಂ,
ಸಲ್ವಂತೆ ನಾನಿತ್ತ ವಚನಂ, ಮೇಣ್
ಏಕಲವ್ಯಂಗೊದಗದೊಲ್ ಆವುದುಂ ಪೆರ್ಕೇಡು.
ಅಶ್ವತ್ಥಾಮ–ಕರ್ಣಂಗೆ ಪರಶುರಾಮಂ ಗೆಯ್ದವೋಲ್....
ದ್ರೋಣ–ಛೀ ಛೀ ಅಂತಲ್ತು ನನ್ನ ಬಗೆ!
ಆದೊಡಂ ನೀಂ ಪರಶುರಾಮನಂ ತೆಗಳದಿರ್.
ಅಶ್ವತ್ಥಾಮ–ಮತ್ತೇನ್? ಪೊಗಳವೇಳ್ಕುಮೊ?
ದ್ರೋಣ–ನೀನಿನ್ನುಂ ಕಿರಿಯನ್, ಅಜ್ಞನ್.
ಅಶ್ವತ್ಥಾಮ–ಭಕ್ತಿಯಿಂ ಸೇವಿಸಿದ ಶಿಷ್ಯಂಗೆ ಶಾಪಮಂ
ಕೊಟ್ಟಾ ಕೊಡಲಿಗೊರವಂ ಮಹಾಪ್ರಾಜ್ಞನ್!
ದ್ರೋಣ–ಮುಂದಪ್ಪುದಂ ಯೋಗದೃಷ್ಟಿಯೊಳರಿತು
ಚರಿಸುವಾತನ್ ಮಹಾಪ್ರಾಜ್ಞನೆ ವಲಂ!

ಅಶ್ವತ್ಥಾಮ– ಏನ್ ಯೋಗಮೊ! ಏನ್ ದೃಷ್ಟಿಯೊ?
ನಿಮ್ಮನ್ನರಪ್ಪ ಗುರುಗಳ ಮಾರ್ಗಮಚಿಂತ್ಯಂ!
ದ್ರೋಣ– ವತ್ಸ, ಕಲಿ ಕೈದುವಂ ಸಮೆಯವೇಳ್ಕುಂ ದಿಟಂ.
ಸಮೆದ ಮಾತ್ರದಿ ಸಮೆದ ಕೈದುಗಳನೆಲ್ಲಮಂ,
ಸಮಯದೌಚಿತ್ಯಮಂ ಪಾತ್ರದೌಚಿತ್ಯಮಂ
ಹಿತಾಹಿತೌಚಿತ್ಯಮಂ ಮತ್ತೆ ದೈವೇಚ್ಛೆಯಂ
ತಿಳಿಯದೆಯೆ, ತೂಗದೆಯೆ, ಬಗೆಗೊಳ್ಳದೆಯೆ,
ಪೊಳೆವ ಕೈದುವ ನಿಶಿತಕಾಂತಿಗೆ ಮನಂ ಸೋಲ್ತು
ಪ್ರಯೋಗಿಸಲ್ ವೇಳ್ಕುಮೆಂಬುದು ಮರುಳ್ತನಂ.
ಕಬ್ಬಿಗಂ ತನ್ನೊಳಿರ್ಪುಪಮೆಗಳನೆಲ್ಲಮಂ
ಒಂದೆ ಕಬ್ಬದೊಳೊರ್ಮೆಯೆ ಪ್ರಯೋಗಿಸಲ್
ಬೆಳ್ತನಂ; ಕಬ್ಬಂ ಕೆಡುಗುಮಲ್ತೆ!
ಕೈದುವಂ ಸಮೆಯುವಾತಂಗೆ ಅದನ್ ಮುರಿಯಲುಂ,
ಸಮಯಕ್ಕೆ ತಗುವವೋಲದರ ತೀಕ್ಷ್ಣತೆಯನಿನಿತು
ಸಂಯಮಿಸಿ ದಿವ್ಯಲೀಲಾ ನಿಯಮಕನುಗೊಳಿಸಲುಂ,
ಅನಿವಾರ್ಯಮಾದೊಡಾ ಕೈದುವಂ
ಮುಂದೆ ಬರ್ಪೊಂದನ್ಯ ರಣಲೀಲೆಗೋಸುಗಂ
ಒರೆಗಿಕ್ಕಿ ಬದಿಗಿರಿಸಲುಂ, ತಿಳಿಯವೇಳ್ಕುಂ.
(ಇಬ್ಬರೂ ತುಸುಹೊತ್ತು ನೀರವವಾಗಿ ನಿಲ್ಲುತ್ತಾರೆ)
ಚಿಂತಿಸದಿರ್, ವತ್ಸ,
ನಿನ್ನ ಕೆಳೆಯಂಗಾ ಏಕಲವ್ಯಂಗಿನಿತು ಪೆರ್‌ಕೇಡಡಸದೊಲ್
ಸಲಿಸಿ ಬರ್ಪೆನಾ ಬೀಭತ್ಸುವಿಂಗಿತ್ತ ವಚನಮನ್.
ನೀನ್ ಮರಳ್ ಬೀಡಿಂಗೆ.
ನೀನ್ ಬಂದೊಡೆನ್ನೊಡನೆ, ಕೇಳ್,
ಇರ್ಮಡಿಸುಗುಂ ನನ್ನ ಧರ್ಮಸಂಕಟಂ!
ಅಶ್ವತ್ಥಾಮ– ಅರ್ಜುನಂಗಿತ್ತಂತೆ ನನಗೀಗಳಿತ್ತಿ ಓರಿ
ಭಾಷೆಯುಂ, ಏಕಲವ್ಯಂಗಾವುದುಂ ಕೇಡಾಗದೊಲ್.
ದ್ರೋಣ– (ಒತ್ತಿ ಹೇಳುತ್ತಾನೆ) ಪೆರ್ ಕೇಡಡಸದೊಲ್.
(ಗೆಲ್ಲುರಿ ಕೊಂಬನ ಕೂಗುವೆರೆಸಿ ಕೇಳಿಬರುತ್ತದೆ)

ಅವರ್ೈತರ್ಪ ಮುನ್ನಮೆಯೆ ನೀನ್ ಪೋಪುದೊಳಿತು.
ಕಂಡಮೇಲ್ ಮರಳಲೀಯನ್ ನಿನ್ನನ್ ಏಕಲವ್ಯನ್.

(ಅಶ್ವತ್ಥಾಮನು ಕಾಲೆಳೆದುಕೊಂಡು ಹೋಗುತ್ತಾನೆ.)

ಮಾಳ್ಪುದನ್ ಮಾಳ್ಪೆನ್! ತಾನ್ ಅಪ್ಪುದಕ್ಕೆ!
ಸರ್ವಜ್ಞಂ ಸರ್ವಶಕ್ತಂ ಆ ದೈವಮಿರ್ಕುಂ!

(ಜನರ ಗೆಲ್ಲುಲಿ ಬಳಿಸಾರುತ್ತದೆ. ''ಗೆಲ್ ನಮ್ಮೊಡೆಯಾ!'' ''ನಲ್ ನಮ್ಮರಸಾ!'' '' ಗೆಲ್ ಹೋ! ನಲ್ ಹೋ!'' ಎಂಬ ಘೋಷಗಳು ಬರುವತ್ತ ಕಡೆ ನೋಡುತ್ತಾ ನಿಲ್ಲುತ್ತಾನೆ.)

ದೃಶ್ಯ ೩

ಯಜ್ಞ

[ಮೊದಲನೆಯ ದೃಶ್ಯದಲ್ಲಿದ್ದಂತೆಯೆ ಜಲಪಾತ, ಬಂಡೆಗಳು, ಶಿಲಾವೇದಿಕೆ, ದ್ರೋಣ ಪ್ರತೀಕ ಇತ್ಯಾದಿ. ಇಳಿ ಹೊತ್ತು. ಸೂರ್ಯನು ಪಶ್ಚಿಮ ದಿಗಂತಕ್ಕೆ ಅನತಿ ದೂರದಲ್ಲಿದ್ದಾನೆ. ನಿಲ್ ಬಂಡೆಗಳ ನೆಳಲುಗಳು ಮೂಡಲಿಗೆ ನೀಳ್ದು ಬಿದ್ದಿವೆ. ದ್ರೋಣ ವಿಗ್ರಹಕ್ಕೆ ಇದಿರಾಗಿ ಆಚಾರ್ಯ ದ್ರೋಣನು ನಿಂತಿದ್ದಾನೆ. ಅವನ ಕೊರಳಲ್ಲಿ ಕಾಡು ಹೂಗಳಿಂದ ರಚಿತವಾದ ಒಂದು ಹಾರ ನೇಲುತ್ತಿದೆ. ತನ್ನ ಪ್ರತೀಕವನ್ನು ನಿಡುಹೊತ್ತು ನಿಟ್ಟಿಸಿ, ಹೆಮ್ಮೆಯಿಂದ ತಲೆದೂಗುತ್ತಾನೆ. ಮತ್ತೆ ಕೊರಳೆತ್ತಿ ದೂರನೋಡಿ ಏಕಲವ್ಯನನ್ನು ನಿರೀಕ್ಷಿಸುತ್ತಾನೆ.]

ದ್ರೋಣ– ಧನ್ಯನ್ ನೀನ್, ಏಕಲವ್ಯ, ಧನ್ಯನೆ ದಿಟಂ.
ಎನಿತೆನಿತೊ ಬಾಲರ್ಕಳನ್ ನಾನ್ ಕಂಡಿಹೆನ್,
ಕಲಿಸಿಹೆನ್. ಕಾಣೆನಾನ್ ಶ್ರದ್ಧೆಯೊಳ್ ನಿನಗೆಣೆಯನ್
ಇನ್ನೆವರಮ್, ಎನ್ನ ಹಿರಿಮೆಯನೆನಗೆ ತೋರಿದಯ್;
ಗುರುಕೃಪಾ ಮಹಿಮೆಯಂ ಲೋಕಕ್ಕೆ ಸಾರಿದಯ್.
ನೀನು ಗುರುವೆಂದೊಲಿದೆ ನನಗೆ ಗುರುತನವಿತ್ತೆ.
ಮೇಣ್, ಗುರುವಾದೆ. (ದೂರ ಏಕಲವ್ಯ ಬರುವುದನ್ನು ಕಂಡು)
ಅದೊ, ಪರ್ವತಾರಣ್ಯಚೇತನಮೆ
ಮೆಯ್ಗೊಂಡು ಬರ್ಪಂತೆ ಬರ್ಪನಾ ಏಕಲವ್ಯನ್,
ಗಾತ್ರ, ಭವ್ಯನ್! ದಿವ್ಯಮವನಾ ಪಿಡಿದ ಚಾಪಂ,
ಉಪಾಸನಾ ಶಕ್ತಿರೂಪಂ! ಅಃ ಏನ್ ವಿನಯಶಾಲಿ!
ಅದೆಂತೆನ್ನನಾದರಿಸಿದನ್! ಅದೆಂತೆರಗಿ
ಪೂಜೆಗೈದನ್! ನನ್ನೆರ್ದೆಯ ಕಳ್ತಲೆಯ ಗವಿಯ
ದುರಭಿಸಂಧಿಯ ಪಾಪ ಘೂಕಾಕ್ಷಿ ತಾನ್
ಅವನೆರ್ದೆಯ ಸರಳಗೌರವ ದೀಪ್ತಿಗಳ್ಕಿ
ಕಣ್‌ಮುಚ್ಚಿದುದು, ನಾಣ್ಚಿ ಕುಗ್ಗಿದೋಲ್. ಆ ನಾಗರಿಕ
ನೃಪಕುಮಾರರ ವಿನಯಮೇಗಳುಂ ಫಲವಾದಿ.
ಕಾಣೆನಾನ್ ಇಂತಪ್ಪ ನಿಷ್ಕಾಮಮಂ ಭಕ್ತಿಯಂ.
ಅವನಾ ಕೃತಜ್ಞತೆಯೊ, ಶರಧಿಯೊಲ್ ಅಮೇಯಪರಿಧಿ.
ಅಂದವನ್ ಬಂದಂದು ನಾನಿತ್ತುದಾದೊಡಮೇನ್?

ಅಲ್ಪಂ! ಆ ಅಲ್ಪದಿಂದೆಂತಪ್ಪ ಭೂಮಮಂ
ಸಾಧಿಸಿರ್ಪನ್! – ಸವ್ಯಸಾಚಿಯ ಕರುಬು ಬರಿಯ
ಕರುಬಲ್ತು: ಭಯಮದಕೆ ಹೃದಯಕಾರಣಮಪ್ಪೊಡಂ
ಸಕಾರಣಂ!

(ಏಕಲವ್ಯನು ಧನುರ್ಧಾರಿಯಾಗಿ ಮುಗುಳುನಗೆ ನಗುತ್ತಾ ಪ್ರವೇಶಿಸುತ್ತಾನೆ. ತುಂಬಿದ ಬತ್ತಳಿಕೆ ಬೆನ್ನ ಮೇಲಿದೆ.)

ಏಕಲವ್ಯ – (ಹೆಮ್ಮೆಯಿಂದ) ಆಚಾರ್ಯ, ತಂದೆನಿದೊ ಚಾಪಮನ್;
ಏನ್ ಬೆಸಸು ತೋರ್ದಪೆನ್.

ದ್ರೋಣ – ತೋರ್, ವತ್ಸ, ಕಣ್ತಣಿಯೆ
ಕಾಣ್ಬೆನಾ ನಿನ್ನ ಬಣ್ಣಿಸಿದ ಬಿಲ್ ಜಾಣ್ಮೆಯನ್.

ಏಕಲವ್ಯ – ನೀನ್ ಕೊಟ್ಟುದಾ ಜಾಣ್ಮೆ! ನನ್ನದೆಂತಕ್ಕುಮ್?

ದ್ರೋಣ – ನಮ್ಮ ಭಕ್ತಿಗೆ ಮೆಚ್ಚುವಾ ಸಚ್ಚಿದಾನಂದಮೆ
ಜಗದ್ಗುರು, ಏಕಲವ್ಯ, ಬೇರೆ ಗುರುವುಂಟೆ?
ನರಗುರು ನಿಮಿತ್ತಮಾತ್ರನ್.

ಏಕಲವ್ಯ – (ಆಚಾರ್ಯನನ್ನು ಮೆಚ್ಚಿ ನೋಡುತ್ತಾ) ಅಂತಪ್ಪೊಡಾ
ಚಿದ್ಭಕ್ತಿ ಪರಿಯಲ್ಕೆ ಪಾತ್ರನಪ್ಪಾತನುಂ
ಪೂಜ್ಯನ್, ನಿಮಿತ್ತಮಾತ್ರನುಂ.-ಪೂಜ್ಯ,
ಪೇಳ್, ಒದಗೆಯಿಲ್ಲದೆ ನೀರ್ ಪರಿದುಬರ್ಕುಮೆ
ನಾವ್ ಕರೆವ ತಾಣಕ್ಕೆ? – ಬೆಸಸು, ತೋರ್ಪೆನಾನ್
ನೀನ್ ಕಲಿಸಿದಾ ಧನುರ್ವಿದ್ಯೆಯನ್!

ದ್ರೋಣ – (ಚಿಂತಾಮಗ್ನನಾಗಿ, ಏನನ್ನೋ ನಿರ್ಣಯಿಸಿ ಮೇಲೆನೋಡಿ)
ಕಾಣ್ಬುದೇನಾ ಗಗನ ಪಕ್ಷಿ?

ಏಕಲವ್ಯ – (ದಿಟ್ಟಿಸಿ) ಮುಗಿಲಾಚೆ ಮರೆವೋದುದಾ ಚುಕ್ಕಿ!

ದ್ರೋಣ – ಮರೆಯಾದೊಡೇನ್ ಕಣ್ಗೆ? ಕಿವಿಮರೆಯೆ ಕೇಳ್ವ ಉಲಿ?

ಏಕಲವ್ಯ – (ಆಲಿಸಿ) ಆಃ ಏನಿತು ಸವಿ! ಅದನೆಂಬರ್ ಪೊಂಗುಳಿ.
ಎಳೆವೆಯಿಂದಾ ದನಿಯನೆನಿತೊ ಸೂಳ್ ಕೇಳಿಹೆನ್:
ಅಬ್ಬೆಯಾ ತೋಳ್ತೊಟ್ಟಿಲೊಳ್ ಪಟ್ಟು ಕೇಳಿಹೆನ್;
ಅಯ್ಯನೊಡನಾಂ ತಿಪ್ಪತಿಪ್ಪಂ ಪಜ್ಜೆಯಿಟ್ಟು
ಮಲೆತಲೆಯನಲೆವಂದು ನವಿರ್‌ನಿಮಿರಿ ಕೇಳಿಹೆನ್;
ಮತ್ತೆನಿತೊ ಸೂಳ್ ಅದಕೆ ಮಾರುಲಿಯ ಕೊಡುವಂತೆ

ಕರೆದು ಕರೆದಣಕಿಸಿಹೆನ್ ಆನ್ ಅದನ್! ಆದೊಡಂ
ಆಲಿಸುವೆನೇಗಳುಂ ಅದುವೆ ಮೊದಲೆಂಬವೋಲ್.

ದ್ರೋಣ–(ಬಾನೆಡೆಗೆ ನೋಡುತ್ತಾ) ಎಚ್ಚು ಕೆಡವದನ್.

ಏಕಲವ್ಯ–(ಬೆಚ್ಚಿ ಹಿಂಜರಿದು) ಆಗದಾಗದು, ಆರ್ಯ!

ದ್ರೋಣ–ಕಾಣದಿರ್ದೊಡಮೇನ್? ಕೇಳ್ವುದದರಾ ಕೊರಳ್.
ಶಬ್ದವೇಧಿಯನರಿವೆಯಲ್ತೆ? ನೋಳ್ಪಮ್.

ಏಕಲವ್ಯ–ಇದೇನಿದಾರ್ಯ? ಅರಿಯದನೊಲ್ ಆಡುತಿರ್ಪಯ್!

ದ್ರೋಣ–(ಮರೆನಗೆ ನಗುತ್ತಾ)
ನೋಳ್ಪಮ್ ನಿನ್ನ ವಿದ್ಯಾಸಾಮರ್ಥ್ಯಮಂ;
ಇಸು, ಏಕಲವ್ಯ,

ಏಕಲವ್ಯ–ಅಪರಾಧಮಿಲ್ಲದಾ ಸಾಧುಮಂ ಕೊಲಲ್ಕಲ್ತು,
ಆಚಾರ್ಯ, ಆ ವಿದ್ಯೆಯಂ ನೀನಿತ್ತುದೆನಗೆ.
ಮುನಿಗುಂ ಮಂತ್ರಾಧಿದೇವತೆ; ಮೇಣ್,
ದಿವ್ಯ ವಿದ್ಯಾ ಬಲದಿ ಪಾಪಕಾರ್ಯವನೆಸಗೆ
ಧರ್ಮಂ ಋತಚ್ಯುತನೆನಗೆ ತಾನುಗ್ರಮಕ್ಕುಂ; ಮೇಣ್,
ವಿದ್ಯಾಶಕ್ತಿ ತಾನೊಡನೆ ತಿರೋಹಿತಮಕ್ಕುಂ; ಮೇಣ್,
ಆತ್ಮ ಹಾನಿಯಿಂ ಸರ್ವನಾಶಮಕ್ಕುಂ.–
ತಾಮದನೆಲ್ಲಮಂ ಬಲ್ಲಿದಾರೊಡಂ,
ನನಗಿದು ಪರೀಕ್ಷೆಯಲ್ತೆ, ಈವೊಳ್ತು!

ದ್ರೋಣ–(ತೆಕ್ಕನೆ ಮುಂಬರಿದು ಏಕಲವ್ಯನನ್ನು ಆಲಿಂಗಿಸಿ)
ಪುಣ್ಯವಂತನ್ ನೀನ್, ಏಕಲವ್ಯ!
ಬರ್ದುಕಿದಯ್,
ನೀನ್ ಬರ್ದುಕಿ ನನ್ನನುಂ ಬರ್ದುಕಿಸಿದಯ್!–
ನಿನಗಲ್ತಿದು ಪರೀಕ್ಷೆ, ನನಗುಂ ಕಣಾ!
ವತ್ಸ, ನೀನೆಂತರಿವಯ್
ನನಗಾಗುತಿರ್ಪಾ ಪರೀಕ್ಷೆಯಂ?
ನಿನಗೆಂತುಸಿರ್ವೆನ್ ಅದನ್? (ಪಿಡುಸುಯ್ಯುತ್ತಾನೆ.)

ಏಕಲವ್ಯ–ಗುರುವಿಗಿನ್ನಾವುದೊ ಪರೀಕ್ಷೆ? ಶಿಷ್ಯಾಭ್ಯುದಯಮಲ್ತೆ?

ದ್ರೋಣ–ಶಿಷ್ಯರಿರ್ವರ್ ತಮ್ಮತಮ್ಮೊಳ್ ಪುರುಡಿಸಲ್?

ಒರ್ವನೇಳ್ಗೆಗೆ ಮತ್ತದೊರ್ವನ್ ಕರುಬಲ್?

ಏಕಲವ್ಯ – ಚಿಃ ಕರುಬೆ ಕಿಳ್ತನಂ! ಅದರೊಳುಂ
ಗುರುವದೊರ್ವಂಗಿರ್ವರುಂ ಶಿಷ್ಯರೆನೆ
ಅವರ್ ಸೋದರರ್.
ಸೋದರನ್ ಸೋದರನ ಏಳ್ಗೆಗೆ ನಲಿಯವೇಳ್ಕುಂ.-
ಅವನೇಳ್ಗೆ ಇವನೇಳ್ಗೆಯಲ್ತೆ?
ಅವನ ಬಲಮಿವನ ಬಲಮಲ್ತೆ?
ಅವನ ಉನ್ನತಿ ತನಗುಮುನ್ನತಿಯಲ್ತೆ?

ದ್ರೋಣ– ಅಂತಪ್ಪ ಶಿಷ್ಯನಂ ಪಡೆದ ಗುರು ಸುಕೃತಿ ದಲ್!
ಆ ಸುಕೃತಮೆನ್ನದಲ್ತು!

(ಸುಯ್ದು ಅಂತಸ್ಸಂಕಟವನ್ನು ಪ್ರಕಟಿಸುತ್ತಾನೆ.)

ಏಕಲವ್ಯ– ಆಚಾರ್ಯನಿಂತಪ್ಪ ಸಂಕಟಕೆ
ನಾನಾಗದಿರ್ಕೆ ಕಾರಣಂ.

ದ್ರೋಣ– (ಅಧೋವದನನಾಗಿ)
ನೀನಲ್ತು; ನಿನ್ನಿಂದಮಾ ಕಾರಣಂ!

ಏಕಲವ್ಯ– ಆಚಾರ್ಯ, ನಿನ್ನ ಕೃಪೆ:
ನನ್ನ ಹೃದಯದೊಳಿನಿತ್ತಾದೊಡಂ ತಾವಿರದು
ಅಂತಪ್ಪ ಕರುಬೆಂಬ ಪೇಸಿಂಗೆ.

ದ್ರೋಣ- ಬಲ್ಲೆನ್, ವತ್ಸ; ಅದಕ್ಕಾಗಿಯೆ ಈ ಸಂಕಟಂ.

ಏಕಲವ್ಯ- ಅದಕೆ ಪರಿಹಾರಮೆನ್ನಧೀನಮಿರ್ಪೊಡೆ
ಸಮರ್ಪಿಸುವೆನೆನ್ನ ಸರ್ವಸ್ವಮಂ ನಿನ್ನಡಿಗೆ,
ಗುರುದೇವ. ಮೇಣ್.....

ದ್ರೋಣ– ನಿನ್ನಧೀನವೆಂ ಇರ್ಪುದಾದೊಡಂ.....

(ಮಾತು ಪೂರೈಸದೆ ಸುಮ್ಮನೆ ದೂರಗತ ದೃಷ್ಟಿಯಾಗಿ ನಿಲ್ಲುತ್ತಾನೆ.)

ಏಕಲವ್ಯ– (ದೃಢವಾಣಿಯಿಂದ)
ಸಮರ್ಪಿಸಿದೆನೆನ್ನ ಸರ್ವಸ್ವಮಂ ನಿನ್ನಡಿಗೆ.
ಆವುದಾದೊಡಮದನ್ ಬೆಸಸು ನೀನ್, ಆಚಾರ್ಯ.

ದ್ರೋಣ– (ಮುನಿದು ಏಕಲವ್ಯನನ್ನು ನೋಡಿ)
ಕಟುಕನಂ ಬೆಂಬಳಿವಿಡಿದು ಪೋಪ ಕುರಿಯಂತೆ
ನಡೆಯದಿರ್, ಏಕಲವ್ಯ.

ಏಕಲವ್ಯ–(ನಗುತ್ತ) ನೀನ್ ಕಟುಕನುಮಲ್ತು, ನಾನ್ ಕುರಿಯುಮಲ್ತು,
ಆಚಾರ್ಯ.

ದ್ರೋಣ–(ತನ್ನ ಮೇಲೆ ತಾ ಮುನಿದು)
ನೀನ್ ಕುರಿಯಹುದೊ ಅಲ್ತೊ?
ನಾನಂತುಂ ಕಟುಕನ್ ದಿಟಂ!
ನಂಬಿದವನಂ ಕೊರಲ್ ಕೊರೆವ ಕಜ್ಜಮಂ
ಕೈಕೊಂಡು ಬಂದೆನ್.

ಏಕಲವ್ಯ–ಆ ಹೊಣೆ ಅದೇನಿರ್ಪೊಡಂ ನಿನ್ನದಾರ್ಯ.
ನೀನೀವ ಪೊರೆಯಂ ಪೊರುವುದೆನಗೆ ಕಾರ್ಯ!

ದ್ರೋಣ–ನೀನಂದು ಆ ಪಾಂಡುಪುತ್ರಂಗೆ
ಶಬ್ದವೇಧೀ ವಿದ್ಯೆಯಂ ಮೆರೆದು
ಸಿಲ್ಕಿಸಿದೆ ನನ್ನನೀ ಧರ್ಮಸಂಕಟಕೆ.

ಏಕಲವ್ಯ–ಕರುಬಿದನೆ ನನಗೆ ಆ ಕ್ಷತ್ರಿಯೋತ್ತಮನ್?

ದ್ರೋಣ–ನಾನವಂಗೊಂದು ಸಮಯದೊಳಿತ್ತ ವಚನಂ
ಭಂಗವಡೆದತ್ತು ನಿನ್ನತ್ತಣಿಂ!

ಏಕಲವ್ಯ–(ಬೆಚ್ಚಿ) ನಾನರಿಯೆನಂತಪ್ಪ ಪಾಪಮಂ.

ದ್ರೋಣ–ನೀನರಿಯೆಯಾದೊಡಂ ನನಗಾಯ್ತು ವಚನಭಂಗಂ.

ಏಕಲವ್ಯ–ವಚನಮೇನ್? ಭಂಗಮೇನ್? ಬೆಸಸು ಪರಿಹಾರಮನ್,
ಪರಿಹಾರಮಿರ್ಪೊಡೆ; ಅದಿಲ್ಲದಿರೆ ಪ್ರಾಯಶ್ಚಿತ್ತಮನ್!

ದ್ರೋಣ-ಲೋಕತ್ರಯಂಗಳೊಳ್ ನಿನಗೆ ಸಮನಿಲ್ಲದೊಲ್
ನಿನಗಾಂ ಧನುರ್ವಿದ್ಯೆಯಂ ಕಲಿಪೆನೆಂಬುದು
ಅರ್ಜುನಂಗಾನಿತ್ತ ವಚನಂ.
ನಾನೆ ಗುರುವೆಂದೆನಗೆ ಶಿಷ್ಯತ್ವಮಂ ನೀನೊಪ್ಪಿ,
ಅರ್ಜುನಂ ಕರುಬುವೊಲ್ ಬಿಲ್‌ಬಿಜ್ಜೆಯಂ ಮೆರೆದ
ನಿನ್ನಿಂದೆ ಸಂಭವಿಸಿದತ್ತಾ ವಚನಭಂಗಂ.
ನಾನಿತ್ತ ವಚನಕ್ಕೆ ಭಂಗಮೈತರದಂತೆ, ಮೇಣ್
ಅರ್ಜುನನ ಅದ್ವಿತೀಯತೆ ಲೋಕತ್ರಯಕೆ ನಿಲ್ವಂತೆ
ನೀನಿನಿತು ಶಕ್ತಿಯಂ ತ್ಯಾಗಮಾಳ್ಪುದೆ ಅದಕ್ಕೆ
ತಗುವ ಪರಿಹಾರಮ್. ಗುರುದಕ್ಷಿಣೆಯೆ ಗೆತ್ತದಂ

ನಾಂ ಕೇಳ್ವುದಂ ಕುಡುವುದೆಯೆ ಪ್ರಾಯಶ್ಚಿತ್ತಮ್!-
ಬಾಯಿ ತೆರೆದಾಡುವೀ ಕ್ಲೇಶಮಂ ತಪ್ಪಿಸಲ್
ಪರಿಕಿಸುವ ನೆವದಿಂದೆ ನಾಂ ಬೆಸಸಿದೆನ್ ನಿನಗೆ,
ಇಸಲ್ಕಾ ವಿಯದ್‌ವಿಹಾರಿಯಂ ಪಕ್ಷಿಯಂ!
ನೀನೆಲ್ಲಿಯಾದೊಡಂ ಒಪ್ಪಿ, ಎಳ್ಚರ್ ಮರೆದು,
ಬಿಜ್ಜೆಯಂ ಮೆರೆವ ಪೆರ್ಮೆಗೆ ಧರ್ಮಮಂ ತೊರೆದು
ತಪ್ಪಿ ನಡೆದಿರ್ದೆಯಾದೊಡೆ ಸುಲಭದಿಂದೆನಗೆ
ಲಭಿಸುತಿರ್ದತ್ತು ನನ್ನಾಶೆ. ಆ ಕೈತವಕೆ
ಪೊರಗುಳಿದು ನೀನೆನ್ನನುಂ ಕಿತವತ್ವದಿಂ
ಪಾರುಗಾಣಿಸಿ ಪೊರೆದೆ.

ಏಕಲವ್ಯ – ಮುಂತೆನಗೆ ಬಟ್ಟೆಯೇನ್?
ಬೆಸಸು, ಆಚಾರ್ಯ. ಇತ್ತ ಗುರುವಿಂಗೀವುದೇನ್
ತ್ಯಾಗಮೆ? ಪರಮ ಸಂಪದಮದುವೆ ಪುರುಷಾರ್ಥ
ಸಾಧನಂ! ನಿನ್ನಿಂದೆ ಕಲ್ತೆನಧ್ಯಾತ್ಮಮಂ.
ಪಡೆವುದೆಲ್ಲಂ ಕೊಡುವುದಕ್ಕಲ್ತೆ, ಆರ್ಯ? ಮೇಣ್,
ಪೂರ್ಣಮಂ ಕೊಡದೆ ಪಡೆದಪೆವೆಂತು ಪೂರ್ಣಮಂ?
ಬೇಳ್ವೆಯೇನ್ ವೇಳ್ಕುಮಾ ದಕ್ಷಿಣೆಯನೊರೆ, ತೊರೆದು
ದಾಕ್ಷಿಣ್ಯಮಂ.

ದ್ರೋಣ– ನಾಣ್ಚುತಿಹುದಾಡಲಾ ಅಲ್ಪಮಂ
ಈ ಜಿಹ್ವೆ.

ಏಕಲವ್ಯ– ನನ್ನ ಗುರುವಿನ ಜಿಹ್ವೆಯಾಡಿದುದೆ
ಗುರುವಕ್ಕುಂ; ಆಗದಲ್ಪಂ ಅದೆಂದಿಗುಂ.

ದ್ರೋಣ– ಅದು ದಿಟಮೆ. ಅಲ್ಪಮಲ್ತಾನ್ ಕೇಳ್ವ ದಕ್ಷಿಣೆ.

ಏಕಲವ್ಯ– ಏಕಲವ್ಯನ ಕೊಡುವ ಕಾಣ್ಕೆಗಲ್ಪತ್ವಮೊದಗದಿರ್ಕೆ.

ದ್ರೋಣ– ನಾನ್ ಕೇಳ್ವ ದಕ್ಷಿಣೆ ಮಿಗಿಲ್ ನಿನಗೆ ಹರಣಕಿಂ.

ಏಕಲವ್ಯ– ಧರ್ಮಮೊ? ಸತ್ಯಮೊ? ಪೌರುಷಮೊ?
ಪ್ರಾಣಕಿಂ ಮಿಗಿಲಾವುದಿನ್!

ದ್ರೋಣ– (ತುಸು ತಡೆದು) ಬೆರಳ್! ಪೆರ್‌ಬೆರಳ್!

ಏಕಲವ್ಯ– (ಚಕಿತನಾಗಿ) ಆ್ಞ?

ದ್ರೋಣ—(ಒತ್ತಿ ಹೇಳುತ್ತಾನೆ) ದಕ್ಷಿಣೆಗೆ ದಕ್ಷಿಣದ ಪೆರ್ ಬೆರಳ್!-
ನಿನ್ನ ಬಿಲ್ ಬಿಜ್ಜೆಗುಸಿರಪ್ಪ ಆ ಪೆರ್ ಬೆರಳ್!
ಬಾಣಮುಂ ಪಿಡಿದು ಸಿಂಜಿನಿಗುಯ್ವ ಪೆರ್ ಬೆರಳ್!-
ಕೆಮ್ಮನಿರ್ದಪೆ ಏಕೆ? ದುಮ್ಮಾನಮೋ, ವತ್ಸ?
ಏಕಲವ್ಯ—(ತಲೆಯಲ್ಲಾಡಿ) ದುಮ್ಮಾನಮಲ್ತು, ಆಚಾರ್ಯ,
ಪೋದಿರುಳ್ ಕಂಡ ಕನಸೊಂದಂ ನೆನೆಯುತಿರ್ದೆ.
ಕೇಳ್, ಆರ್ಯ: ಸರ್ವಮುಂ ನಿನಗಾಂ ಸಮರ್ಪಿಸಲ್
ಮನದಂದೆನೀ ಬೆರಳ್ ಅದೇನ್ ಪಿರಿದಲ್ತು,
ಪೆರ್‌ಬೆರಳ್ ತಾನಾದೊಡಂ!— (ನಸುನಗುತ್ತಾನೆ)
ಅರ್ಜುನಂ
ತೃಪ್ತನಪ್ಪನೆ, ಆರ್ಯ, ನನ್ನ ಬೆರಳೊಂದರಿಂ?—
ಪೋದಿರುಳ್ ಕಂಡೆ ಕನಸಿನೊಳೊರ್ವ ನೀಲಾಂಗನಂ.
ಹೆಡೆಯೆತ್ತಿದೆರಡು ಸರ್ಪಗಳವನ ತೋಳುಗಳ್!
ಕೇಳ್ದನಾತನ್ ತನಗೆ ಕೊರಳೆ ಬಲಿವೇಳ್ಕೆಂದು.
ಕೊಳ್ಳೆಂದೆ ನಾನ್! ಕೊರಳನೆಯೆ ಬಲಿಯಿತ್ತವನ್
ಬೆರಳೊಂದನೀಯಲಂಜುವನೆ? ತೃಣಕೆಣೆಯಲ್ತೆ?
ದ್ರೋಣ—ಕೊಟ್ಟ ಮಾತದು ಸಲ್ವುದೆನ್ನಾಸೆ;
ಒಲಿದ ನಿನ್ನಂ ಕೊರಳ್ ಕುಯ್ವುದಲ್ತು!—(ಚಿಂತಿಸಿ)
ಜೀವಿಗಳ ಕರ್ಮ ಜಟಿಲತೆ, ಏಕಲವ್ಯ, ಈ
ಕುಟಿಲ ಕಾರ್ಯಂಗಳಿಗೆ ನಮ್ಮನ್ ನಿಯೋಜಿಪುದು
ದೇವನಿಚ್ಛೆಯ ದಿವ್ಯಲೀಲಾ ಪ್ರಯೋಜನಕೆ.—
ಪೋದಿರುಳ್ ನೀನ್ ಕಂಡುದೇನ್ ಆ ಕನಸು? ಪೇಳ್.
ಏಕಲವ್ಯ—ನಿದ್ದೆಯೊಳಲೆಯುತಿರ್ದೆ ಕನಸಿನೊರ್ ಕಾಡಿನೊಳ್.
ಕೇಳ್ದುದೊಂದೇಣನ ಕೊರಲ್. ಓಡಿದೆನ್, ಕಂಡೆನ್,
ಆಕ್ರಮಿಸಲಿರ್ದ ಪುಲಿಯಂ. ಕಿಳ್ತ ಕತ್ತಿಯಂ
ಪಿಡಿದು ಮೇಲ್ವಾಯ್ದೆನ್. ಬಣ್ಣದ ಬುಗ್ಗೆ ನೆಗೆವೋಲ್
ಕುಪ್ಪಳಿಸಿ ಬಂದಪ್ಪಿತಾ ಬಗ್ಗನೆನ್ನಂ. ಪೊಡೆಗೆ
ಗುರಿಯಿಟ್ಟಿರಿದೆನದರ ನೆತ್ತರ್ ಬುಗ್ಗೆ ಚಿಮ್ಮುವೋಲ್.
ಒಡನೆ, ಪುಲಿ ಮರೆಯಾದುದವರ ಮೆಯ್ಯಿಂ ಮೂಡಿ

ನಿಂದನೊರ್ವನ್ ನೀಲದೇಹಿ. ಕುಣಿದುದು ನವಿಲ್
ತಲೆಯ ಮೇಲೆ. ಹೆಡೆಯೆತ್ತಿದುರಗಗಳ್ ತೋಳ್ಗಳೊಲ್
ತೂಗಿದುವು, ಭುಜದೇಶದಿಂ ಪೊಣ್ಮಿ. ಕಂಡೊಡನೆ
ವೈರಂ ಮಾಣ್ದುದೆನಗೆ; ಸಂಚರಿಸಿತಾತ್ಮದೊಳ್
ಪೂಜ್ಯಭಾವಂ. ನಲಿದು ಕೈಮುಗಿದು ಕೇಳಿದೆನ್:
''ನೀನಾರ್, ಮಹಾತ್ಮಾ?'' ''ನಾ ನಿನ್ನ ಪರಮಾತ್ಮ!''
ಎಂದು ನಕ್ಕನ್, ''ನಿನ್ನ ಕೊರಳನಪ್ಪಲ್ಕೆಂದು
ಮೈದೋರ್ದನೀ ಫಣೆಗಳೆನ್ನ ತೋಳ್!'' ಹೆದರಿಕೆಗೆ
ಬದಲೆನಗೆ ಮೋಹಮುಕ್ಕಿದುದವನ ಮೇಲೆ. ''ಕೊಳ್,
ಕೊಳ್ ಎನ್ನ ಸರ್ವಸ್ವಮಂ!'' ಎನುತೆ ಅವನೆರ್ದೆಗೆ
ನುಗ್ಗಿರ್ದೆನ್. ಬಿಗಿದಪ್ಪಿ ಸುತ್ತಿದುವು ನನ್ನ ಕೊರಳಂ
ಆ ಸರ್ಪಬಾಹುದ್ವಯಂ. ಹರ್ಷ ಪುಲಕಿತನ್,
ಆನಂದ ಚಕಿತನೆನ್, ಮೈತಿಳಿದೆನಾ ಸ್ವಪ್ನದಿಂ!

ದ್ರೋಣ–(ನಿಡುಸುಯ್ದು)
ನಿನ್ನ ಕನಸಂ ಕೇಳ್ದೆನಗೆ ನವಿರ್ ನಿಮಿರುತಿದೆ!
ದೇವಕಾರ್ಯಕ್ಕೆ ನೀನ್ ಅರ್ಪಿತಾತ್ಮನ್, ವತ್ಸ.
ಭಗವದರ್ಪಿತಮಾಗೆ, ಸಾವುದುಂ ಬರ್ದುಕುವೊಲ್
ಶ್ರೇಯಸ್ಕರಂ.

ಏಕಲವ್ಯ–(ಧ್ಯಾನದಿಂದೆಚ್ಚತ್ತವನಂತೆ)
ಕಲಿಕರದ ಕಾರ್ಮುಕದ ಹೆದೆಯೇರಿ
ಸಮರದೊಳ್ ಕಾದುವಾ ಕರ್ಮಮಯ ಕೈದುವೊಲೆ,
ಬತ್ತಳಿಕೆಯಂ ಸೇರಿ, ಬೆನ್ನೇರಿ, ತಾಳ್ಮೆಯಿಂ
ತನ್ನ ಸೂಳಂ ಕಾಯ್ವ ಕೈದುವ ಅಕರ್ಮಮುಂ
ಸಾರ್ಥಕಂ, ಮೇಣ್, ಕೃತಕೃತ್ಯಮಕ್ಕುಂ.
ಮೊದಲೆ ಹೆದೆಯೇರುವೊಂದು ತವಕಮಾ ಅರ್ಜುನಗೆ!
ಕಲಿಯ ಕಯ್ ತುಡುಕಿದಂದೇರ್ವೆನಾನ್ ಸಿಂಜಿನಿಗೆ.
ಕಾಯ್ವುದುಂ ಕರ್ಮಮೆಯೆ, ಭಗವನ್ನಿಷಂಗಮಂ
ಸೇರ್ದಬಳಿಕಂ! ಬತ್ತಳಿಕೆಯಂ ಸೇರಿ, ಶಿವನ
ಬೆನ್ನೇರ್ವುದಲ್ತೆ ಮುಖ್ಯಂ! ಬಾ, ಗುರುವೆ;

ಕೊಳ್ ದಕ್ಷಿಣೆಯನ್ ಇದನ್! ಗೆಲ್ಗೆ ಧರ್ಮಂ!
ಗೆಲ್ಗೆ ದೈವೇಚ್ಛೆ! ನಿಮ್ಮ ವಚನಂ ನಿಲ್ಗೆ!
ಮೇಣ್ ಅರ್ಜುನನ ಪೆರ್ ಬಯಕೆಯುಂ ಸಲ್ಗೆ!

(ಬತ್ತಳಿಕೆಯಲ್ಲಿದ್ದ ಒಂದು ಅಗಲಬಾಯಿಯ ಬಾಣವನ್ನು ಸಾವಧಾನವಾಗಿ ಕಿತ್ತು ತೆಗೆದು, ಶಾಂತಗಮನದಿಂದ ದ್ರೋಣನ ಪ್ರತೀಕದ ಬಳಿಗೆ ಸಾರ್ದು ಮೊಳಕಾಲೂರಿ)

ಕೊಳ್, ಗುರುದೇವ, ನಿನಗೆ ದಕ್ಷಿಣೆ,
ದಕ್ಷಿಣದ ಪೆರ್ ಬೆರಳಿದಂ!
ಪರಕೆಗೆಯ್, ಪೊರೆ ನಿನ್ನ ಕಂದನಂ!

(ಬಲಗೈಯ ಹೆಬ್ಬೆರಳನ್ನು ಹಾಸುಬಂಡೆಯ ಮೇಲಿಟ್ಟು, ಎಡಗೈಯ ಬಾಣದಿಂದ ಅದನ್ನು ಕತ್ತರಿಸುತ್ತಾನೆ. ನೆತ್ತರು ಚಿಮ್ಮಿ ಮಡು ನಿಲ್ಲುತ್ತದೆ. ಆ ಮಡುವಿನ ನಡುವೆ ತುಂಡಾದ ಹೆಬ್ಬೆರಳನ್ನು ಬಿಟ್ಟು ಮೇಲೇಳುತ್ತಾನೆ. ಕೆನ್ನೀರು ಸೋರುವ ಗಾಯವನ್ನು ಎಡಗೈಯಿಂದ ಮುಚ್ಚಿ ಮರೆಹಿಡಿದು, ವಿಷಣ್ಣನಾಗಿ ಕುಳಿತಿದ್ದ ದ್ರೋಣನ ಕಡೆ ತಿರುಗಿ)

ಮದ್ದಿರ್ಕ್ಕೆ ಬೇಗದಿಂ ಬಂದಪೆನ್, ಆಚಾರ್ಯ.

(ಎಂದು ನಿಷ್ಕ್ರಮಿಸುತ್ತಾನೆ. ಅವನು ಹೋದತ್ತ ಕಡೆಗೆ ಕಣ್ಣೀರು ತುಂಬಿ ಎವೆಯಿಕ್ಕದೆ ನೋಡುತ್ತಿದ್ದು, ಅವನು ಕಣ್ಮರೆಯಾದ ಮೇಲೆ ದ್ರೋಣನು ಪ್ರಯಾಸಪೂರ್ವಕವಾಗಿ ಎದ್ದು ನಿಲ್ಲುತ್ತಾನೆ. ದ್ರೋಣಪ್ರತೀಕದ ಬಳಿಗೆ ಮೆಲ್ಲಗೆ ನಡೆದುಬಂದು ಮಡು ನಿಂತ ನೆತ್ತರನ್ನೂ ಅದರ ನಡುವಿದ್ದ ಬೆರಳ ತುಂಡನ್ನೂ, ಮುಖದಲ್ಲಿ ಸಂಕಟವುಕ್ಕಿ ತೋರುವಂತೆ ನೋಡುತ್ತಾ ನಿಲ್ಲುತ್ತಾನೆ.)

ದ್ರೋಣ– ಕ್ಷತ್ರಿಯ ಕುಮಾರ, ನಿನ್ನಸೂಯಾಗ್ನಿ ತಣಿಯಲಿದೊ
ಬಿಯದ ಬಾಲಕನೀ ಬೆರಳ ಬೇಳ್ವೆ!

(ಎಂದು ಅದನ್ನು ತೆಗೆಯುವಂತೆ ಕುಳಿತು ಬಾಗುತ್ತಾನೆ. ಬಾಗಿ, ಹಾಗೆಯೆ ಮರವಟ್ಟು, ಬೆಚ್ಚಿ ಕೂಗುತ್ತಾನೆ.)

ಅಯ್ಯೊ, ಏಕಲವ್ಯ!
(ಕೂಗಿ ಹಿಂದಕ್ಕೆ ಕುಳಿತು ತನ್ನ ಕೈಮೇಲೊರಗುತ್ತಾನೆ)

ಏಕಲವ್ಯ –(ಕೈಗೆ ಮದ್ದು ಕಟ್ಟಿಕೊಂಡು, ಬೇರಗಾಗಿ ಓಡಿಬರುತ್ತಾನೆ.)
ಏನಾಯ್ತು! ಏನಾಯ್ತು, ಆಚಾರ್ಯ?
ಏಕಿಂತು ಕುಳಿತಿಹಿರಿ, ಮರಮಟ್ಟನೋಲ್?
(ದ್ರೋಣನ ಬಳಿ ತುದಿಗಾಲಿನ ಮೇಲೆ ಕೂರುತ್ತಾನೆ.)

ದ್ರೋಣ-(ಆಯಾಸಗೊಂಡವನಂತೆ ತಲೆಯೆತ್ತಿ ಶಿಷ್ಯನನ್ನು ನೋಡುತ್ತಾ ಕಷ್ಟದಿಂದ ವಿರಳಾಕ್ಷರವಾಗಿ ಮಾತಾಡುತ್ತಾನೆ.)

ಬೆರಳ್ ಗೆ ಕೊರಳ್!
ವತ್ಸಾ, ನಿನ್ನ ಬೆರಳ್ಗೆ ನನ್ನ ಕೊರಳ್!

ಏಕಲವ್ಯ–ಏನಾಯ್ತು, ಆಚಾರ್ಯ, ಏನಾಯ್ತು?

ದ್ರೋಣ–(ಸ್ವಲ್ಪ ಸ್ಥಿರನಾಗಿ, ಎದ್ದು ನಿಂತು, ತನ್ನೊಡನೆ ಎದ್ದುನಿಂತ ಏಕಲವ್ಯನ ಹೆಗ ಮೇಲೆ ಕೈಯೂರಿ, ಮಡುನಿಂತ ನೆತ್ತರನ್ನು ತೋರಿಸುತ್ತಾ)

ವತ್ಸ, ಅದರೊಳೇನ್ ಕಾಣೆಪುದು? ಕಂಡು ಪೇಳ್.

ಏಕಲವ್ಯ–ಮತ್ತೇನ್ ಕಾಣೆಪುದು, ಆಚಾರ್ಯ?
ನೆತ್ತರ್ ಮೇಣ್ ಬೆರಳ್!

ದ್ರೋಣ–ಕಣ್ಣಿಟ್ಟು ಕಾಣ್.

ಏಕಲವ್ಯ–(ಈಕ್ಷಿಸಿ) ಕಾಣುತಿಹುದಂಬರಪ್ರತಿಬಿಂಬಂ, ಮೇಣ್
ತೇಲುತಿಹ ಬೆಳ್‌ಮುಗಿಲ ಮರುನೆಳಲ್.

ದ್ರೋಣ–ನಾನ್ ಕಂಡೆನನ್ಯಮಂ, ವತ್ಸ,
ಬೀಭತ್ಸ ದೃಶ್ಯಮಂ!
ನೀನ್ ಪೋಗಲೆಳ್ದು ಬಂದಾ ನೆತ್ತರೆಡೆ ಕುಳ್ತೆನ್.
ತುಂಡುವೆರಳಂ ತೆಗೆಯಲೆಂದಿನಿತು ಬಾಗಿದೆನ್.
ಕಂಡುದಾ ಕೆನ್ನೀರ ಕನ್ನಡಿಯೊಳೆನ್ನ ಪಡಿನೆಳಲ್.
ಆ ನನ್ನ ಮುಖವಿಕೃತಿಯಂ
ಪ್ರತಿಬಿಂಬದೊಳ್ ಕಂಡು ಬೆರಗಾಗಿರಲ್,
ಖಡ್ಗಮುಷ್ಟಿಯ ಭೀಮ ಹಸ್ತಮೊಂದೊಯ್ಯನೆರಗಿ
ಕಳ್ತರಿಸಿತಾ ನನ್ನ ಪಡಿನೆಳಲ ಕೊರಳಂ!
ಕೆಡೆದುರಳ್ದುದು ಮಂಡೆ!
ಕಂಡೆನ್
ರುಂಡವಿಲ್ಲದಾ ಮುಂಡಮಂ!
ಕಂಡು ನಿನ್ನನ್ ಕೂಗಿಕೊಂಡೆನ್!
ಮುಂದೇನ್ ಕಾದಿಹುದೊ ನನಗೆ?
ಬಿದಿಯರಿಗುಂ, ನಿನ್ನೀ ಬೆರಳ್‌ಗೆ
ಕೊಳ್ವುದೆಂದೇ ತೋರ್ಪುದಾ ಬಿದಿ
ನನ್ನ ಕೊರಳಂ!

ಏಕಲವ್ಯ–ನನ್ನ ಕನಸಂ ಕೇಳ್ದು ನೆನೆಯುತಿರ್ದಾ ನಿಮಗೆ
ಇದು ಬರಿಯ ಕಣ್‌ಭ್ರಾಂತಿ, ಆಚಾರ್ಯ.
ಅದರ್ಕಿನಿತೇಕೆ ಪೇರುಬ್ಬೆಗಂ?

ದ್ರೋಣ– ಭ್ರಾಂತಿ ಕಣ್ಗಾದೊಡಂ, ಕಣ್ಣಲ್ತು ಭ್ರಾಂತಿಮೂಲಂ.
ನಿನ್ನ ಕೆನ್ನೀರ್ ಅಂಜನಮಿಕ್ಕಿದತ್ತಾ ಪಾಸರೆಗೆ:
ಮುಂದಪ್ಪುದಂ ಮುನ್ ಪೊಳೆದು ತೋರ್ದುದಾ ಕಲ್!
ಕಲ್ಲಾದೊಡೇನ್? ತಾನುಂ ವಿಶ್ವಚಿದ್‌ವಿನ್ಯಾಸಮಲ್ತೆ?
ಸರ್ವವಿತ್ ಆ ವಿಶ್ವಚಿತ್:
ಸೂಚಿಸಿತ್ತೆನಗೆ ತನ್ನೊಳಿರ್ಪನಿವಾರ್ಯಮಂ!
ಅಂತೆ ಕರ್ಮದ ಪಾಂಗು: ಮರಿಗೆ ಮರಿ: ಮರಿಗೆ ಮರಿ:
ಬೆರಳ್ ಗೆ ಕೊರಳ್! (ಕೊಂಬು ಕೇಳಿಸುತ್ತದೆ)

ಏಕಲವ್ಯ–(ದೂರ ನೋಡುತ್ತ) ಬೈಗಾಯ್ತು, ಆಚಾರ್ಯ.
ಅಲೆ ಅಲೆ ಅಲೆವ ಮಲೆಗಾಡುಗಳ ಮೇಲೆ
ಬಾನ್‌ಕರೆಯೊಳಿಳಿಯಂತಿರ್ಪನ್ ಅದೊ ದಿನೇಶ್ವರನ್.
ಅಃ ಕೆನ್ನೀರಿನೋಕುಳಿಯ ಚೆಲ್ಲಿದೋಲಿರ್ಕುಮಾ
ಬೈಗುಕಾಂತಿ! ತುಂಬುತಿದೆ ನಿಶ್ಶಬ್ದತಾ ಶಾಂತಿ
ಅಸ್ತಮಯ ಸಮಯದ ಸಮಸ್ತ ಗಿರಿಮಸ್ತಕದ
ವಿಪಿನ ಪ್ರದೇಶಮಂ! – ನೀಂ ನಡೆಯಿಮಲ್ಲಿ
ಕಾದಿರ್ಪ ದಂಡಿಗೆಗೆ. ಅಬ್ಬೆ ಬರ್ಪಾ ಪೊಳ್ತು
ಈ ನೆತ್ತರವಳ ದಿಟ್ಟಿಗೆ ಬೀಳದೋಲ್ ತೊಳೆದು ಬಪ್ಪೆನ್.
(ತುಂಡಾಗಿ ಬಿದ್ದಿದ್ದ ಬೆರಳಿನ ಕಡೆಗೆ ದ್ರೋಣನು ನೋಡುತ್ತಾನೆ)
ತಂದೀವೆನದನುಂ, ಸವ್ಯಸಾಚಿಗೆ ಸಾಕ್ಷಿಯಂ!

ದ್ರೋಣ– ಬೇಡ, ವತ್ಸ, ಬೇಡ.
ಅನಿತ್ತು ಕಿಳ್ದೆಸೆಗೆ ಬಿಳ್ದಿಲ್ಲಮಿನ್ನುಮಾತನ್!
(ಏದುತ್ತಾ ಹೇಳುತ್ತಾನೆ)
ನಿನ್ನಬ್ಬೆ ನೋಡದಿರ್ಕಾ ಬೆರಳ ತುಂಡಂ, ವತ್ಸ:
ನನಗೊದಗದಿರ್ಕೆ ಶೋಕಸಂತಪ್ತ ಮಾತೃಶಾಪಂ!

ಏಕಲವ್ಯ– ಅದನೆತ್ತಿ ಪಳು ಪೆಣೆದ ಕಿಬ್ಬಿಗೆಸೆವೆನ್,
ಪುಳುಗೌತಣಂ!
ನಡೆ ನೀನಾರ್ಯ, ಬೆನ್ನೊಳೆಯೆ ಬಂದಪೆನ್.
ಕಜ್ಜಮಂ ಪೂರ್ಯಸಿ ಬೇಗದಿಂ ಬಂದಪೆನ್.

(ದ್ರೋಣನು ಹೊರಡುತ್ತಾನೆ. ಏಕಲವ್ಯನು ದೃಶ್ಯದ ಅಂಚಿನವರೆಗೂ ಅವನನ್ನು ಕಳುಹಿ ಹಿಂತಿರುಗುತ್ತಾನೆ. ಬೆರಳ ನೋವಿಗೆ ಅವನ ಮುಖ ಸ್ವಲ್ಪ ಮುದುರುತ್ತದೆ.)

ಮನಮಳ್ಕಲಿಲ್ಲಾದೊಡಂ ಮೆಯ್ಯಳ್ಕುತಿರ್ಪುದೀ
ಪಸಿಗಾಯದುರಿಗೆ. ಮೆಯ್ ನೊಂದೊಡಂ
ಆತ್ಮವಾವುದೊ ತೃಪ್ತಿಯಂ ಸವಿದು ಸುಖಿಸುತಿದೆ:
ಗುರು ಅಪೇಕ್ಷಿಸಿದ ದಕ್ಷಿಣೆಯನಿತ್ತು
ತಣಿಯಿಸಿದೆನೆಂಬುದೊ?
ಧರ್ಮ ಸಂಕಟಕೆ ಸಿಲ್ಕಿರ್ದನಂ
ತಪ್ಪಿಸಿದೆನೆಂಬೊಂದು ತ್ಯಾಗಸಾಹಸ ಗೆಯ್ದ
ವೀರ ಸುಖಮೊ?
ದಿವ್ಯಲೀಲಾರ್ಥಮೆನ್ನನಾನ್
ಯಜ್ಞಗೆಯ್ಯಲ್ಕೆ ಮನಂದಂದೆನೆಂಬಾ
ಸಮರ್ಪಣಕೆ ಸಂಭವಿಸಿದೊಂದು ಭಗವದಾನಂದಮೊ?
ಆತ್ಮವಾವುದೊ ತೃಪ್ತಿಯಂ ಸವಿದು ಸುಖಿಸುತಿದೆ?

(ಸೂರ್ಯಾಸ್ತವನ್ನು ಅನಿಮೇಷನಾಗಿ ದೃಷ್ಟಿಸುತ್ತಾ)

ಅಃ ಈ ಅಸ್ತಮೇನ್ ಸುಂದರಂ!
ದಿಗ್ವನಿತೆ ಬೊಟ್ಟಿಟ್ಟವೊಲ್
ದಿಕ್ತಟದ ರೇಖೆಯಂ ಮೆಟ್ಟಿನಿಂದು
ರಂಜಿಸುತ್ತಿರ್ಪುದೀ ಬೈಗು ನೇಸರ್!

(ಮೈಮರೆತು ನೋಡುತ್ತಾ ನಿಲ್ಲುತ್ತಾನೆ. ಏಕಲವ್ಯನ ತಾಯಿ ಬೆಂಗಡೆಯಿಂದ ಪ್ರವೇಶಿಸುತ್ತಾ ಮಗನು ಗಮನಿಸದೆ ನಿಂತುದನ್ನು ನೋಡಿ!)

ಅಬ್ಬೆ- ಇದೇನ್, ಬಚ್ಚ ನೀನೊರ್ವನಿರ್ಪಯ್!
ಬಿಲ್ಲೋಜನೆಲ್ಲಿದನ್?

(ಏಕಲವ್ಯ ತೆಕ್ಕನೆ ಎಚ್ಚತ್ತವನಂತೆ ತಿರುಗಿನೋಡಿ ಬೆಚ್ಚುತ್ತಾನೆ. ತನ್ನ ಬಲಗೈಯನ್ನು ಪಕ ಮುಚ್ಚಿಕೊಂಡು ತಾಯಿಯ ಕಡೆಗೊಮ್ಮೆ ನೆತ್ತರು ಮಡುನಿಂತ ಕಡೆಗೊವ ಬೆದರ್‌ದಿಟ್ಟಿಯಟ್ಟುತ್ತಾನೆ.)

ಏಕಲವ್ಯ-(ತನ್ನಲ್ಲಿಯೆ)

ಅಯ್ಯೊ, ಬಂದೆ ಬಿಟ್ಟಳೆ, ಅಬ್ಬೆ! ಏನ್ ಗತಿ?
ಏನಾನುಮೊಂದನ್ ಹರುವನೊಡ್ಡಿ
ಅವಳ್ ನೆತ್ತರ್ ನಿಂದುದನ್ ಕಣ್ಬಮುನ್ನಮೆ
ಉಪಾಯದಿಂ ಪಿಂತಿರುಗಿಸಲ್ ವೇಳ್ಕುಂ. (ತಾಯಿಗೆ)
ಅಬ್ಬೆ, ನೀನೇತಕಿಲ್ಲಿಗೈತಂದೆ,
ಈ ಬೈಗು ಮರ್ಬಿನೊಳ್?

(ತಾಯಿಗೆ ನೆತ್ತರ್ ಮಡು ಕಾಣಿಸದಂತೆ ಮೆಲ್ಲಗೆ ಅಡ್ಡಬಂದು ನಿಲ್ಲುತ್ತಾನೆ)

ಅಬ್ಬೆ– ಬೈಗುವೊಳ್ತಿಗೆ ಮತ್ತೆ
ಕರೆತರ್ಪನೆಂದೆ ನೀನ್ ಬಿಲ್ಲೊಜನನ್?
ಪಣ್ಣುಣಿಸನಣಿಮಾಡಿ ಕಾದು ಸೋತೆನ್.
ಕಪ್ಪಾಗುವಾ ಮುನ್ನ ಕರೆದುಯ್ಯಲೈತಂದೆನ್.

ಏಕಲವ್ಯ– ಪೊಳ್ತಳಿವ ಮೊದಲೆ ತಾನಿಳಿವುದೊಳಿತೆಂದು
ಮಲೆಯ ಬುಡದಾ ಬೀಡಿಗಾಗಳೆಯ
ಬೀಳ್ಕೊಂಡನೋಜನ್.

ಅಬ್ಬೆ– ಮರೆತೆಯೇನ್ ಮರ್ಯಾದೆಯನ್
ಒಡವೋಗಿ ಕಳುಹಿ ಬರ್ಪುದನ್?

ಏಕಲವ್ಯ– (ಅವಸರವಾಗಿ) ಈಗಳೆಯೆ ಪೋದಪೆನ್.
ಬೆನ್ನೊಳೆಯೆ ಬರ್ಪೆನೆಂದಾಡಿದೆನ್.
(ತೆಕ್ಕನೆ ತಿರುಗಿ ನೋಡಿ ಮತ್ತೆ ಬೆದರುಗಣ್ಣಾಗುತ್ತಾನೆ.)

ಅಬ್ಬೆ– ಇದೇನ್, ಬಚ್ಚ? ತೊದಲು ನುಡಿ! ಬೆದರುಗಣ್!
(ಅವನುಡೆಯ ಮೇಲಿದ್ದ ರಕ್ತದ ಕಲೆಯನ್ನು ನೋಡುತ್ತಾಳೆ.)

ಏಕಲವ್ಯ– (ಉದಾಸೀನ ಧ್ವನಿಯನ್ನು ನಟಿಸುತ್ತಾ)
ಏನಿಲ್ಲ, ಅಬ್ಬೆ, ನೀನ್ ಬೀಡಿಂಗೆ ನಡೆ. ನಾನ್
ಓಜನನ್ ಬೀಳ್ಕೊಂಡು ಬೇಗಮೈತಂದಪೆನ್.

ಅಬ್ಬೆ-(ಕೈದೋರಿ) ಇದೇನ್, ಬಚ್ಚ, ಈ ನೆತ್ತರ್ ಮಚ್ಚೆ?

ಏಕಲವ್ಯ-ಓಜನ್ ಪರಿಕಿಸಿದನೆನ್ನ ಬಿಲ್‌ಬಿಜ್ಜೆಯನ್:
ಸನಿಹದೊಳ್ ಎಚ್ಚೆನ್ ಒರ್ ಪಂದಿಯನ್.
ಅದರ ನೆತ್ತರ್, ಅಬ್ಬೆ, ಮತ್ತೇನುಮಲ್ತು!

ಅಬ್ಬೆ– (ಆ ಕಡೆ ತೋರಿ) ಅದೇನಯ್ ಆ ಕೆನ್ನೀರ್!

ಏಕಲವ್ಯ– (ನಗುವನ್ನು ನಟಿಸುತ್ತಾ)
ನಿನ್ನ ಮಗನೊಸಗೆಯೋಕುಳಿ!
(ಅಲ್ಲಿಗೆ ಹೋಗಲೆಳಸಿದವಳನ್ನು ತಡೆದು)
ಜಿನದಕಾಡಿದೆನಬ್ಬೆ, ನಿನಗೇಂ ಮರುಳೆ?
ಪೂಜೆಗೆಂದೆರೆದ ತೀರ್ಥೋದಕಂ
ಪಾಸರೆಯ ನಿಮ್ನದೊಳ್ ಮಡುಗಟ್ಟಿ ನಿಂದು
ಮಾರ್ಪೊಳೆಯುತಿರ್ಪುದಾ ಬೈಗುಗೆಂಪಂ.

ಅಃ ದಿಟಮಬ್ಬೆ, ಕೆನ್ನೀರವೊಲೆ ಮಿರುಗುತಿದೆ!
ಮುದುಗಣ್ಗಳ್ಗೆ ಎಂತಪ್ಪರುಂ ಭ್ರಾಂತರಪ್ಪನ್!

(ಅಬ್ಬೆ ಏಕಲವ್ಯನನ್ನು ಒತ್ತರಿಸಿ, ಮುಂಬರಿದು, ನೆತ್ತರ್ ನಿಂತ ಕಡೆಗೆ ಹೋಗುತ್ತಾಳೆ. ನೋಡುತ್ತಾ ನಿಲ್ಲುತ್ತಾಳೆ. ಏಕಲವ್ಯ ನಿಂತಲ್ಲಿಂದ ಚಲಿಸದೆ ಪೆಚ್ಚಾಗಿ ಕೂಗಿ ಹೇಳುತ್ತಾನೆ.)

ದೇವತೆಗೆ ಬಲಿಯಿತ್ತ ಮಿಗದ ನೆತ್ತರ್ ಅಬ್ಬೆ!
ನೀರೆಂದು ಬಿನದಕ್ಕೆ ಪುಸಿವೇಳ್ದೆನೈಸೆ?
ಬಾ, ಪೋಗುವಂ; ಪೊಳ್ತಳಿದುದು ಕಾಣ್.

ಅಬ್ಬೆ–(ಬಗ್ಗಿನೋಡಿ ಉದ್ವೇಗದಿಂದ)
ಇದೇನ್, ಬಚ್ಚು ಕಡಿವೆರಳ್!
ಆರದಿದು? (ಅಳುದನಿಯಿಂದ) ನಿನ್ನದೇನ್? ಅಯ್ಯೋ!

ಏಕಲವ್ಯ–(ಓಡಿ ಬಂದು ತಾಯನ್ನು ಹಿಡಿದುಕೊಂಡು)
ಅಬ್ಬೆ, ಅಬ್ಬೆ, ಉಬ್ಬೆಗಂಗೊಳ್ಳದಿರ್!
ಹೆಬ್ಬೆರಳ್, ದಿಟಂ! ಬೆದರದಿರ್!
ನನ್ನದೆಯೆ! ಮತ್ತಾರದಲ್ತು!

ಅಬ್ಬೆ–(ಶೋಕಾಧಿಕ್ಯದ ಕೋಪದಿಂದ ಶಾಪರೌದ್ರಳಾಗಿ)
ಆರ್ಗೆ ಬಲಿ ನನ್ನ ಕಂದನ ಬೆರಳ್
ಬಲಿಯಕ್ಕೆ ಆ ಪಾಪಿಯ ಕೊರಳ್!

ಏಕಲವ್ಯ–(ಕೂಗುತ್ತಾನೆ) ಬೇಡವೇಡ! ನಿಲ್! ನಿಲ್ ನಿಲ್!

ಅಬ್ಬೆ–ಬೇಯುತಿಹುದಯ್ಯೋ ಹೆತ್ತೆನ್ನ ಕರುಳ್!

ಏಕಲವ್ಯ-(ತನ್ನೊಳಗೆ)
ಆಗಬಾರದುದಾಯ್ತೆ?
ಅಯ್ಯೊ, ನನ್ನ ತ್ಯಾಗಂ ವ್ಯರ್ಥಮಾಯ್ತೆ?
(ತಾಯಿಗೆ)
ಬಲಿಯಿತ್ತುದಲ್ತು, ಅಬ್ಬೆ.
ಪರೀಕ್ಷಾ ಸಮಯದೊಳ್ ಸರಳ್
ಆಕಸ್ಮಿಕಂ ತಗುಳೆ
ತುಂಡಾದುದೀ ಬೆರಳ್!

ಅಬ್ಬೆ–ನುಡಿಸಿತೆನ್ನಂ, ಬಚ್ಚ,
ವಾತ್ಸಲ್ಯಮುರಿಸಿದಾ ಮಾತೃಕೋಪಂ.

ಏಕಲವ್ಯ–ದುಡುಕಿದವ್, ಅಬ್ಬೆ,
ನನ್ನಸುಂ ಕೊಳ್ಳದೆಯೆ ಬಿಡದು ನಿನ್ನೀ ಶಾಪಂ! (ಸಾಯುತ್ತಾನೆ)

— ಕತ್ತಲೆಯು ಕರ್ಗಳಿಯುತಿರ್ಪುದು.
ತಳುವಿದೊಡೆ ಬಟ್ಟೆಗಾಣದು ನಿನಗೆ.
ನಿಮಿತ್ತ ಶಾಪಕೆ ಗುರುಕ್ಷಮೆಯುಂ ಬೇಡಿ,....
ಬೇಡಿ, ಕಾಲ್ವಿಡಿದು ಬರ್ಪೆನ್.
ತೆರಳ್ ಬೇಡಿಂಗೆ, ಅಬ್ಬೆ.
ನೋಯದಿರ್-ಮುನಿಯದಿರ್; ಕಾಲ್‌ಮುಟ್ಟಿ ಬೇಡುವೆನ್!

(ಎರಡೂ ಕಾಲು ಮುಟ್ಟುತ್ತಾನೆ. ಅಬ್ಬೆ ಮೌನವಾಗಿ ತುಸುಹೊತ್ತು ದಿಟ್ಟಿಸಿ, ಸುಯ್ದು ತಲೆಯಾಡಿಸುತ್ತಾ ಹೊರಡುತ್ತಾಳೆ. ಏಕಲವ್ಯನು ಎದ್ದು ನಿಂತು, ದೃಷ್ಟಿಬಾಣಗಳಿಂದಲೆ ಹಾದಿಯನ್ನು ಹಿಡಿದು ನಡೆಯಿಸುತ್ತಾನೆ ಎಂಬಂತೆ, ಅವಳು ಹೋಗುವುದನ್ನೆ ನೋಡುತ್ತಾ ನಿಲ್ಲುತ್ತಾನೆ. ಮಬ್ಬಿನಲ್ಲಿ ಕಣ್ಮರೆಯಾದ ಮೇಲೆ, ದ್ರೋಣಪ್ರತೀಕದ ಕಡೆ ತಿರುಗಿ ನಿಲ್ಲುತ್ತಾನೆ. ಕತ್ತಲೆ ಕವಿದು ದೃಶ್ಯ ಅತೀವ ಅಸ್ಪಷ್ಟವಾಗುತ್ತದೆ. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತವೆ. ಪಡುವಣ ಬಾನೆಡೆ 'ಬೆಳ್ಳಿ' ತಳಿಸುತ್ತದೆ. ನಿರ್ಜನವಾಗಿ ಜಲಪಾತ ವಿನಾ ನಿಶ್ಶಬ್ದವಾಗಿ ನಿಶ್ಚಲವಾಗುತ್ತದೆ. ಕಂಡರೂ ಕಾಣನದೆಂಬಂತೆ ಏಕಲವ್ಯನ ಆಕೃತಿ ಗೋಚರವಾಗುತ್ತಿರುತ್ತದೆ. ಬಂಡೆಯ ಮೇಲೆ ಬಿದ್ದಿದ್ದ ಬೆರಳ ತುಂಡನ್ನು ತೆಗೆದು ಕಿಬ್ಬಿಗೆಸೆಯುತ್ತಾನೆ. ಜಲಪಾತದ ನೀರನ್ನು ಸುರಿಸಿ ನೆತ್ತರನ್ನು ತೊಳೆಯುತ್ತಾನೆ. ದ್ರೋಣಪ್ರತೀಕಕ್ಕೆ ಉದ್ದಂಡ ನಮಸ್ಕಾರ ಮಾಡಿ, ಪದ್ಮಾಸನ ಹಾಕಿ ಕುಳಿತುಕೊಳ್ಳುತ್ತಾನೆ. ಕತ್ತಲೆ ದಟ್ಟಯಿಸಿ ಕವಿದು ಭೂಮಿಯನ್ನೆಲ್ಲ ಅಳಿಸುತ್ತದೆ. ನೀರ್ ಬೀಳುವ ಮೊರೆ, ಕಿವಿಗೆ; ಕಣ್‌ಮಿಟುಕುವ ಚುಕ್ಕಿ, ಕಣ್ಗೆ; ಏಕಲವ್ಯ ಸಂಪೂರ್ಣವಾಗಿ ಕತ್ತಲೆಯಲ್ಲಿ ಲೀನವಾಗುತ್ತಾನೆ. ಗಿರಿ ವಿಪಿನ ಭೂವ್ಯೋಮಾಕಾಶಗಳನ್ನು ತುಂಬುವಂತೆ ಪ್ರಾರ್ಥನಾ ಗಾನವೊಂದು ಕೇಳಿಬರುತ್ತದೆ.)

ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ!
ಜಟಿಲಕುಟಿಲತಮ ಅಂತರಂಗ ಬಹು
ಭಾವ ವಿಪಿನ ಸಂಚಾರಿ,
ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ!

ಜನುಮ ಜನುಮ ಶತ ಕೋಟಿ ಸಂಸ್ಕಾರ
ಪರಮ ಚರಮ ಸಂಸ್ಕಾರಿ
ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ!

ನಾನಾವೃತ್ತ ನಾನಾ ಲಲಿತರುದ್ರ, ಲೀಲಾ
ರೂಪ ಅರೂಪ ವಿಹಾರಿ,
ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ!

ಅನುಬಂಧ

ಶೂದ್ರ ತಪಸ್ವಿ - ಮುನ್ನುಡಿ

ಉತ್ತಮ ಶಿಲ್ಪಿ ಕಟ್ಟಿದ ದೇವಾಲಯದಲ್ಲಿ ಅದು ಹಳತಾಗುತ್ತ ಬಂದಂತೆಲ್ಲ, ಇ ಹಲ್ಲಿ ಬಾವಲಿ ಮೊದಲಾದ ಅನಾಹೂತ ಜೀವಜಂತುಗಳೂ ಗೂಡು ಬೀಡ ಮಾಡುವುದುಂಟು. ವಾಲ್ಮೀಕಿಯ ಮಹಾಕೃತಿಗೂ ಅಂತಹ ಗತಿ ಒದಗಿದರೆ ಅದು ಅದ ಪುರಾತನತ್ವಕ್ಕೆ ಒಂದು ಅನಿವಾರ್ಯ ಲಕ್ಷಣವಾಗುತ್ತದೆ. ದೇವಾಲಯಕ್ಕೆ ಪೂಜೆಗೆಂದ ಹೋಗುವವರು ಯಾರೂ, ಅಲ್ಲಿವೆ ಎಂಬ ಒಂದು ಕಾರಣದಿಂದಲೆ, ಇಲಿ ಹ ಬಾವಲಿಗಳನ್ನು ಹೇಗೆ ಪೂಜಿಸುವುದಿಲ್ಲವೊ ಹಾಗೆಯೆ ಮಹಾಕವಿಯ ಕೃತಿಯ ಬಂದಳಿಕೆಗಳಂತೆ ಸೇರಿಕೊಂಡಿರುವ ಅಲ್ಪದೃಷ್ಟಿಯ ಕುಕವಿ ಕೃತವಾದ ಪ್ರಕ್ಷಿಪ್ತಗಳನ ತಿಳಿದವರು ಯಾರೂ ಗೌರವಿಸುವುದಿಲ್ಲ. ಶ್ರೀಮದ್ ರಾಮಾಯಣದಲ್ಲಿ, ಅದರಲ್ಲಿಯ ಉತ್ತರಕಾಂಡದಲ್ಲಿ, ಅಂತಹ ಪ್ರಕ್ಷಿಪ್ತಗಳು ಅನೇಕವಿವೆ. ಶಂಬೂಕವಧಪ್ರಸಂಗವ ಅಂತಹದೊಂದು. ಆ ಕಥೆ ಹೀಗಿದೆ.

ಸೀತಾ ಪರಿತ್ಯಾಗಾನಂತರ ಒಂದು ದಿನ ವೃದ್ಧ ಬ್ರಾಹ್ಮಣನೊಬ್ಬನು ಮೃ ಬಾಲಕನೊಬ್ಬನನ್ನು ಹೊತ್ತು ತಂದು, ಶ್ರೀರಾಮನ ಅರಮನೆಯ ಮುಂದೆ ಅನೇಕ ವಿಧವಾ ರೋದಿಸಿ, ತನ್ನ ಮಗನ ಅಕಾಲಮರಣಕ್ಕೆ ದೊರೆಯ ದೋಷವನ್ನೆ ಕಾರಣವೊಡ್ಡುತ್ತಾನ

> ನೇದೃಶಂ ದೃಷ್ಟಪೂರ್ವಂ ಮೇ ಶ್ರುತಂ ವಾ ಘೋರದರ್ಶನಮ್ ।
> ಮೃತ್ಯುರಪ್ರಾಪ್ತಕಾಲಾನಾಂ ರಾಮಸ್ಯ ವಿಷಯೇ ಯಥಾ ॥
> ರಾಮಸ್ಯ ದುಷ್ಕೃತಂ ಕಿಂಚಿನ್ಮಹದಸ್ತಿ ನ ಸಂಶಯಃ ।
>
> ರಾಜದ್ವಾರಿ ಮರಿಷ್ಯಾಮಿ ಪತ್ನ್ಯಾ ಸಾರ್ಧಮನಾಥವತ್ ।
> ಬ್ರಹ್ಮಹತ್ಯಾಂ ತತೋ ರಾಮ ಸಮುಪೇತ್ಯ ಸುಖೀ ಭವ ॥
>
> ರಾಜದೋಷೈರ್ವಿಪದ್ಯಂತೇ ಪ್ರಜಾ ಹ್ಯವಿಧಿಪಾಲಿತಾಃ ।
> ಅಸದ್‌ವೃತ್ತೇ ತು ನೃಪತಾವಕಾಲೇ ಮ್ರಿಯತೇ ಜನಃ ॥

ಶ್ರೀರಾಮನು ಮಂತ್ರಿಸಭೆಯನ್ನು ಕರೆದು ಬ್ರಾಹ್ಮಣನು ಹೊರಿಸಿದ ಅಪರಾಧ ವಿಚಾರವಾಗಿ ಪ್ರಶ್ನಿಸುತ್ತಾನೆ. ನಾರದ ಎಂಬುವನು ದೀರ್ಘವಾದ ಉಪನ್ಯಾಸ ಮಾ ಶೂದ್ರನೊಬ್ಬನು ತಪಸ್ಸು ಮಾಡುತ್ತಿರುವುದರಿಂದಲೆ ಬ್ರಾಹ್ಮಣನ ಮಗನ ಅಕಾಲಮರಣವಾಗಿದೆ ಎಂದು ಸಿದ್ಧಾಂತಪಡಿಸುತ್ತಾನೆ :

ತ್ರಿಭ್ಯೋ ಯುಗೇಭ್ಯಸ್ತ್ರೀನ್ ವರ್ಣಾನ್ ಧರ್ಮಶ್ಚ ಪರಿನಿಷ್ಠಿತಃ ।
ನ ಶೂದ್ರೋ ಲಭತೇ ಧರ್ಮಂ ಯುಗತಸ್ತು ನರರ್ಷಭ ॥
ಹೀನವರ್ಣೋ ನೃಪಶ್ರೇಷ್ಠ ತಪ್ಯತೇ ಸುಮಹತ್ತಪಃ ।
ಭವಿಷ್ಯಚ್ಛೂದ್ರಯೋನ್ಯಾಂ ವೈ ಶಪಶ್ಚರ್ಯಾ ಕಲೌ ಯುಗೇ ॥

ಅದ್ಯ ತಪ್ಯತಿ ದುರ್ಬುದ್ಧಿಸ್ತೇನ ಬಾಲವದೋ ಹ್ಯಯಮ್ ।
ಯೋ ಹ್ಯಧರ್ಮಮಕಾರ್ಯಂ ವಾ ವಿಷಯೇ ಪಾರ್ಥಿವಸ್ಯ ತು ॥

ಕರೋತಿ ಚಾಶ್ರೀಮೂಲಂ ತತ್ ಪುರೇ ವಾ ದುರ್ಮತಿರ್ನರಃ ।
ಕ್ಷಿಪ್ರಂ ಚ ನರಕಂ ಯಾತಿ ಸ ಚ ರಾಜಾ ನ ಸಂಶಯಃ ॥

ಶ್ರೀರಾಮನು ನಾರದನ ಮಾತಿನಂತೆ, ಬಾಲಕನ ಕಳೇಬರವನ್ನು ಎಣ್ಣೆಯಲ್ಲಿಡಿಸಿ, ಪುಷ್ಪಕ ವಿಮಾನವನ್ನೇರಿ ಹುಡುಕುತ್ತಾ ಹೋಗುತ್ತಾನೆ. ಎಲ್ಲ ದಿಕ್ಕುಗಳನ್ನೂ ಹುಡುಕಿ ಕೊನೆಗೆ ದಕ್ಷಿಣಕ್ಕೆ ತಿರುಗುತ್ತಾನೆ. ಅಲ್ಲಿ ಶಂಬೂಕ ತಪಸ್ವಿಯನ್ನು ಕಂಡು 'ಧನ್ಯಸ್ತ್ವಮಸಿ ಸುವ್ರತ' ಎಂದು ಅಭಿನಂದಿಸುತ್ತಾನೆ. ಪ್ರಶ್ನಿಸುತ್ತಾನೆ :

ಕಸ್ಯಾಂ ಯೋನ್ಯಾಂ ತಪೋವೃದ್ಧ ವರ್ತ್ತಸೇ ದೃಢವಿಕ್ರಮಃ ।
ಕೌತೂಹಲಾತ್ ತ್ವಾಂ ಪೃಚ್ಛಾಮಿ ರಾಮೋ ದಾಶರಥಿರ್ಹ್ಯಹಮ್ ॥

ಬ್ರಾಹ್ಮಣೋ ವಾಸಿ ಭದ್ರಂ ತೇ ಕ್ಷತ್ರಿಯೋ ವಾಸಿ ದುರ್ಜಯಃ ।
ವೈಶ್ಯಸ್ತೃತೀಯ ವರ್ಣೋ ವಾ ಶೂದ್ರೋ ವಾ ಸತ್ಯವಾಗ್ಭವ ॥

ನೀನು ಯಾವ ವರ್ಣದಲ್ಲಿ ಸಂಭವಿಸಿದವನು? ಸತ್ಯ ಹೇಳು ಎಂದ ಶ್ರೀರಾಮಗೆ, ಸತ್ಯಕಾಮ ಜಾಬಾಲಿ ತನ್ನ ಗುರುವಿಗೆ ಹೇಳಿದಂತೆ, ಶಂಬೂಕನೂ ತಾನು ಶೂದ್ರನೆಂದು ತಿಳಿಸುತ್ತಾನೆ. ಅವನು ಮಾತು ಮುಗಿಸುವುದಕ್ಕೆ ಮೊದಲೆ ರಾಮನ ಖಡ್ಗ ಅವನ ತಲೆಯನ್ನು ಕಡಿದು ಬೀಳಿಸುತ್ತದೆ. ಇಂದ್ರನನ್ನು ಮುಂದೆ ಮಾಡಿಕೊಂಡು ದೇವತೆಗಳೆಲ್ಲ 'ಸಾಧು! ಸಾಧು!' ಎಂದು ರಾಮನ ಕಾರ್ಯವನ್ನು ಹೊಗಳಿ ಹೂಮಳೆಗರೆಯುತ್ತಾರೆ. ನಿನ್ನ ಕೆಲಸಕ್ಕೆ ಮೆಚ್ಚಿದೆ, ವರವನ್ನು ಬೇಡು ಎಂದ ಇಂದ್ರನಿಗೆ ಶ್ರೀರಾಮನು ಬ್ರಾಹ್ಮಣ ಕುಮಾರನನ್ನು ಬದುಕಿಸಿಕೊಡಬೇಕೆಂದು ಹೇಳುತ್ತಾನೆ. ಶೂದ್ರನ ವಿನಿಪಾತವಾದೊಡನೆ ಬ್ರಾಹ್ಮಣ ಕುಮಾರನು ಬದುಕಿದ್ದಾನೆ ಎಂದು ಅಮರೇಂದ್ರನು ಆಶ್ವಾಸನೆ ಕೊಡುತ್ತಾನೆ.

ಈ ಕಥೆ ವಾಲ್ಮೀಕಿಯ ಅಂಕಿತದಲ್ಲಿರುವುದಂತೂ ಹಾಸ್ಯಕ್ಕೆ ಮೂರ್ಖ ಕಿರೀಟವಿಟ್ಟಂತಿದೆ. ಕಥೆಯ ಹಿಂದಿರುವ ಮನೋಧರ್ಮದಲ್ಲಿ ಎಂತಹ ಅಸಹ್ಯವಾದ ವರ್ಣಭ್ರಾಂತಿ ಅಡಗಿದೆ ಎಂಬುದು ಗೊತ್ತಾಗುತ್ತದೆ.

ಸತ್ಯ ಹೇಳುವುದರಲ್ಲಿ ಸ್ವಲ್ಪಮಟ್ಟಿಗೆ ನಿಷ್ಠುರ ಪ್ರಕೃತಿಯಾದ ಭವಭೂತಿಗೂ ಅದು ಅಸಹ್ಯವಾಗಿ ತೋರಿದೆ. ತನ್ನ 'ಉತ್ತರ ರಾಮಚರಿತ' ನಾಟಕದಲ್ಲಿ ಈ ಕಥೆಯ ವಿಷದ ಹಲ್ಲನ್ನು ಮುರಿಯಲು ಪ್ರಯತ್ನಿಸಿದ್ದಾನೆ. ಆದರೂ ಅದರ ಹಾವುತನವನ್ನು ಮಾರ್ಪಡಿಸುವ ಉದ್ಯಮದಲ್ಲಿ ಅವನು ಕೃತಕೃತ್ಯನಾಗಿದ್ದಾನೆಯೆ ಎಂಬ ಪ್ರಶ್ನ ಚಿಹ್ನೆಗೆ ತಲೆಯೆತ್ತಿ ನೆಟ್ಟಗೆ ನಿಲ್ಲಲು ಸಾಧ್ಯವಾಗಲಾರದೆಂದೆ ತೋರುತ್ತದೆ.

'ಉತ್ತರ ರಾಮಚರಿತ'ದಲ್ಲಿ ಭವಭೂತಿಗೆ ರಾಮನನ್ನು ದಂಡಕಾರಣ್ಯಕ್ಕೆ ತರುವ ಉಪಾಯ ಶಂಬೂಕ ಪ್ರಸಂಗದಿಂದ ಸಿದ್ಧವಾಗುತ್ತದೆ. ಶೂದ್ರತಪಸ್ವಿಯ ಶಿಕ್ಷೆಗಾಗಿಯೆ ಅವನು ಅಲ್ಲಿಗೆ ಬರುತ್ತಾನೆ. ಆದರೆ ಅಲ್ಲಿ ಶ್ರೀರಾಮನು ತನ್ನ ಕೃತ್ಯಕ್ಕೆ ತಾನೆ ಹೇಸಿದಂತೆ ತೋರುತ್ತದೆ. ಶಂಬೂಕನನ್ನು ಕೊಲ್ಲುವ ಮುನ್ನ ತನ್ನ ಬಲಗೈಯನ್ನು ಸಂಬೋಧಿಸಿ ಹೀಗೆ ಭರ್ತ್ಸನೆ ಮಾಡುತ್ತಾನೆ:

> ರೇ ಹಸ್ತದಕ್ಷಿಣ ಮೃತಸ್ಯ ಶಿಶೋರ್ದ್ವಿಜಸ್ಯ ಜೀವಾತವೇ ವಿಸೃಜ ಶೂದ್ರಮುನೌ ಕೃಪಾಣಮ್ ।
> ರಾಮಸ್ಯ ಗಾತ್ರಮಸಿ ನಿರ್ಭರಗರ್ಭ ಖಿನ್ನ ಸೀತಾವಿವಾಸನಪಟೋಃ ಕರುಣಾ ಕುತಸ್ತೇ ॥

ಎಲೈ ಬಲಗೈಯೆ, ಮೃತನಾದ ದ್ವಿಜಶಿಶುವಿನ ಪ್ರಾಣಯೋಗಕ್ಕಾಗಿ ಶೂದ್ರ ಮುನಿಯ ಮೇಲೆ ಕೃಪಾಣ ಪ್ರಯೋಗಮಾಡು. ರಾಮನ ಅಂಗವಲ್ಲವೆ ನೀನು? ತುಂಬು ಬಸಿರಿಯಾಗಿದ್ದ ಸೀತಾದೇವಿಯನ್ನು ಕಾಡಿಗಟ್ಟುವುದರಲ್ಲಿ ತನ್ನ ಪಟುತ್ವವನ್ನು ಸ್ಥಾಪಿಸಿದ ರಾಮನ ಗಾತ್ರದ ಒಂದು ಭಾಗವಲ್ಲವೆ ನೀನು? ನಿನಗೆಲ್ಲಿ ಬಂತು ಕರುಣೆ? - ಎಂದು ಮನಸ್ಸಿಲ್ಲದ (ಕಥಂಚಿತ್ ಪ್ರಹೃತ್ಯ) ಕತ್ತರಿಸುತ್ತಾನೆ. 'ಕೃತಂ ರಾಮಸದೃಶಂ ಕರ್ಮ' ಎಂದು ತನ್ನನ್ನು ತಾನೆ ಮೂದಲಿಸಿಕೊಳ್ಳುವಂತೆ ಉದ್ಗಾರ ತೆಗೆಯುತ್ತಾನೆ.

ಇಲ್ಲಿ ಭವಭೂತಿ ಇಹಲೋಕದ ಕಾರ್ಪಣ್ಯವನ್ನು ಪರಲೋಕದ ಔದಾರ್ಯದಿಂದ ತಿದ್ದಲು ಪ್ರಯತ್ನಿಸಿರುವುದನ್ನು ಕಾಣುತ್ತೇವೆ. ಶಂಬೂಕನ ಮೃತ ಶರೀರದಿಂದ ಒಬ್ಬ ಗಂಧರ್ವನು ಮೈದೋರಿ ರಾಮನಿಗೆ ತನ್ನ ಕೃತಜ್ಞತೆಯನ್ನು ನಿವೇದಿಸಿ, ತಾನೊಂದು ಶಾಪದಿಂದ ಶೂದ್ರನಾಗಿ ಹುಟ್ಟಿ ತಪಸ್ಸು ಮಾಡುತ್ತಿದ್ದುದಾಗಿಯೂ, ರಾಮನ ಖಡ್ಗಹತಿಯಿಂದಲೆ ಶಾಪ ವಿಮೋಚನವಾದುದಾಗಿಯೂ ತಿಳಿಸಿ (ಸತ್ಸಂಗಜಾನಿ ನಿಧನಾನ್ಯಪಿ ತಾರಯಂತಿ) ಸತ್ಸಂಗದಿಂದ ಮರಣ ಸಂಭವಿಸಿದರೂ ಅದು ಶ್ರೇಯಸ್ಕರ ಎಂಬ ಮಹಾಕಾವ್ಯವನ್ನು ಹೇಳುತ್ತಾನೆ. ಶ್ರೀರಾಮನೂ ಆತನ ತಪಸ್ಸಿನ ಮಹಿಮೆಯನ್ನು ಮನಕ್ಕೆ ತಂದುಕೊಂಡು, (ತದನುಭೂಯತಾಂ ಉಗ್ರಸ್ಯ ತಪಸಃ ಪರಿಪಾಕಃ) ಅವನಿಗೆ ಉತ್ತಮ ಲೋಕಗಳ ಉತ್ತಮ ಗತಿಗಳಾಗಲಿ ಎಂದು ಹರಸುತ್ತಾನೆ:

ಯತ್ರಾನಂದಾಶ್ಚ ಮೋದಾಶ್ಚ ಯತ್ರ ಪುಣ್ಯಾ ಹಿ ಸಂಪದಃ ।
ವೈರಾಜಾ ನಾಮ ತೇ ಲೋಕಾಃ ತೈಜಸಾಃ ಸಂತು ತೇ ಶಿವಾಃ ॥

'ಶೂದ್ರತಪಸ್ವಿ'ಯಲ್ಲಿ ಶಂಬೂಕನ ಕಥೆಯ ಸಾಮಗ್ರಿ ಹೊಸ ರೀತಿಯಿಂದ ದೃಶ್ಯವಸ್ತುವಾಗಿದೆ. ಈ ನಾಟಕ ಆಡುವ ದೃಷ್ಟಿಯಿಂದ ನಿಷ್ಪ್ರಯೋಜಕ. ಅದರ ಚಿತ್ರಗಳ ಬೃಹತ್ತನ್ನೂ ಮಹತ್ತನ್ನೂ ಹೊರಗಡೆಯ ಅಲ್ಪವೇದಿಕೆಯ ಮೇಲೆ ಕೃತಕಾಭಿನಯದಿಂದ ಪ್ರದರ್ಶಿಸುವುದೂ ಅಸಾಧ್ಯ.* ಆದ್ದರಿಂದ ಕಲ್ಪನಾ ತಪಸ್ಸಾಧ್ಯವಾದ ಮನೋರಂಗಭೂಮಿಯಲ್ಲಿಯೆ ಅದನ್ನು ಸೃಷ್ಟಿಸಿ ದೃಷ್ಟಿಸಬೇಕು. ದೃಶ್ಯರೂಪಿಯಾದರೂ ಅದು ಕಾವ್ಯಾತ್ಮಕವಾದುದು: ದೃಶ್ಯರೂಪಧಾರಣೆ ಮಾಡಿದ ಮಾತ್ರಕ್ಕೆ ಕಾವ್ಯವು ಟಿಕೀಟಿನ ಆಡಳಿತಕ್ಕೆ ಒಳಗಾಗಲೇಬೇಕೆಂಬ ದುರಾಗ್ರಹ ಹಳೆಯ ಪ್ರಯೋಜನದ ಒಂದು ನಿಷ್ಪ್ರಯೋಜಕವೂ ಅವಶೇಷಾತ್ಮಕವೂ ಆಗಿರುವ ಮನಃಸ್ಥಿತಿ ಎಂದೆ ಹೇಳಬೇಕಾಗುತ್ತದೆ. ಮನೋವೇದಿಕೆಯ ಸಜೀವತೆಯ ಮತ್ತು ಶ್ರೀಮಂತತೆಯ ಮುಂದೆ ಹೊರಗಡೆಯ ನಾಟಕಶಾಲೆ ಒಂದು ದರಿದ್ರ ಪ್ರಯತ್ನವೆಂದು ಪ್ರತಿಭಾ ಪ್ರಭುಗಳೆಲ್ಲರಿಗೂ ನಿತ್ಯಾನುಭವವೇದ್ಯ. ಆದ್ದರಿಂದ ''ಶೂದ್ರತಪಸ್ವಿ''ಯನ್ನು ಓದುವವರೆಲ್ಲರಿಗೂ ನನ್ನದೊಂದು ಬಿನ್ನಹ: ಯಾವ ಕಾರಣದಿಂದಾಗಲಿ, ಯಾವ ರೂಪದಿಂದಾಗಲಿ, ಯಾವ ಪೂರ್ವಗ್ರಹದಿಂದಾಗಲಿ, ಯಾವ ದುರಾಗ್ರಹದಿಂದಾಗಲಿ ಹೃದಯಪ್ರವೇಶ ಮಾಡುವ ದಾರಿದ್ರ್ಯವನ್ನು ದೂರೀಕರಿಸಿ, ಶುದ್ಧಬುದ್ಧಿಯ ಸಹೃದಯ ಸಹಜವಾದ ಶ್ರೀಮಂತತೆಯಿಂದ ಅದನ್ನು ಓದಿದರೆ ಕೃತಿಗೂ ಕೃತಿಕಾರನಿಗೂ ನ್ಯಾಯಮಾಡಿದಂತಾಗುತ್ತದೆ.

ಕುವೆಂಪು

ಬೆಂಗಳೂರು
೨-೧-೧೯೪೪

---

* ''ಬೆರಳ್‌ಗೆ ಕೊರಳ್'' ಅಂತಹ ನಾಟಕವನ್ನೂ ಅತ್ಯದ್ಭುತವಾಗಿ ರಂಗಭೂಮಿಯ ಮೇಲೆ ಪ್ರೇಕ್ಷಕರು ರಸರೋಮಾಂಚಿತರಾಗುವಂತೆ ಪ್ರದರ್ಶಿಸಿ ಯಶಸ್ವಿಗಳಾಗಿರುವ ನಟಸಾಹಸಿಗಳಿಗೆ ಮುನ್ನುಡಿಕಾರನ ಈ ಉಕ್ತಿಯನ್ನೂ ಹುಸಿಗೊಳಿಸಲು ಸಾಧ್ಯವಾಗಬಹುದೆನೊ?

೧೮-೮-೧೯೬೨ **ಕುವೆಂಪು**

ಶೂದ್ರ ತಪಸ್ವಿ - ಮಾರ್ನುಡಿ

ಮೂರು ವರ್ಷಗಳ ಹಿಂದೆ ಈ ದೃಶ್ಯಕೃತಿ ಪ್ರಕಟವಾದಾಗ ವಾಚಕ ವರ್ಗದ ಹೃದಯಾಕಾಶದಲ್ಲಿ ಗಾಳಿಯೆದ್ದು ಮೋಡ ಕವಿದು ಗುಡುಗು ಮಿಂಚಾಡಿದಾ ಕ್ಷೋಭೆ ಅಂದಿನ ಪತ್ರಿಕಾ ಸರೋವರಗಳಲ್ಲಿ ಪ್ರತಿಫಲಿತವಾಗಿತ್ತು. ಗಣ್ಯರು ಗಣ್ಯರಲ್ಲದವರು ಅಲ್ಪಗಣ್ಯರು ಎಲ್ಲರೂ ತಮತಮಗೆ ತೋಚಿದುದನ್ನು ತೋಚಿದಂತೆ ಅವಸರವಸರವಾಗಿ ಉದ್ರೇಕಪೂರ್ಣವಾಗಿ ಬರೆದರು. ಕೆಲವರ ಬರವಣಿಗೆ "ಅಸೂಯಾಸದನನ್ ಸುಖ ದೂರನ್. ಅವನ ಮಾತೇಕಿದರೊಳ್?" ಎಂಬ ಹರಿಹರನ ಕಾವ್ಯೋಕ್ತಿಯನ್ನು ಮನಸ್ಸಿಗೆ ತರುವಂತಿದ್ದರೆ, ಮತ್ತೆ ಕೆಲವರದು

"ಕ್ಷುದ್ರಂಗೆ ಸಕಲ ಸುಜನೋ
ಪದ್ರವರೂಪಂಗೆ ಪರರ ಕಾವ್ಯಾರ್ಥಮುಮಂ
ಛಿದ್ರಿಸುವಂಗತಿ ಶಬ್ದದ
ರಿದ್ರಂಗಕ್ಕುಮೆ ನವೀನ ಕಾವ್ಯಾರಂಭಂ."

"ಒಳಗರೆಯದೆ ಸತ್ಕಾವ್ಯದ
ಕಳೆಯರೆಯದೆ ಲಘುತರತ್ವದಿಂ ನಾಲ್ಕೆರಡಾ
ಯ್ಕುಳಿ ಮಾತನಾಡಿ ನೆರೆ ಹೆ
ಕ್ಕಳ ಮಿಕ್ಕಿದೊಡೊಲ್ವರೇ ಕವೀಂದ್ರಾಭರಣರ್."

ಎಂಬ ಹಳಸಲನ್ನೂ ಹೊಸತು ಮಾಡಿಸುವಂತಿತ್ತು.

ಆ ಉದ್ರೇಕಕ್ಕೆ ಮೂಲಕಾರಣ ಈ ಕೃತಿ ಜಾತಿಮಾತ್ಸರ್ಯದಿಂದ ಪ್ರೇರಿತವಾದ ಮೂದಲಿಕೆ ಎಂಬ ಅಜ್ಞಭಾವನೆ. ಆ ಭಾವನೆ ತೆಗಳಿಕೆಗೆ ಮಾತ್ರವಲ್ಲದೆ ಹೊಗಳಿಕೆಗೂ ಕಾರಣವಾಯಿತೆಂಬುದನ್ನು ನೆನೆದರೆ ವಿಷಾದವಾಗುತ್ತದೆ.* ಅಂತಹ ಪೂರ್ವಗ್ರಹ ಮತ್ತು ಪಕ್ಷಪಾತಗಳ ದೆಸೆಯಿಂದ ಕೃತಿಕಾರನ ಮುಖ್ಯಾಶಯ, ರಸಪ್ರಯೋಜನ ಶೀಲವಾದ ಸತ್ಯಬೋಧನ, ತತ್ಕಾಲಕ್ಕಾದರೂ ವ್ಯರ್ಥವಾಯಿತೆಂದು ತೋರುತ್ತದೆ. ಆ ಅಪಭಾವನೆ ತಾತ್ಕಾಲಿಕ ಎಂಬ ನಂಬುಗೆಯಿಲ್ಲದಿದ್ದರೆ ಈ ಮಾರ್ನುಡಿ ಹೊರಹೊಮ್ಮುತ್ತಿರಲಿಲ್ಲ.

---

*ಬ್ರಾಹ್ಮಣೇತರರಲ್ಲಿ ಕೆಲವರು ಕೃತಿಯ ಕಾವ್ಯತ್ವಕ್ಕಿಂತಲೂ ಹೆಚ್ಚಾಗಿ ಕೃತಿ ಬ್ರಾಹ್ಮಣರಿಗೆ ಚೆನ್ನಾಗಿ ಏಟುಕೊಡುತ್ತದೆ ಎಂಬ ಅಸತ್ಯವೂ ಅಪ್ರಕೃತವೂ ಅವಿವೇಕವೂ ಆದ ಕಾವ್ಯವಿಮರ್ಶೇತರ ಕಾರಣವನ್ನು ಆರೋಪಿಸಿಕೊಂಡು ಅದನ್ನು ಸ್ತುತಿಸಿದರೆಂದು ಕೇಳಿದ್ದೇನೆ.

ಎಲ್ಲರ ವಿಮರ್ಶೆಗಳನ್ನಾಗಲಿ ವಿಮರ್ಶೆಯ ಎಲ್ಲ ಮುಖಗಳನ್ನಾಗಲಿ ಗಮನಿಸಿ ಸಮಾಧಾನ ಹೇಳುವುದು ಪ್ರಕೃತ ಲೇಖನದ ಉದ್ದೇಶವಲ್ಲ. ಒಂದು ವಿಮರ್ಶೆಯನ್ನು ಮಾತ್ರ ಮಾದರಿಯಾಗಿಟ್ಟುಕೊಂಡು ಅಲ್ಲಿ ಬರುವ ಪ್ರಾತಿನಿಧಿಕವಾದ ಟೀಕೆಗಳಿಗೆ ಉಚಿತವೆಂದು ತೋರಬಹುದಾದ ಉತ್ತರಗಳನ್ನು ಸಂಗ್ರಹವಾಗಿ ಸೂಚಿಸಿದರೆ ಸಾಕೆಂದು ತೋರುತ್ತದೆ.

೧೯೪೪ರ ಜುಲೈ ತಿಂಗಳ "ಜೀವನ" ಮಾಸಪತ್ರಿಕೆಯಲ್ಲಿ ಕಾವ್ಯಾವಲೋಕನ ಎಂಬ ಹೆಸರಿನಲ್ಲಿ ಮಾ.ವೆಂ.ಅ.ರವರು ತಮ್ಮ ಅಭಿಪ್ರಾಯ ಸಮೂಹ ಮಾತ್ರ ಎನ್ನಬಹುದಾದ ವಿಮರ್ಶನ ಲೇಖನವನ್ನು ಬರೆದಿದ್ದಾರೆ. ಏತಕ್ಕೆ ಅಭಿಪ್ರಾಯ ಸಮೂಹ ಎನ್ನುವುದು ಎಂದರೆ ಅಲ್ಲಿಯ ಟೀಕೆಗಳಿಗೆ ಸಾಧಾರವಾದ ಕಾರಣಗಳನ್ನು ಹೇಳಿ ನಿದರ್ಶನಗಳನ್ನು ಕೊಡಲು, ಸ್ಥಳಾಭಾವದಿಂದ ಇರಬಹುದು, ಸಾಧ್ಯವಾಗಿಲ್ಲ. ಉದಾಹರಣೆಗಾಗಿ ಈ ಮಾತುಗಳನ್ನು ತೆಗೆದುಕೊಳ್ಳಬಹುದು:

"ಭೈರವ ಮೃತ್ಯುಗಳ ಸಂಭಾಷಣೆ ಶಂಬೂಕನು ಎಷ್ಟು ಮಹಿಮಾವಂತನೆಂಬುದನ್ನು ತೋರಿಸುತ್ತದೆ. ಆದರೆ ಮಾತು ಅಲ್ಲಲ್ಲಿ ಇಂತಹ ದಿವ್ಯತತ್ವಗಳ ಹಿರಿತನಕ್ಕೆ ಆವಶ್ಯಕವಾದ ಗಾಂಭೀರ್ಯದಿಂದ ತಪ್ಪುತ್ತದೆ."

ಈ ಉಕ್ತಿ ಚರ್ಚಾಸ್ಪದವಾಗುತ್ತದೆ. ಸಾವಿನಂತಹ ದಿವ್ಯತತ್ವವನ್ನು "ಯಮ" ಎಂದು ಕರೆದಾಗ ಸಂವಾದದ ಮಟ್ಟ ಎಂತಿರಬೇಕು? "ಮೃತ್ಯು" ಎಂದು ಕರೆದಾಗ ಹೇಗಿರಬೇಕು? ಅದರಲ್ಲಿಯೂ ದುರ್ಮೃತ್ಯುವಾಗಿರುವಾಗ! ಅಲ್ಲಿ ಪುಲ್ಲಿಂಗದ ಔಚಿತ್ಯವೇನು? ಇಲ್ಲಿ ಸ್ತ್ರೀಲಿಂಗದ ಔಚಿತ್ಯವೇನು? "ಯಮನಸೋಲು" ನಾಟಕದಲ್ಲಿ ಯಮನ ಪಾತ್ರವನ್ನು ಜಗದ ಧರ್ಮಾಧಿಕಾರಿಯೆಂದೂ ಋತದ ಕಿಂಕರನೆಂದೂ ಚಿತ್ರಿಸಿ, ಅದಕ್ಕುಚಿತವಾದ ನಡೆನುಡಿಗಳನ್ನು ಅಳವಡಿಸಿದ ಕವಿಪ್ರತಿಭೆಗೆ "ದುರ್ಮೃತ್ಯು"ವನ್ನು ಯಾವ ಪ್ರತಿಮೆಯಿಂದ ಚಿತ್ರಿಸಬೇಕೆಂಬ ವಿಚಾರದಲ್ಲಿ ವಾಗ್ದೇವಿ ಕೃಪಣೆಯಾಗಿಲ್ಲವೆಂದು ನನಗೆ ತೋರುತ್ತದೆ. ಆದಕಾರಣ ವಾಚಕರ ಸ್ವೀಯ ಆಲಸ್ಯದಿಂದಲೋ ಪ್ರಜ್ಞಾ ಪರಿಮಿತಿಯಿಂದಲೋ ಸಂಭವಿಸುವ ಅನಿವಾರ್ಯಕ್ಕೆ "ಅಭಿಪ್ರಾಯ ಮಾತ್ರ"ವೆಂದು ಹೆಸರಿಡುವುದೂ ಅನಿವಾರ್ಯವಾಗುತ್ತದೆ.

ಹಾಗೆಯೆ ಇನ್ನೊಂದು ಕಡೆ ಹೀಗಿದೆ ಅಭಿಪ್ರಾಯ: "ಅಪರಾಧ ಯಾವುದು ಎಂಬ ವಿಷಯದಲ್ಲಿ ಉತ್ತರಕಾಂಡದ ಭಾವನೆಗೂ ಈ ದೃಶ್ಯದ ಭಾವನೆಗೂ ಬಹಳ ಅಂತರವಿದೆ ಎಂಬುದನ್ನು ಹೇಳಬೇಕಾಗಿಲ್ಲ. ಉತ್ತರಕಾಂಡದ ಕಥೆಯಲ್ಲಿ ಪ್ರಕಟವಾಗುವ ಮನೋಧರ್ಮ ವರ್ಣವ್ಯವಸ್ಥೆಯನ್ನು ಕುರಿತ ಒಂದು ತೀವ್ರವಾದ ಶ್ರದ್ಧೆ. ಈ ಕಾವ್ಯದಲ್ಲಿ ಅದನ್ನು **ಜಾತಿಗರ್ವಾಂಧತೆ** ಎಂದು ವರ್ಣಿಸಿರುವುದು ಕಾಣುತ್ತದೆ."

ಈ ಅಭಿಪ್ರಾಯಕ್ಕೆ ಪ್ರತ್ಯಭಿಪ್ರಾಯ ಇನ್ನೂ ಹೆಚ್ಚು ಸಕಾರಣವಾಗಿ ಹೀಗೆನ್ನಬಹುದು: "ಅವಿವೇಕ 'ತೀವ್ರವಾದ ಶ್ರದ್ಧೆ'ಯಾದರೂ ಅವಿವೇಕವಾಗಿಯೆ ನಿಲ್ಲುತ್ತದೆ. ಆದ್ದರಿಂದ ತನ್ನ ಶ್ರದ್ಧಾಂಶದಲ್ಲಿ ಅಲ್ಲದಿದ್ದರೂ ಅವಿವೇಕಾಂಶದಲ್ಲಿ ತಿದ್ದು ಪಡೆಯಬೇಕಾದುದೇ ಅತ್ಯಂತ ಅಗತ್ಯ." ಈ ದೃಶ್ಯದಲ್ಲಿ ನಡೆದಿರುವ ಕೆಲಸವೂ ಅದೇ: ಶ್ರದ್ಧೆಯ ಖಂಡನೆಯಲ್ಲ, ಅವಿವೇಕದ ತಿದ್ದುಪಡಿ.

ಮುಂದೆ ವಿಮರ್ಶಕರು ಈ ದೃಶ್ಯದ ಕೃತಿಕಾರನ ದೃಷ್ಟಿಯನ್ನೆ ಸಂಪೂರ್ಣವಾಗಿ ಒಪ್ಪಿ ಪ್ರತಿಪಾದಿಸುತ್ತಾ ಹೋಗಿ ಕೊನೆಯಲ್ಲಿ. "ಆದರೆ ಪೂಜ್ಯನಿಗೆ ನಮಸ್ಕಾರ ಮಾಡದಿದ್ದವನಿಗೆ ಸಾವು ಶಿಕ್ಷೆ ಎನ್ನುವುದು ಹಿಂದಣ ಕ್ರೌರ್ಯಕ್ಕೆ ಪ್ರತಿಯಾದ ಇನ್ನೊಂದು ಕ್ರೌರ್ಯವಾಗುತ್ತದೆ. ಜೊತೆಗೆ ತಂದೆಯ ಮಾತಿನಂತೆ ನಡೆದು ಎಳೆಯನು ಹೀಗೆ ಸಾಯುವುದು ಅಪ್ಪ ಸೋರೆಗಾಯಿ ತಿಂದರೆ ಮಗನಿಗೆ ಹೊಟ್ಟೆನೋವು ಎಂಬ ನೀತಿಯಾಗುತ್ತದೆ."

ಈ ಟೀಕೆ ತನಗೆ ತಾನೆ ಸತ್ಯವಾದರೂ ಪ್ರಕೃತ ದೃಶ್ಯಕಾವ್ಯಕ್ಕೆ ಸ್ವಲ್ಪವೂ ಅನ್ವಯವಾಗುವುದಿಲ್ಲ. ಏಕೆಂದರೆ ಇಲ್ಲಿ ಬ್ರಾಹ್ಮಣ ಕುಮಾರ ಸಾಯುವುದಿಲ್ಲ, ಅಲ್ಲಿ ಶಂಬೂಕನು ತೀರಿಕೊಂಡಂತೆ; ಕೊನೆಯಲ್ಲಿ ಬದುಕುತ್ತಾನೆ. ಶ್ರೀರಾಮಚಂದ್ರನೆ ಆಶ್ವಾಸನೆ ಕೊಟ್ಟಿದ್ದಾನೆ: "ಅಮೃತನಕ್ಕುಂ ನಿನ್ನೀ ಚಿರಂಜೀವಿ" ಎಂದು. ಅವನು ನಿಜವಾಗಿಯೂ ಸತ್ತಿದ್ದರೆ 'ಅಪ್ಪ ಸೋರೆಗಾಯಿ ತಿಂದರೆ ಮಗನಿಗೆ ಹೊಟ್ಟೆನೋವು ಎಂಬ ನೀತಿ' ಒಪ್ಪಾಗುತ್ತಿತ್ತು. ಅಲ್ಲದೆ ಸಾಯುವುದು ಸತ್ತವನಿಗೆ ಶಿಕ್ಷೆಯಾಗುವುದಕ್ಕಿಂತ ಸಮಧಿಕತರವಾಗಿ ಬದುಕಿ ದುಃಖಿಸುವವರಿಗೆ ಶಿಕ್ಷೆಯಾಗುತ್ತದಲ್ಲವೆ? ಆ ದೃಷ್ಟಿಯಿಂದ ಶಿಕ್ಷೆ ಬ್ರಾಹ್ಮಣನಿಗಲ್ಲದೆ ಅವನ ಮಗನಿಗೆ ಅನ್ವಿತವಾಗುವುದಿಲ್ಲ. ಅವನ ಜೀವನವನ್ನು ಸೆಳೆದ ಮೃತ್ಯು, ಧರ್ಮ ಸ್ಥಾಪನೆಯ ಸಲುವಾಗಿ, ಅಮೃತಕ್ಷೇತ್ರವಾದ ತಪೋವನದಿಂದ ಬಾಲಕನ ಜೀವವನ್ನು ಕೊಂಡೊಯ್ಯುವುದೂ ಇಲ್ಲ. ಇಲ್ಲಿ ವಾಚಕರು ಅಧರ್ಮ ಪರಿಹಾರವಾದೊಡನೆ ಮಲಗಿದ್ದವನು ಏಳುವಂತೆ ಎದ್ದು ಕಣ್ಣುಜ್ಜಿಕೊಂಡು, ಸುತ್ತಲೂ ನೋಡಿ ತನ್ನ ತಂದೆಯನ್ನು ಕರೆಯುವ ಕುಮಾರನ ಮಾತನ್ನು ಗಮನಿಸಬೇಕು: "ಹೂ ಕುಯ್ಯುತಿದ್ದವನ್ ಇಲ್ಲಿಯೆ ಮಲಗಿದನೆ?-" ಹುಡುಗನಿಗೆ ಆ ಅನುಭವಕ್ಕಿಂತ ಹೆಚ್ಚಿನ ಯಾವ ಶಿಕ್ಷೆಯೂ ವೇದ್ಯವಾಗುವುದಿಲ್ಲ. ಈ ಎಲ್ಲ ಕಾರಣಗಳಿಗಾಗಿ ಪೂರ್ವೋಕ್ತ ವಿಮರ್ಶನೋಕ್ತಿ ಅಪ್ರಕೃತವಾಗುತ್ತದೆ. ಈ ದೃಶ್ಯದ ಉದ್ದೇಶ ಒಟ್ಟಿನಲ್ಲಿ ಶಿಕ್ಷೆಯೂ ಅಲ್ಲ, ಕ್ರೌರ್ಯವೂ ಅಲ್ಲ. "ಈ ಶಾಸ್ತ್ರ ಮೂರ್ಖಂಗೆಂತೊ ಬುದ್ಧಿ ಗಲಿಪೆನ್?" ಎಂಬುದೂ ಶ್ರೀರಾಮನ ಆಶಯ.

ಮುಂದಿನ ವಿಮರ್ಶೆಯಂತೂ ಸಂಪೂರ್ಣವಾದ ದೃಷ್ಟಿವೈಪರೀತ್ಯದಿಂದ ಕಲುಷಿತವಾಗಿ ಅನೌದಾರ್ಯಸ್ಪೃಶವಾಗುವಂತಿದೆ:

"ಈಗ ನಮಗೆ ಬೇಕಾಗಿರುವುದು, ಅಂದು ಒಂದು ಜಾತಿಯ ಹೆಸರಿನಲ್ಲಾದ ತಪ್ಪಿಗೆ ಇಂದು ಇನ್ನೊಂದು ಜಾತಿಯ ಹೆಸರಿನಲ್ಲಿ ಬದಲ ತಪ್ಪಲ್ಲ; ಆ ತಪ್ಪನ್ನು ತಿದ್ದಿ ಔದಾರ್ಯ ಅಲ್ಲದೆ, ಹೊಸ ತಪ್ಪು ಶಿಕ್ಷೆಯನ್ನು ಪ್ರತಿಪಾದಿಸುವದರಲ್ಲಿ (ಇಲ್ಲಿ ಅರ್ಥ ಅಸ್ಪಷ್ಟವಾಗಿರುವುದರಿಂದ ಏನಾದರೂ ಅಚ್ಚಿನ ತಪ್ಪಿದ್ದರೂ ಇರಬಹುದು) ಕವಿ ಬ್ರಾಹ್ಮಣನನ್ನು ಅನಾವಶ್ಯಕವಾಗಿ ಅವಿವೇಕಿಯನ್ನಾಗಿ ಮಾಡಿದ್ದಾರೆ. ಹಾಗೆಯೆ ರಾಮಚಂದ್ರನನ್ನು ಈ ಬ್ರಾಹ್ಮಣನೊಂದಿಗೆ ವ್ಯಂಗ್ಯವಾಡುವ, ಶೂದ್ರ ತಪಸ್ವಿಗೆ ಯಾವುದೋ ವ್ಯಾಜದಿಂದ ಕೈಮುಗಿಯುವ, ಮಿತ್ರನಂತೆ ನಟಿಸುತ್ತ ಬ್ರಾಹ್ಮಣನ ಕುತ್ತಿಗೆಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವ ಒಬ್ಬ ಅಧೀರ ಅನುದಾತ್ತ ನಾಯಕನಾಗಿ ಮಾಡಿದ್ದಾರೆ."

ಈ ವಿಮರ್ಶೆ ಪ್ರತ್ಯುತ್ತರಕ್ಕೂ ಯೋಗ್ಯವಲ್ಲದಷ್ಟು ಅಪ್ರಾಜ್ಞವಾಗಿದೆ. ಇದು ಎಚ್ಚರಿಕೆಯಿಂದ ಓದಿಕೊಳ್ಳದ ಪ್ರಮಾದದಿಂದ ಉಂಟಾದುದೆಂದು ಭಾವಿಸುತ್ತೇನೆ. ಕಾವ್ಯದ ಧ್ವನಿಶಕ್ತಿಯ ವಿಧಾನದ ಅಪಾರ್ಥಪ್ರತಿಪಾದನೆಯೆ ಇಲ್ಲಿ ಮೂರ್ತಿಮತ್ತಾದಂತಿದೆ. ಓದಬೇಕಾದ ಧ್ವನಿಯಲ್ಲಿ ಓದಿಸಿ ಕೇಳಿದರೆ ಇಂತಹ ದೃಷ್ಟಿಯ ವಕ್ರತೆ ಋಜುವಾಗುತ್ತದೆಂದು ಭರವಸೆ ಕೊಡುತ್ತೇನೆ. ಏಕೆಂದರೆ ವಾಸ್ತವವಾಗಿ ಇಲ್ಲಿ ಬ್ರಾಹ್ಮಣ ಕೊನೆಗೆ ವಿವೇಕಿಯಾಗಿ ಬೆಳಕು ಕಂಡು ಬೆಳಗುತ್ತಾನೆ. ಶ್ರೀರಾಮನೂ ಇಂಗಿತವಾದ ವಾಕ್ ಮತ್ತು ಕ್ರಿಯಾರೀತಿಗಳಿಂದ ಬ್ರಾಹ್ಮಣನ ಆತ್ಮಪ್ರಜ್ಞೆಯ ಬೋಧವನ್ನು ಎಚ್ಚರಗೊಳಿಸಿ ತಿದ್ದುವ ಅತ್ಯಂತ ಮಹೋದಾತ್ತ ವ್ಯಕ್ತಿಯಾಗಿ ಅಂತರ್ಯಾಮಿ ಶಕ್ತಿಯಾಗಿ ನಿಲ್ಲುತ್ತಾನೆ.

ಟೀಕೆ ಕೊಂಚ ಕಾಲುಜಾರಿತೆಂಬ ಭಾವನೆಯಿಂದಲೋ ಏನೋ ವಿಮರ್ಶಕರು ಕವಿಯ ಬೆನ್ನು ಸವರಿ ಅವನಿಗೆ ಧೈರ್ಯ ಹೇಳುವಂತೆ "ಇದರ ಹೊಣೆಯೆಲ್ಲ ಕವಿಯದಲ್ಲ, ಇದರ ಬಹುಭಾಗ ಮೂಲಭಾಗದಲ್ಲಿ ಅನಿವಾರ್ಯವಾದು"ದೆಂದು ಉಪಚಾರ ನುಡಿದಿದ್ದಾರೆ. ಆದರೆ ಅದೂ ಹುಸಿ ಮತ್ತು ಅನಾವಶ್ಯಕ. ಏಕೆಂದರೆ ಈ ಕೃತಿಯ ಸಂಪೂರ್ಣವಾದ ಹೊಣೆ ಕೃತಿಕಾರನಿಗೆ ಸೇರಿದ್ದೆ. ಹೇಗೆಂದರೆ ಮೂಲದ ಕಥೆ ನಿಮಿತ್ತ ಮಾತ್ರವಾದುದು. ಕವಿಗದು "ಸೇರ"ದಿದ್ದರೆ ಅದರ ಗೋಜಿಗೆ ಹೋಗುತ್ತಲೆ ಇರಲಿಲ್ಲ. ಯಾವುದಾದರೂ ಅಂಶ ಸೇರದಿದ್ದರೆ ಅದನ್ನು ತನ್ನ ಇಚ್ಛೆಗೆ ಅಧೀನವಾಗುವಂತೆ ಬದಲಾಯಿಸುವ ನಿಯತಿಕೃತ ನಿಯಮರಹಿತವಾದ ಸ್ವಾತಂತ್ರ್ಯ ಕವಿಯ ನಿರಂಕುಶಮತಿಯ ಹುಟ್ಟುಹಕ್ಕಾಗಿದೆ. ಆದ್ದರಿಂದ ವಿಮರ್ಶಕನ ಕರ್ತವ್ಯ ಕಥಾಪ್ರತಿಮೆಯಲ್ಲಿ ಧ್ವನಿತವಾಗುವ ಕವಿಯ 'ದರ್ಶನ'ವನ್ನು ತಿಳಿಯುವುದಾಗಿರಬೇಕೇ ಹೊರತು ತನ್ನ ಅಪ್ರಕೃತಾಶಯದ ಮಾನದಂಡದಿಂದ ಅದನ್ನು ಅಳೆಯ ಹೋಗುವುದಲ್ಲ ಎಂಬುದನ್ನು ಸೂಚಿಸಬಯಸುತ್ತೇನೆ.

"ತನ್ನ ಮಗ ಹೋದ ತಪ್ಪನ್ನು ರಾಜನಲ್ಲಿ ಆರೋಪಿಸುವ ಬ್ರಾಹ್ಮಣ ಎಷ್ಟು ತೊಳೆದರೂ ಕಪ್ಪಾಗಿಯೇ ನಿಲ್ಲಬೇಕು" ಎನ್ನುತ್ತಾರೆ ವಿಮರ್ಶಕರು. ಅದು ಹೇಗೆ? ಅವನೇನು ತೆನ್ನಾಲಿ ರಾಮಕೃಷ್ಣನ ಕರಿನಾಯಿಯೆ? ಆ ಟೀಕೆಯ ಮಿಥ್ಯೆ ಈ ಕೃತಿಯನ್ನು ಗಮನವಿಟ್ಟು ಓದುವವರಿಗೆಲ್ಲ ಸ್ವಸುವೇದ್ಯವಾಗುತ್ತದೆ. ಏಕೆಂದರೆ ಬ್ರಾಹ್ಮಣನು ತುದಿಯಲ್ಲಿ ಕಾಳಿಕೆ ಕಳೆದ ಹೊನ್ನಿನಂತೆ ಹೊಸ ತೇಜಸ್ಸಿನಿಂದ ಹೊಳೆಯುತ್ತಾನೆ. ನಿಜವಾಗಿಯೂ ಬ್ರಾಹ್ಮಣನಾಗುತ್ತಾನೆ. "ಬ್ರಾಹ್ಮಣೇತರ" ಕವಿ ತನ್ನ ಕಲಾಕೃತಿಯಲ್ಲಿ "ಬ್ರಾಹ್ಮಣ ದ್ವೇಷ"ದಿಂದ ಪ್ರೇರಿತನಾಗಿದ್ದರೆ ಅವನನ್ನು ವಿಮರ್ಶಕರ ಅಭಿಪ್ರಾಯಕ್ಕಿಂತಲೂ ಘನತರವಾದ ಕಪ್ಪು ಬಣ್ಣದಿಂದ ಚಿತ್ರಿಸಬೇಕಾಗಿತ್ತಲ್ಲವೆ? ಆದರೆ ಈ ಕೃತಿಯ ಉದ್ದೇಶ ತಾತ್ಕಾಲಿಕವಾದ ಹೊಟ್ಟೆಪಾಡಿನ ಕಚ್ಚಾಟದಲ್ಲಿ ಭಾಗವಹಿಸುವುದಲ್ಲ; ಚಿರಕಾಲದ ನಿತ್ಯಸತ್ಯಗಳನ್ನೂ ಶಾಶ್ವತವಾದ ರಸಾನುಭೂತಿಯನ್ನೂ ಸಹೃದಯರಿಗೆ ದಾನಮಾಡಿ, ಅವರನ್ನು ಜಾತಿ ಕುಲ ಧನ ಕ್ರಿಯಾದಿ ಭೇದವಿಲ್ಲದ ರಸಸುಖಿಗಳನ್ನಾಗಿ ಮಾಡುವುದು.

ಇನ್ನು "ಇಂತಹ ತಪ್ಪು ತಿಳಿವಳಿಕೆ ರಾಜ್ಯದಲ್ಲಿ ವ್ಯವಹಾರದಲ್ಲಿರಬೇಕಾದರೆ ಅದನ್ನು ತಿದ್ದುವ ಯತ್ನ ಮಾಡದೆ (ಈ ದೃಶ್ಯದಲ್ಲಿ ಶ್ರೀರಾಮನು ಮಾಡಿರುವುದು ಮತ್ತಾವ ಯತ್ನವೊ?) ತಾನು ಕಂಡ ಸತ್ಯವನ್ನು ತನ್ನ ನಡತೆಯಲ್ಲಿ ಮಾತ್ರ ಬಳಸುತ್ತಿರುವ ರಾಜ ಅಧೀರನೂ ಅನುದಾತ್ತನೂ ಆಗದೆ ವಿಧಿಯಿಲ್ಲ" ಎಂಬ ಮಾತೂ, " ಈ ದೃಶ್ಯದಲ್ಲಿಯ ಕಲ್ಪನೆ ಒಟ್ಟಿನಲ್ಲಿ ಓದುವವರ ಮನಸ್ಸಿನಲ್ಲಿ ಅತೃಪ್ತಿಯನ್ನು (ಜಾತಿಮಾತ್ಸರ್ಯ ಕಾರಣವಾಗಿಯೇ ಎಂಬ ಪ್ರಶ್ನೆ ಮೂಡುತ್ತದೆ) ಉಂಟುಮಾಡುತ್ತದೆ" ಎಂಬುದೂ ವಿಮರ್ಶಕರ ಸ್ವಂತ ಕಾರಣಕ್ಕಾಗಿ ನೊಂದ ಮನಸ್ಸಿನ ಉದ್ರೇಕದ ಅಭಿಪ್ರಾಯಗಳೆಂದು ಭಾವಿಸಬೇಕಾಗುತ್ತದೆ. ಏಕೆಂದರೆ ಈ ಲೇಖಕನ ಕಣ್ಣಿಗೂ ಕಿವಿಗೂ ಬೇರೆಯ ತರಹದ ತೀರ ಭಿನ್ನವಾದ ಅಭಿಪ್ರಾಯಗಳೂ ಬಿದ್ದಿವೆ.

ವಿಮರ್ಶಕರ ಇನ್ನೊಂದು ಟೀಕೆ ಸಾಹಿತ್ಯ ರಚನಾಮೀಮಾಂಸೆಗೆ ಸಂಬಂಧಪಟ್ಟದ್ದು: "ವಕ್ರ ದೃಷ್ಟಿಯ ಹಿಂದಿನ ಕಥೆಯನ್ನು ತಿದ್ದುವೆವೆಂದು ಹೋಗುವುದು ಬೇರೆಯವರು ಹಾಕಿದ ನೆಲಗಟ್ಟಿನ ಮೇಲೆ ನಮ್ಮ ಮನಸ್ಸಿಗೆ ಒಪ್ಪುವ ಭವನವನ್ನು ಕಟ್ಟುವೆವೆನ್ನುವ ಪ್ರಯತ್ನದಂತೆ. ಇಂದು ನಾವು ಏನು ಮಾಡಿದರೂ ಹಿಂದಿನ ಗೀರು ಇದ್ದೇ ಇರುತ್ತದೆ. ಹೊಸಕಾಲದ ಧರ್ಮವನ್ನು ಹೇಳುವುದಕ್ಕೆ ಹೊಸ ಕಥೆಯನ್ನೇ ಹೇಳುವುದು ಕ್ಷೇಮ ಎಂದು ನಾನು ಶ್ರೀ ಪುಟ್ಟಪ್ಪನವರಿಗೆ ಸೂಚಿಸುತ್ತೇನೆ."*

ಈ ಟೀಕೆ ಮತ್ತು ಸೂಚನೆ ಅತ್ಯಂತ ಆಶ್ಚರ್ಯಕರವೂ ಹಾಸ್ಯಾಸ್ಪದವೂ ಆಗಿ ತೋರುತ್ತವೆ. 'ಅತ್ತ ಪುಲಿ ಇತ್ತ ದರಿ!' ಹೊಸ ಕಾಲದ ಹೊಸ ಧರ್ಮವನ್ನು ಹೇಳಲು ಹೊಸ ಕಥೆಯನ್ನು ಕಟ್ಟಿದರೆ ಸಜೀವವಾದ ಜಾತಿವಿದ್ವೇಷದ ಉದ್ರೇಕಭೂತಗಳನ್ನು ಎಬ್ಬಿಸುತ್ತದೆ. ಆ ಸ್ಥಳದವರೂ ಈ ಮಠದವರೂ ಆ ಜಾತಿಯವರೂ ಈ ಕೋಮಿನವರೂ ಕೋರ್ಟಿಗೆ ಹೋಗುತ್ತೇವೆ ಎನ್ನುತ್ತಾರೆ. ಆ ರಗಳೆಯೆ ಬೇಡವೆಂದು ಹಳೆಯ ಕಥೆಗಳ ಅಳವಡಿಸಿಕೊಂಡರೆ ವಿಮರ್ಶಕರು ನಮ್ಮ "ಕ್ಷೇಮ"ದ ವಿಚಾರವಾಗಿ ಕಾತರರಾಗಿ ಸೂಚನೆ ಕೊಡಹೋಗುತ್ತಾರೆ. ಎಂತಹ ವಿಚಿತ್ರ ಸನ್ನಿವೇಶ–ಸಾಹಿತ್ಯದ ಸಮಾಧಿಗೆ! ಅದಿರಲಿ. ಈ ದೃಶ್ಯದಲ್ಲಿರುವುದೇನೂ ಹೊಸದಾದ ತತ್ತ್ವವಲ್ಲ. ಅತ್ಯಂತ ಪ್ರಾಚೀನವಾದುದು, ನಿತ್ಯವಾದುದು, ಅನಾದಿಯಾದುದು. ತಪಸ್ಸು ಶಕ್ತಿಯುಕ್ತವಾದುದು. "ತಪಂ ಪೂಜ್ಯಕರ್ಮಂ" "ತಪಕ್ಕೆಣೆಯುಂಟೆ?" "ತಪಂ ತಾನಿರ್ಪೆಡೆಯೊಳೆ ದೂರ ಕರ್ಮಿ" ಮೊದಲಾದ ತತ್ತ್ವಗಳು ನಿತ್ಯ ಸತ್ಯಗಳು. ಆದ್ದರಿಂದ ಹೊಸ ತತ್ತ್ವದ ಮಾತೆತ್ತುವುದು ಭ್ರಾಂತಿ.

ಅಲ್ಲದೆ ಹಳೆಯ ಕಥೆಯನ್ನು ಹೊಸ ಸಾಹಿತಿ ತನ್ನ ಕೃತಿಗೆ ತನ್ನಿಷ್ಟದಂತೆ ಉಪಯೋಗಿಸಿಕೊಳ್ಳುವ ಪದ್ಧತಿಯೂ ಮಹಾಕವಿ ಸಂಪ್ರದಾಯ ಸಿದ್ಧವಾದುದು. ನಾನು ತಪ್ಪಿದರೂ ಕಾಳಿದಾಸ, ಭಾಸ, ಪಂಪ, ಕುಮಾರವ್ಯಾಸಾದಿಗಳೊಡನೆ ತಪ್ಪಿದ್ದೇನೆ. ಮಹಿಮರೊಡನೆ ತಪ್ಪಿದರೆ ಆ ತಪ್ಪು ನನಗೊಪ್ಪು. "ಸತ್ಸಂಗಜಾನಿ ನಿಧನಾನ್ಯಪಿ ತಾರಯಂತಿ" ಎಂದಿಲ್ಲವೆ ಭವಭೂತಿ.*

ಇಲ್ಲ, ಅದೆಂದಿಗೂ ತಪ್ಪಲ್ಲ, ಉತ್ತಮ ವಿಮರ್ಶೆ ಅದನ್ನಾವಾಗಲೂ ಶ್ಲಾಘಿಸಿದೆ. ಹಿಂದೊಮ್ಮೆ ಈ ವಿಮರ್ಶೆಯ ಲೇಖಕರೇ ಗಯಟೆಯ ಮಾತುಗಳಲ್ಲಿ ಅದನ್ನು ಸಮರ್ಥಿಸಿದ್ದಾರೆಂದು ನನ್ನ ನೆನಪು. ಹೇಗೂ ಆಗಲಿ. ನನ್ನ ಕ್ಷೇಮದ ವಿಚಾರವಾಗಿ ಕಾತರರಾಗಿರುವ ಹಿರಿಯರಿಗೆ ಕೃತಜ್ಞನಾದರೂ ಅವರ ಈ ಸೂಚನೆಯನ್ನು ಸ್ವೀಕರಿಸುವ ಸ್ಥಿತಿಯಿಂದ ನಾನು ಬಹುದೂರ ಮುಂದುವರಿದಾಗಿದೆ ಎಂದು ವಿನಯದಿಂದ ಸೂಚಿಸುತ್ತೇನೆ. ಕಾರಣ, ಹತ್ತು ಹನ್ನೆರಡು ವರ್ಷಗಳ ಹಿಂದೆಯೆ ಹಳೆಯ ಕಥೆಯಾದ ರಾಮಾಯಣವನ್ನು ನನ್ನ ಮಹಾಕಾವ್ಯದ ಭಗವದ್ ವಿಷಯವನ್ನಾಗಿ ಆರಿಸಿಕೊಂಡು, ನಿತ್ಯ ಸತ್ಯಗಳ ದೃಷ್ಟಿಯಿಂದ ಸರಿಯೆಂದು ಸರಸ್ವತಿ ನನಗೆ ತೋರಿಸಿದ ಮಾರ್ಗದಲ್ಲಿ ಬದಲಾವಣೆ ಮಾಡಿಕೊಂಡು, ಗುರುಕೃಪೆಯಿಂದ ಹಾಡಿ ಮುಗಿಸಿಬಿಟ್ಟಿದ್ದೇನೆ.

---

*ಶ್ರೀ ಕಾರಂತರು ಬರೆದಿದ್ದರೆ? ಅಥವಾ ಶ್ರೀರಂಗರೋ ಶ್ರೀ ಗೊರೂರು ರಾಮಸ್ವಾಮಿ ಐಯಂಗಾರರೋ ಬರೆದಿದ್ದರೆ?- ವಿಮರ್ಶಕರು ಕೃತಿಯ ಮೇಲೆ ಅಚ್ಚಾಗಿರುವ ಕೃತಿಕಾರನ ಕಾವ್ಯನಾಮವನ್ನು ಬಳಸಿದ್ದರೆ ಚೆನ್ನಾಗಿತ್ತು. ಬಹುಶಃ ಕವಿ ಬ್ರಾಹ್ಮಣೇತರ ಎಂಬರಿವಿನಿಂದ ಬ್ರಾಹ್ಮಣನಿಂದೆಗಾಗಿಯೋ ಕುಚೋದ್ಯಕ್ಕಾಗಿಯೋ ಕೃತಿ ರಚಿತವಾಗಿದೆ ಎಂಬ ವಿಕೃತಭಾವನೆಯಿಂದ ವಿಮರ್ಶೆ ಕಲುಷಿತವಾಗುವುದು ತಪ್ಪುತ್ತಿತ್ತೇನೋ!

ಅಲ್ಲದೆ ವಿಮರ್ಶಕರ ಸೂಚನೆಯಂತೆ ನಡೆದುಕೊಂಡಿದ್ದರೆ "ಬೆರಳ್‌ಗೆ ಕೊರಳ್" ಹುಟ್ಟುತ್ತಿರಲಿಲ್ಲ; "ಯಮನ ಸೋಲು" "ಶ್ಮಶಾನ ಕುರುಕ್ಷೇತ್ರಂ", "ವಾಲ್ಮೀಕಿಯ ಭಾಗ್ಯ" ಎಲ್ಲವನ್ನೂ ಇಲ್ಲಗೈಯಬೇಕಾಗುತಿತ್ತು.

ಪುರಾಣಗಳನ್ನು ಪ್ರತಿಮಾ ದೃಷ್ಟಿಯಿಂದ ನೋಡದೆ ಪ್ರತಿಕೃತಿಯ ದೃಷ್ಟಿಯಿಂದ ನೋಡಿದರೆ ಈ ತರಹದ ಅನರ್ಥವಿಮರ್ಶೆ ಸಿದ್ಧವಾಗುತ್ತದೆ. ಪುರಾಣಗಳೆಂದರೆ ಸೂಕ್ಷ್ಮತರವಾದ ನಿತ್ಯಸತ್ಯಗಳಿಗೆ ಮಾನವಮತಿ ಕೆತ್ತಿರುವ ಸ್ಥೂಲವೂ ಸದೋಷವೂ ಆದ ಕಥಾಪ್ರತಿಮೆಗಳು. ಆದ್ದರಿಂದ ನಿತ್ಯಸತ್ಯಗಳಿಗೆ ಭಂಗಬಾರದಂತೆ ಆ ಕಥಾಪ್ರತಿಮೆಗಳನ್ನು ಆಯಾ ಕಾಲದ ಮನೋಧರ್ಮಕ್ಕನುಗುಣವಾಗಿ ತಮ್ಮ ತಮ್ಮ ಶಕ್ತಿ ಸಂಸ್ಕಾರ ಧೈರ್ಯ ದರ್ಶನಗಳ ಅಭಿವೃದ್ಧಿಗೆ ಅನುಕೂಲವಾಗುವಂತೆ ಕವಿಗಳು ಮಾರ್ಪಡಿಸಿಕೊಂಡು ಸಾಹಿತ್ಯ ಸೃಷ್ಟಿಮಾಡುವುದು ಅತ್ಯಂತ ಆವಶ್ಯಕ ಎಂದು ಒತ್ತಿ ಹೇಳಬಯಸುತ್ತೇನೆ.

ಕೊನೆಯಲ್ಲಿ ಕೃತಿಯ ಛಂದಸ್ಸು ಭಾಷೆ ಇವುಗಳ ವಿಚಾರದಲ್ಲಿ ಒಂದೆರಡು ಟೀಕೆ ಮಾಡಿದ್ದಾರೆ. ಆ ಟೀಕೆಯಲ್ಲಿ ಅವರಿಗೆ ಅದಾವುದೂ ನನ್ನ ರೀತಿಯಲ್ಲಿ ಗ್ರಹಿಕೆಯಾಗಿಲ್ಲ ಎಂಬುದು ಮಾತ್ರ ಎದ್ದು ಕಾಣುತ್ತದೆ. ತಮ್ಮ ರೀತಿಯನ್ನೆ ನನ್ನಲ್ಲಿ ಕಾಣ ಬಯಸಿ ಆ ರೀತಿಯಿಂದ ಈ ರೀತಿಯನ್ನು ಅಳೆಯಹೋಗಿ ತಪ್ಪಿದ್ದಾರೆ. ನಮ್ಮಿಬ್ಬರ ರೀತಿಗಳು ಮೂಲತಃ ಬೇರೆ ಬೇರೆ. ಪರಿಹಾಸ್ಯ ಲವಲೇಶದ ಉದ್ದೇಶವೂ ಇಲ್ಲದೆ ನನ್ನ ಅಭಿಪ್ರಾಯ ಸ್ಪಷ್ಟೀಕರಣ ಮಾತ್ರಕ್ಕಾಗಿ ಹೇಳುವುದಾದರೆ, ಹಾರುವ ಹಕ್ಕಿ ಕುಪ್ಪಳಿಸುವ ಹಕ್ಕಿಯನ್ನಾಗಲಿ, ಕಾಂಗರು ಹರಿಣಚರಣ ವಿನ್ಯಾಸವನ್ನಾಗಲಿ ತಮ್ಮ ತಮ್ಮ ಗಮನ ಮಾನದಿಂದ ಪರಿಶೀಲಿಸಿದರೆ ಛಂದೋನಿಯಮವೇನೂ ಇಲ್ಲದಂತೆಯೋ ಅಥವಾ ತಪ್ಪಿದಂತೆಯೋ ಕಾಣಬಹುದು. ಆದರೂ ಜಿಂಕೆ ಓಡಿದಾಗ, ಹಕ್ಕಿ ಹಾರಿದಾಗ ಆದರ ನೆಲಛಂದಸ್ಸು ಇದರ ಬಾನ್‌ಛಂದಸ್ಸು ಪ್ರತ್ಯಕ್ಷವಾಗಿ, ಮನಸ್ಸಿಗೆ ತೃಪ್ತಿಯಾಗುವುದರಲ್ಲಿ ಸಂದೇಹವಿಲ್ಲ.

---

*ನಮ್ಮ ದೇಶದಲ್ಲಿ ನಮ್ಮ ಪುರಾಣ ಕಥೆಗಳು ವಸ್ತುಸಂಗ್ರಹ ಶಾಲೆಯ ನಿರ್ಜೀವಪ್ರಾಣಿಗಳಂತಿಲ್ಲ. ಅವು ಸಜೀವಶಕ್ತಿಗಳಾಗಿ ನಮ್ಮ ಜನರ ನಂಬುಗೆ ಆಶೆ ಆಕಾಂಕ್ಷೆ ಸಂಸ್ಕೃತಿಗಳನ್ನು ಪೋಷಿಸುತ್ತಿವೆ. ಕ್ರೈಸ್ತ ಮತವನ್ನು ಒಪ್ಪಿಕೊಂಡಿರುವ ಇಂಗ್ಲೆಂಡಿನಲ್ಲಿ ಗ್ರೀಕ್ ಪುರಾಣಕಥೆ ಪೂಜ್ಯವಲ್ಲ; ಅಥವಾ ಹೋಮರ್ ವಾಲ್ಮೀಕಿಯಂತೆ ಮಹರ್ಷಿ ಅಲ್ಲ. ಅಲ್ಲಿರುವ ಕಥೆಗಳಿಂದಾಗಲಿ ಅಲ್ಲಿ ಬರುವ ವ್ಯಕ್ತಿಗಳ ನಡತೆಯಿಂದಾಗಲಿ ಇಂಗ್ಲಿಷ್ ಜನ ತಮ್ಮ ನಿತ್ಯಜೀವನದ ಮತೀಯ ಮತ್ತು ಸಾಮಾಜಿಕ ಚೇಷ್ಟಿತಗಳನ್ನು ನಿರ್ಣಯಿಸುವ ಅಂಧಶ್ರದ್ಧೆಗೆ ಶರಣಾಗುವುದಿಲ್ಲ. ಆದರೆ ನಮ್ಮಲ್ಲಿ ರಾಮಾಯಣದಲ್ಲಿ ಬರುವ ಕಥೆ ಎಂದು ಹರಿಕಥೆ ಮಾಡಿಬಿಟ್ಟರೆ ಮುಂದೆ ಅದನ್ನು ವಿಚಾರಿಸುವ ಗೋಜಿಗೇ ಹೋಗದೆ ಅದರಂತೆ ಆಚರಿಸಲು ಮನಸ್ಸಿನಲ್ಲಾದರೂ ಒಪ್ಪಿಬಿಡುತ್ತಾರೆ. ಆದ್ದರಿಂದ ಅಂತಹ ತಪ್ಪುದೃಷ್ಟಿ ಕೊಡುವ ಕಥೆಗಳನ್ನು ಹೊಸ ದೃಷ್ಟಿಗೆ ತಿದ್ದಿ ಅಳವಡಿಸಿ ಪ್ರಚಾರಮಾಡುವುದು ಸಮಾಜ ಶ್ರೇಯಸ್ಸಿಗೆ ಬಹಳ ಅಗತ್ಯವಾಗುತ್ತದೆ.

ಕೊನೆಯದಾಗಿ ವಿಮರ್ಶಕರೇ ಹೇಳಿರುವ ಲೋಕೋತ್ತರವಾದ ಮಾತುಗಳನ್ನು ಮತ್ತೊಮ್ಮೆ ಇಲ್ಲಿ ಒತ್ತಿ ಹೇಳುತ್ತೇನೆ : ‘‘ಜಾತಿ ಕುಲದ ಮಾತು ಬಂದಾಗ ಮನಸ್ಸನ್ನು ಉದ್ರೇಕಕ್ಕೆ ಬಿಡದೆ ಸಮಾಧಾನದಿಂದ ಚರ್ಚಿಸುವ ಒಲುಮೆ ಸಮಾಜದ ಶ್ರೇಯಸ್ಸಿನ ಮುಖ್ಯ ಸಾಧನಗಳಲ್ಲಿ ಒಂದು.’’ ಸಾಹಿತ್ಯದಲ್ಲಂತೂ ಅಂತಹ ಪಕ್ಷೋದ್ರೇಕ ನಿಜವಾಗಿ ಅನರ್ಥಕರ, ಹಾನಿಕರ, ರಸಭಂಗಕರ: ಕೃತಿಕಾರನ ಮೇಲೆ ಉಕ್ಕುವ ದ್ವೇಷಾಸೂಯೆಗಳಿಂದ ಕೃತಿಸಮಸ್ತವೂ ದ್ವೇಷಪೂರ್ಣ, ವಿಷಮಯ, ನೀರಸ, ಅಧಮ ಎಂಬಂತೆ ತೋರಿ, ಕಲೆಯ ಉದ್ದೇಶವೆ ಕೊಲೆಹೋಗುತ್ತದೆ. ಕನ್ನಡಕ್ಕೆ ಅಂತಹ ದುರ್ಗತಿ ಒದಗದಿರಲಿ.

ಮೈಸೂರು
೨೪-೭-೧೯೪೭ **ಕುವೆಂಪು**

ಬೆರಳ್ ಗೆ ಕೊರಳ್ - ಟಿಪ್ಪಣಿಕೆ

ಮಹಾಭಾರತದಲ್ಲಿ ಏಕಲವ್ಯನ ಕಥೆ:

ದ್ರೋಣನ ಕೀರ್ತಿಯನ್ನು ಕೇಳಿ ಅವನಿಗೆ ಶಿಷ್ಯರಾಗಿ ಬಂದವರಲ್ಲಿ ಏಕಲವ್ಯನೂ ಒಬ್ಬ. ಅವನು ವ್ಯಾಧನ ಮಗ. ಆ ಕಾರಣದಿಂದ ದ್ರೋಣನು ಅವನನ್ನು ಶಿಷ್ಯನನ್ನಾಗಿ ತೆಗೆದುಕೊಳ್ಳಲಿಲ್ಲ. ಆದರೆ ಏಕಲವ್ಯ ಅಷ್ಟರಿಂದ ನಿರಾಶನಾಗಲಿಲ್ಲ. ಕಾಡಿಗೆ ಹೋಗಿ ಮಣ್ಣಿನಿಂದ ದ್ರೋಣನ ವಿಗ್ರಹವನ್ನು ನಿರ್ಮಿಸಿಕೊಂಡು, ಆ ವಿಗ್ರಹದಲ್ಲಿ ದ್ರೋಣನ ಪ್ರತಿಬಿಂಬವನ್ನು ಕಂಡು ಅದಕ್ಕೆ ಗುರುಸೇವೆ ಸಲ್ಲಿಸುತ್ತ ಶಸ್ತ್ರಾಭ್ಯಾಸಕ್ಕೆ ತೊಡಗಿದನು. ಕೆಲವು ದಿನಗಳಲ್ಲಿಯೆ ಅವನು ಬಾಣಪ್ರಯೋಗದಲ್ಲಿ ಪಾರಂಗತನಾದನು.

ಒಮ್ಮೆ ಕೌರವರೂ ಪಾಂಡವರೂ ಬೇಟೆಗಾಗಿ ಕಾಡಿಗೆ ಹೋದರು. ಒಬ್ಬ ಆಳು ಒಂದು ನಾಯಿಯನ್ನು ಹಿಡಿದುಕೊಂಡು ಅವರ ಹಿಂದೆ ಹೋದನು. ಆ ನಾಯಿ ಏಕಲವ್ಯನನ್ನು ಕಂಡು ಬೊಗಳಿತು. ಅವನು ಆ ನಾಯಿಯ ಬಾಯೊಳಕ್ಕೆ ಒಟ್ಟಿಗೆ ಬಾಣಗಳನ್ನು ಹೊಡೆದನು. ನಾಯಿ ಪಾಂಡವರ ಹತ್ತಿರ ಓಡಿಹೋಯಿತು. ಅದರ ಬಾಯೊಳಗೆ ಇದ್ದ ಬಾಣಗಳನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ಅಂಥ ಕೈಚಳಕವುಳ್ಳವನು ಯಾರಿರಬಹುದೆಂದು ಹುಡುಕುತ್ತ ಬಂದು ಏಕಲವ್ಯನನ್ನು ಕಂಡರು. ಅವರು ಅವನನ್ನು ಪ್ರಶ್ನಿಸಿ ಅವನು ನಿಷಾದರಾಜನಾದ ಹಿರಣ್ಯಧನುಷನ ಮಗನೆಂದೂ, ದ್ರೋಣಾಚಾರ್ಯರ ಶಿಷ್ಯನೆಂದೂ ಅರಿತರು. ಧನುರ್ವಿದ್ಯೆಯಲ್ಲಿ ತನ್ನನ್ನು ಮೀರಿಸಿದ ಬೇರೊಬ್ಬ ವ್ಯಕ್ತಿಯಿದ್ದುದನ್ನು ನೋಡಿ ಅರ್ಜುನನು ವ್ಯಾಕುಲಭರಿತನಾದನು. ಊರಿಗೆ ಹೋದ ಕೂಡಲೆ ರಹಸ್ಯವಾಗಿ ದ್ರೋಣರ ಬಳಿಗೆ ಹೋಗಿ ''ಗುರುವೆ, ಧನುರ್ವಿದ್ಯೆಯಲ್ಲಿ ನನ್ನನ್ನು ಬೇರೆ ಯಾವ ಶಿಷ್ಯನೂ ಮೀರಿಸಲಾರನು ಎಂದು ವಚನಕೊಟ್ಟಿದ್ದಿರಿ. ಆದರೆ ಕಾಡಿನಲ್ಲಿ ನಿಮ್ಮ ಶಿಷ್ಯ ಒಬ್ಬ ಇದ್ದಾನೆ. ಅವನು ವ್ಯಾಧ'' ಎಂದನು. ದ್ರೋಣ ಮರುಮಾತಾಡದೆ ಅರ್ಜುನನನ್ನು ಕೂಡಿಕೊಂಡು ಅರಣ್ಯಕ್ಕೆ ಹೋದನು. ಗುರುವನ್ನು ಕಂಡೊಡನೆಯೆ ಏಕಲವ್ಯ ನಮಸ್ಕಾರಮಾಡಿ ಅವರ ನಾಮಸ್ಮರಣೆಯ ಮಹಿಮೆಯಿಂದಲೆ ತಾನು ಅಸ್ತ್ರವಿದ್ಯೆಯಲ್ಲಿ ಪಾರಂಗತನಾದೆನೆಂದು ಹೇಳಿಕೊಂಡನು. ''ನೀನು ನನ್ನ ಶಿಷ್ಯನಾದರೆ ಗುರುದಕ್ಷಿಣೆಯೆಲ್ಲಿ?'' ಎಂದು ಗುರು ಕೇಳಿದನು. ''ನನ್ನದು

ಯಾವುದೂ ಇಲ್ಲ. ಸಮಸ್ತವೂ ತಮ್ಮದೆ. ತಾವು ಏನು ಕೊಡಬೇಕೆಂದು ಆಜ್ಞಾಪಿಸುವಿರೋ ಅದನ್ನು ಕೊಡುತ್ತೇನೆ'' ಎಂದು ಏಕಲವ್ಯನು ಉತ್ತರಿಸಿದನು. ''ಹಾಗಾದರೆ ನಿನ್ನ ಬಲಗೈಯ ಹೆಬ್ಬೆರಳನ್ನು ಕೊಡು'' ಎಂದನು ದ್ರೋಣ. ಏಕಲವ್ಯ ಹಿಂದುಮುಂದು ಆಲೋಚಿಸಲಿಲ್ಲ, ವ್ಯಾಕುಲಗೊಳ್ಳಲಿಲ್ಲ. ಕೂಡಲೆ ತನ್ನ ಬೆರಳನ್ನು ಕತ್ತರಿಸಿ ಕೊಟ್ಟನು. ಇದರಿಂದ ಅರ್ಜುನನಿಗೆ ಸಂತೋಷವಾಯಿತು; ದ್ರೋಣನು ಕೊಟ್ಟ ಮಾತೂ ಉಳಿಯಿತು.

ಬೆರಳ್ ಗೆ ಕೊರಳ್ ನಾಟಕ:

ಮಹಾಭಾರತದ ಮಹಾಸಾಗರದಲ್ಲೊಂದು ಹನಿಯಾಗಿ, ಅಲ್ಲಿಯ ಕೋಲಾಹಲದ ನಡುವೆ ಸುಳಿದು ಮರೆಯಾಗುವ ಏಕಲವ್ಯನ ಉಪಾಖ್ಯಾನ ಇಲ್ಲಿ ದಾರ್ಶನಿಕ ನಾಟಕವಾಗಿ ಪರಿಣಮಿಸಿದೆ. ಅಲ್ಲಿ ಇಂಗಿತವಾಗಿ ಅಪ್ರಕಟರೂಪದಲ್ಲಿ ಇರುವ ಮಹತ್ತು ಇಲ್ಲಿ ಸುಪ್ರಕಟವಾಗಿ ತನ್ನ ಪರಿಣತಾವಸ್ಥೆಯಲ್ಲಿ ಗೋಚರವಾಗುತ್ತದೆ. ಗುರುಶಿಷ್ಯ ಸಂಬಂಧವಾದ ತತ್ತ್ವ, ಕರ್ಮತತ್ತ್ವ ಮತ್ತು ಸಮರ್ಪಣ ರೂಪವಾದ ಯಜ್ಞತತ್ತ್ವಗಳು ಇಲ್ಲಿ ಪ್ರತಿಮಾವಿಧಾನದಿಂದ ಧ್ವನಿತವಾಗಿವೆ. ಆ ತತ್ತ್ವಗಳು ಏಕಲವ್ಯ ದ್ರೋಣರ ಮುಖಾಂತರ ಮೈದೋರಿದ್ದರೂ ಅವು ವ್ಯಕ್ತಿತ್ವಕ್ಕೆ ಅತೀತವಾಗಿ ನಿತ್ಯವಾದುವು. ಅವರು ಆ ತತ್ತ್ವಗಳನ್ನು ಪ್ರಕಟಿಸುವುದರಲ್ಲಿ ವಿಶಿಷ್ಟ ಪಾತ್ರಗಳು ಮಾತ್ರ. ಆ ಮೂರು ತತ್ತ್ವಗಳ ಸ್ವರೂಪದ ರೂಪರೇಖೆಯನ್ನು ಈ ಕೆಳಗೆ ಕಾಣಿಸಿದೆ.

ಗುರುತತ್ತ್ವ :

ಗುರುಶಿಷ್ಯರಿಬ್ಬರೂ ಪರಸ್ಪರ ಪೂರಕವಾದವರು. ಗುರು ವಿದ್ಯಾಶಕ್ತಿ ಹರಿಯುವ ಪಾತ್ರ; ಶಿಷ್ಯ ವಿದ್ಯಾಶಕ್ತಿಯನ್ನು ಸ್ವೀಕರಿಸುವ ಅವಿದ್ಯೆಯ ಪಾತ್ರ. ನರರೂಪದ ವ್ಯಕ್ತಿಯನ್ನು ಗುರುವನ್ನಾಗಿ ಸ್ವೀಕರಿಸಿದ ಮೇಲೆ ಶಿಷ್ಯನು ಸದಾ ಅವನನ್ನು ಶ್ರದ್ಧಾಭಕ್ತಿಗಳಿಂದ ಪೂಜಿಸಬೇಕು.* ಗುರುವಿನ ಅರ್ಹತೆ ಎಂತಹುದೆ ಆಗಿರಲಿ ಶಿಷ್ಯನು ಆತನಲ್ಲಿ ಸರ್ವಪರಿಪೂರ್ಣನಾದ ಜಗದ್ಗುರುವನ್ನೆ ಕಾಣುತ್ತಾನೆ. ನರಗುರು ನಿಮಿತ್ತಮಾತ್ರ. ಆ ನರಗುರುವಿನ ವ್ಯಕ್ತಿತ್ವದಲ್ಲಿ ಇರಬಹುದಾದ ಇತಿಮಿತಿಗಳ ಕಡೆಗೆ ಅವನ ಗಮನ ಹರಿಯಬೇಕಾದುದು ಅಗತ್ಯವಲ್ಲ. ಅವನ ಗುರಿ ಶ್ರದ್ಧೆಯಿಂದಲ್ಲದೆ ಕೈಗೂಡುವುದಿಲ್ಲ.[1] ಅವನ ನಿಷ್ಠೆಗೆ ಅನುಗುಣವಾದ ಆಧ್ಯಾತ್ಮಿಕ ಪುಷ್ಟಿ ದೊರಕುತ್ತದೆ.

---

*ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ (ಗೀತಾ. ೪-೩೯)

ಶಿಷ್ಯನ ಶ್ರದ್ಧೆ ಹೆಚ್ಚಿದಂತೆಲ್ಲ ಅವನ ಅವಿದ್ಯೆ ಕ್ಷೀಣತರವಾಗಿ ನರದೇಹಿಯಾದ ಗುರುವಿನಲ್ಲಿ ಪರಾತ್ಪರ ವಸ್ತುವನ್ನೆ ಕಾಣುತ್ತಾನೆ. ಆಗ ಆ ಗುರುವಿನ ಪಾರ್ಥಿವ ದೇಹ ಅವನ ಕಣ್ಮುಂದೆಯೆ ಇರಬೇಕಾಗಿಲ್ಲ. ಅವನು ಎಲ್ಲಿ ಹೋದರೂ ಎಲ್ಲಿದ್ದರೂ ಗುರುಕೃಪೆ ಕೆಲಸಮಾಡುತ್ತದೆ. ಜಾಗ್ರದವಸ್ಥೆಯಲ್ಲಿ ಮಾತ್ರವಲ್ಲ ಸ್ವಪ್ನಾವಸ್ಥೆಯಲ್ಲಿಯೂ ಆ ಶಕ್ತಿಮಹಿಮೆ ಗೋಚರಿಸುತ್ತದೆ. ಅವನ ಪ್ರತಿಯೊಂದು ಕರ್ಮವೂ ಶಕ್ತಿಯ ಉಪಾಸನೆಯಾಗುತ್ತದೆ. ಅವನ ಭೋಗ ಗುರುವಿಗೆ ಅರ್ಪಿಸುವ ನೈವೇದ್ಯವಾಗುತ್ತದೆ. ಅವನ ನಿದ್ರಾವಸ್ಥೆ ಸಮಾಧಿಯಾಗುತ್ತದೆ. ಅವನು ಆಡುವ ಮಾತು ಪ್ರಾರ್ಥನೆಯಾಗುತ್ತದೆ.* ಹೀಗೆ ಶಿಷ್ಯನ ಹೃದಯ ಗುರುವಿನ ಕಡೆ ಬಾಗಿ ಸಾಧನೆ ಮುಂಬರಿದಾಗ ಗುರುವಿನ ಸಂಪೂರ್ಣ ಕೃಪೆ ಶಿಷ್ಯನ ಕಡೆ ಹರಿಯುತ್ತದೆ.

ಪರಬ್ರಹ್ಮಸ್ವರೂಪಿಯಾದ ಗುರುಶಕ್ತಿ ಕೇವಲ ನರರೂಪದಲ್ಲಿಯೆ ಗೋಚರಿಸ ಬೇಕೆಂಬ ನಿಯಮವಿಲ್ಲ. ಅದು ಬೆಟ್ಟದಿಂದ ದುಮುಕುವ ಅಬ್ಬಿಯಾಗಿ, ಅಭ್ರಚುಂಬಿಯಾದ ವೃಕ್ಷವಾಗಿ, ಗಗನದಲ್ಲಿ ಮಿನುಗುವ ನಕ್ಷತ್ರವಾಗಿ, ಬೇಸಗೆಯ ಆಕಾಶದಲ್ಲಿ ಚಲಿಸುವ ತುಂಡುಮೋಡವಾಗಿ, ಜಡತನವನ್ನು ಪ್ರತಿಬಿಂಬಿಸುವ ಮೌನಶಿಲೆಯಾಗಿ, ಸೂರ್ಯೋದಯಾಸ್ತಗಳಾಗಿ– ನಾನಾ ರೂಪಗಳಲ್ಲಿ ಕಾಣಿಸಿಕೊಂಡು ಮಾನವನನ್ನು ಉದ್ಧರಿಸಬಹುದು; ಅವನ ಸ್ವಸ್ವರೂಪವನ್ನು ಆವರಿಸಿರುವ ಅವಿದ್ಯಾಯವನಿಕೆಯನ್ನು ಹೋಗಲಾಡಿಸಬಹುದು. ಯಾವ ರೂಪದಲ್ಲಿ ಶ್ರದ್ಧೆಯಿಂದ ಪೂಜಿಸಿದರೂ ಅದಕ್ಕೆ ತಕ್ಕ ಸಿದ್ಧಿ ಲಭಿಸುತ್ತದೆ.' ಶ್ರೀರಾಮಕೃಷ್ಣ ಪರಮಹಂಸರು ಹೇಳುವಂತೆ ಗುರುಕೃಪೆ ಬೀಸುವ ಗಾಳಿಯಿದ್ದಂತೆ, ಮಾನವರ ಹೃದಯಗಳು ಗಾಳಿಪಟಗಳಿದ್ದಂತೆ. ಯಾವಾಗ ಯಾರು ಬೇಕಾದರೂ ಗಾಳಿಪಟಗಳನ್ನು ಬಿಚ್ಚಿದರೆ ಅದರ ಫಲ ದೊರೆಯುತ್ತದೆ.

''ನಮ್ಮ ಭಕ್ತಿಗೆ ಮೆಚ್ಚುವಾ ಸಚ್ಚಿದಾನಂದಮೆ
ಜಗದ್ಗುರು, ಏಕಲವ್ಯ. ಬೇರೆ ಗುರುವುಂಟೆ?
ನರಗುರು ನಿಮಿತ್ತಮಾತ್ರನ್.''

---

*ಆತ್ಮಾ ತ್ವಂ ಗಿರಿಜಾ ಸಹಚರಾಃ ಪ್ರಾಣಾಃ ಶರೀರಂ ಗೃಹಂ
ಪೂಜಾ ತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿ ।
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾ ಗಿರೋ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್ ॥
– ಶ್ರೀ ಶಂಕರಾಚಾರ್ಯರ ಶಿವಮಾನಸಪೂಜಾ

' ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ (ಗೀತಾ. ೭-೨೧)
ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ
ನಾಯಂ ಲೋಕೋಽಸ್ತಿ ನ ಪರೋ ಸುಖಂ ಸಂಶಯಾತ್ಮನಃ (ಗೀತಾ. ೪-೪೦)

ಕರ್ಮ ತತ್ತ್ವ :

ಕರ್ಮ, ವಿಧಿ, ಈಶ್ವರೇಚ್ಛೆ-ಈ ಮೂರೂ ಅಭಿನ್ನ; ಒಂದೇ ತತ್ತ್ವದ ಮೂರು ಮುಖಗಳು. ಕರ್ಮಫಲಸ್ವರೂಪಿಯಾದ ಈಶ್ವರೇಚ್ಛೆಯ ಮುಂದೆ ಮನುಷ್ಯೇಚ್ಛೆ ಪ್ರತಿಭಟಿಸಿ ಗೆಲ್ಲಲಾರದು. ಗೆದ್ದರೂ ಅದರ ಅನುಮತಿಯಿಂದಲ್ಲದೆ ಅನ್ಯರೀತಿಯಿಂದಲ್ಲ. ಅದರ ಗತಿಯ ಮರ್ಮ ಮಾನವನ ಅಪೂರ್ಣದೃಷ್ಟಿಗೆ ನಿಲುಕದು.

> "ಜೀವಿಗಳ ಕರ್ಮ ಜಟಿಲತೆ, 2 ಏಕಲವ್ಯ, ಈ
> ಕುಟಿಲ ಕಾರ್ಯಂಗಳಿಗೆ ನಮ್ಮನ್ ನಿಯೋಜಿಪುದು,
> ದೇವನಿಚ್ಛೆಯ ದಿವ್ಯಲೀಲಾಪ್ರಯೋಜನಕೆ."

ಎನ್ನುವ ದ್ರೋಣನ ಮಾತಿನಲ್ಲಿ ಕರ್ಮಯೋಗತತ್ತ್ವವೂ ಅಡಕವಾಗಿವೆ.

ಯಜ್ಞ ತತ್ತ್ವ :

ಯಜ್ಞ ಸೃಷ್ಟಿಗೂ ಮೂಲವೆಂದು ವೇದ ಸಾರುತ್ತಿದೆ. ದೇವತೆಗಳು ನಡೆಸಿದ ಪುರುಷಯಜ್ಞದಿಂದ ಈ ವಿಶ್ವ ಸೃಷ್ಟಿಯಾಯಿತೆಂದು ಋಗ್ವೇದದ ಪುರುಷಸೂಕ್ತ ಹೇಳುತ್ತದೆ.* ಯಜ್ಞವೇ ಸೃಷ್ಟಿನಿಯತಿರೂಪದ ಋತಕ್ಕೂ ಮೂಲ. ಮಾನವ ತನ್ನದೆಂದು ಹೇಳಿಕೊಳ್ಳುವ ವಸ್ತು ಪ್ರಪಂಚದಲ್ಲಿ ಯಾವುದೂ ಇಲ್ಲ. ಅವನು ಸ್ವಾರ್ಥಕ್ಕಾಗಿ ಸಂಪಾದಿಸಿದ ಹಣ ಮೊದಲುಗೊಂಡು ಮುಕ್ತಿಗಾಗಿ ಮಾಡುವ ತಪಸ್ಸಿನ ತನಕ ಎಲ್ಲಕ್ಕೂ ಯಜ್ಞವೆ ಮೂಲ; ಕೊನೆಗೆ ಎಲ್ಲವೂ ಅದರಲ್ಲಿಯೆ ಲಯಹೊಂದಬೇಕು. ಒಟ್ಟಿನಲ್ಲಿ ಮಾನವನ ಸರ್ವಸಿದ್ಧಿ ಆ ಯಜ್ಞದಿಂದಲೆ ಲಭಿಸಬೇಕು.[1] ಕೆರೆಯ ನೀರನ್ನು ಕೆರೆಗೆ ಚೆಲ್ಲುವಂತೆ ಯಜ್ಞದಿಂದ ಬಂದುದನ್ನು

[1] ಇದರ ವಿವರಣೆಯನ್ನು ಮುಂದೆ ಕಾಣಬಹುದು.

*ಭಗವದ್ಗೀತೆಯ ಈ ಶ್ಲೋಕಗಳಲ್ಲಿಯೂ ಇದೇ ತಾತ್ಪರ್ಯ ಧ್ವನಿತವಾಗುತ್ತದೆ.
ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ
ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರ ಸಮುದ್ಭವಮ್
ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್. ೩=೧೪-೧೫

ಮತ್ತೆ ಯಜ್ಞರೂಪದಿಂದ ನಿವೇದಿಸದಿದ್ದರೆ ಮಾನವ ವಂಚಕನಾಗುತ್ತಾನೆ. [2]ಅವನಿಗೆ ತನ್ನ ಸಾಧನೆಯ ಪರಮಪ್ರಯೋಜನ ಸಿದ್ಧಿಸುವುದಿಲ್ಲ. ಒಟ್ಟಿನಲ್ಲಿ ನಿಷ್ಕಾಮವಾದ ಸ್ವಾರ್ಪಣವೆ ಯಜ್ಞವೆಂದು ಹೇಳಬಹುದು.

> ''ಭಗವದರ್ಪಿತಮಾಗೆ, ಸಾವುದುಂ ಬರ್ದುಕುವೊಲ್
> ಶ್ರೇಯಸ್ಕರಂ.''

ನಾಟಕದಲ್ಲಿ ಈ ತತ್ತ್ವಗಳು ಮೈದೋರಿರುವ ಬಗೆ :

ಮೇಲೆ ನಿರೂಪಿತವಾಗಿರುವ ಗುರು, ಕರ್ಮ ಮತ್ತು ಯಜ್ಞ ತತ್ತ್ವಗಳು ಈ ನಾಟಕದಲ್ಲಿ ಹೇಗೆ ಮೈದೋರಿವೆಯೆನ್ನುವುದನ್ನು ನೋಡಬಹುದು. ಏಕಲವ್ಯ ವ್ಯಾಧಪುತ್ರ. ದ್ರೋಣಮಹಿಮೆಯನ್ನು ಕೇಳಿ ಆತನಿಂದ ಬಿಲ್ ಬಿಜ್ಜೆಯನ್ನು ಕಲಿತು ಬರುವುದಾಗಿ ತಂದೆಯನ್ನು ಬೇಡುತ್ತಾನೆ.

> ''.......... ಅವರ್ ಪಾರ್ವರ್,
> ಬಿಯದರ್ಗೆ ಒವಜುಗೆಯ್ಯಲ್ಕೆ ಒಪ್ಪರ್,
> ನಿನ್ನನ್ ಗಹಗಹಿಸಿ ನಕ್ಕು ನೂಂಕುವರ್.''

ಎಂದು ತಂದೆ ಹೇಳುತ್ತಾನೆ. ಮಗ ತಂದೆಯ ಕಾಲು ಹಿಡಿದು ಎಂತಾದರೂ ಗುರುವನ್ನು ಒಪ್ಪಿಸಿ ಕಲಿತು ಬರುವೆನೆಂದು ದೈನ್ಯದಿಂದ ಬೇಡುತ್ತಾನೆ. ತಂದೆ ಕನಿಕರಿಸಿ ಹರಸಿ ಕಳುಹಿಸಿಕೊಡುತ್ತಾನೆ. ಅರಸರೂರಿನಲ್ಲಿ ಆ ಕಾಡನಿಗೆ ಕಣ್ ಕಟ್ಟಿದಂತಾಗುತ್ತದೆ. ಅವನ ಓರಗೆಯವನಾದ ಅಶ್ವತ್ಥಾಮನ ಸ್ನೇಹ ಅವನಿಗೆ ಪುಣ್ಯದಂತೆ ದೊರಕುತ್ತದೆ. ಅವನ ಮೂಲಕ ಗುರು ದ್ರೋಣನ ಪರಿಚಯವಾಗುತ್ತದೆ. ಅವನು ಶೂದ್ರನೆಂದು ದ್ರೋಣ ಅವನನ್ನು ತಿರಸ್ಕರಿಸಲಿಲ್ಲ.

> ''ಅಶ್ವತ್ಥಾಮ, ನಮ್ಮ ಚಟ್ಟರೊಳಿವನುಮೊರ್ವನ್;
> ನಿನ್ನ ನೇಗಿರಿಯನೆಂದೀತನನ್ ಕಾಣ್.''

ಎಂದು ಗುರು ಮಗನಿಗೆ ಹೇಳುವನು. ಆದರೆ ತಾನು 'ಅಸಾಮಾನ್ಯ'ನೆಂದು ಭಾವಿಸಿಕೊಂಡಿರುವ ಅರ್ಜುನನಿಗೆ ಆ ಸಾಮಾನ್ಯನ ಸಂಪರ್ಕ ಸಹ್ಯವೆನಿಸುವುದಿಲ್ಲ. ಏಕಲವ್ಯನು ವಿದ್ಯೆಯನ್ನು ಕಲಿತ ಮೇಲೆ ಪಾಂಡವರ ಸೇವೆಗೇ ನಿಲ್ಲುವನೆಂದು ಗುರು ಹೇಳಿದರೂ ಅರ್ಜುನನ ಅಸೂಯೆ ತಣಿಗೊಳ್ಳಲಿಲ್ಲ. ಆದ್ದರಿಂದ ದ್ರೋಣನು

1 ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ
ಅನೇನ ಪ್ರಸವಿಷ್ಯಧ್ವಮೇಷವೋಽಸ್ತ್ವಿಷ್ಟಕಾಮಧುಕ್ ೩-೧೦

2 ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ೩-೧೨.

ಏಕಲವ್ಯನನ್ನು ತನ್ನ ಮನೆಯಲ್ಲಿಯೆ ಇಟ್ಟುಕೊಂಡು ವಿದ್ಯೆ ಕಲಿಸುತ್ತಾನೆ. ವಿದ್ಯೆ ಸಾಗುತ್ತಿರುವಾಗಲೆ ತಂದೆಯ ದುರ್ಮರಣ ವಾರ್ತೆಯನ್ನು ಕೇಳಿ ಏಕಲವ್ಯನು ಗುರುವಿನ ಹರಕೆಯನ್ನು ಹೊತ್ತು ಮನೆಗೆ ಮರಳಬೇಕಾಗುತ್ತದೆ.

ಆದರೇನು? ದ್ರೋಣನ ಪಾರ್ಥಿವ ಶರೀರ ಹಿಂದೆ ನಿಂತರೂ ದ್ರೋಣಗುರು ಏಕಲವ್ಯನಲ್ಲಿ ಉದ್ಭವಿಸುತ್ತಾನೆ. ದಿನದಿನಕ್ಕೂ ಅವನ ಶ್ರದ್ಧಾಭಕ್ತಿಗಳು ವರ್ಧಿಸುತ್ತವೆ. ಆ ಶ್ರದ್ಧಾಭಕ್ತಿಗಳೆ ಅವನಿಗೆ ವಿದ್ಯಾಗವಾಕ್ಷವಾಗುತ್ತವೆ. ತಾನು ನಿಂತೆಡೆ ಕುಳಿತೆಡೆ ತನ್ನ ಸುತ್ತಮುತ್ತ ಆ ಗುರುಪ್ರತೀಕವನ್ನೆ ಕೊರೆದು ಸಾಧನೆಯಲ್ಲಿ ತೊಡಗುತ್ತಾನೆ. ಕ್ರಮೇಣ ಧನುರ್ವಿದ್ಯೆಯೆಲ್ಲ ವಶವಾಗುತ್ತದೆ.

ಹೀಗಿರುವಾಗ ಒಮ್ಮೆ ಅವನ ಅರಣ್ಯ ರಾಜ್ಯಕ್ಕೆ ಬಂದ ಅರ್ಜುನ ಏಕಲವ್ಯನ ಶಬ್ದವೇಧೀವಿದ್ಯೆಯನ್ನು ಕಂಡು ವಿಸ್ಮಯಗೊಂಡು ಬಿಲ್ವಿದ್ಯೆಯಲ್ಲಿ ತನ್ನನ್ನು ಮೀರಿಸಿದವನು ಮತ್ತೊಬ್ಬನಿದ್ದುದಕ್ಕೆ ಅಸೂಯೆಯಿಂದ ಖೇದಗೊಳ್ಳುತ್ತಾನೆ. ತಾನು ಅದ್ವಿತೀಯ, ನಾಗರೀಕ, ಸದ್ವಂಶಜ ಎಂದುಕೊಂಡಿದ್ದ 'ಬಿಂಕಗುಳಿ' ಅರ್ಜುನನ ಅಟ್ಟಹಾಸದ ಮಾತುಗಳಿಗೆ ಏಕಲವ್ಯ ವಿನೀತನಾಗಿ ಅಹಂಕಾರ ವರ್ಜ್ಯನಾಗಿ ಉತ್ತರ ಕೊಡುತ್ತಾನೆ. ಕಾಡನ ಮೇಲೆ ಕೈಮಾಡುವುದು ಅವಮಾನವೆಂದು ತಿಳಿದ ಆ ಅರ್ಜುನನ ಮಾತ್ಸರ್ಯ ಗುರುವನ್ನೆ ಕಾಡಿಗೆ ಎಳೆತರುತ್ತದೆ. ತನ್ನ ಗುರು, ಆತ್ಮಗುರು, ಲೋಕಗುರು ಬರುವನೆಂದು ಹಿಗ್ಗು ಏಕಲವ್ಯನಿಗೆ. ಆ ಘಟನೆ, ಏಕಲವ್ಯನ ಬಳಿಗೆ ದ್ರೋಣ ದೈಹಿಕವಾಗಿ ಆಗಮಿಸುತ್ತಾನೆ ಎಂಬರ್ಥದಲ್ಲಿ ಮಾತ್ರವೆ ಅಲ್ಲ, ಅದೊಂದು ಪೂರ್ಣಪ್ರತಿಮೆಯಾಗಿ ಜಗದ್ಗುರುವಿನ ಆವಿರ್ಭಾವವನ್ನು ಸೂಚಿಸುತ್ತದೆ.

ಗುರು ಬರುವ ದಿನ ಜಗತ್ತು ಎಚ್ಚರುವ ಮುನ್ನವೆ ಏಕಲವ್ಯ ಎದ್ದು ವ್ರತನಿಷ್ಠನಾಗಿ ಗುರುಪೂಜೆಗೆ ತೊಡಗಿದ್ದಾನೆ. ಪ್ರಶಾಂತ ಪ್ರಾತಃಕಾಲದ 'ಕತ್ತಲೆಯ ಬಸಿರ ಅಂತರಾಳ'ದಿಂದ ಅಬ್ಬಿಯ ಓಂಕಾರಶ್ರುತಿಯೊಡನೆ ಮಿಲನಗೊಂಡು ನಿರ್ಜನ ವನಪ್ರದೇಶದಲ್ಲಿ ಮಧುರತೆಯನ್ನೂ ಭಕ್ತಿಭಾವವನ್ನೂ ಉಕ್ಕಿಸುತ್ತಿರುವ ಗುರುಸ್ತೋತ್ರ ಕೇಳಬರುತ್ತದೆ.

> ''ಇಂದು ಗುರುವೈತಪ್ಪನೆನ್ನೀ ವನಸ್ಥಲಕೆ:
> ಪವಿತ್ರತರಮಪ್ಪುದೀ ಕಾಡುಮಲೆ ದಲ್ ದಿಟಂ,
> ಪೂಜ್ಯ ಗುರುಪದ ಧೂಳಿಯಿಂ'!!

ಎಂಬ ಭಾವವೊಂದೆ ಅವನ ಹೃದಯವನ್ನು ಆವರಿಸುತ್ತದೆ. ನಿಸರ್ಗವ್ಯಾಪಾರದಲ್ಲಿಯೂ ಅದೇ ಭಾವ ಪ್ರತಿಫಲಿತವಾಗಿರುವಂತೆ ಅವನಿಗೆ ಕಾಣುತ್ತದೆ:

''ಕಂದರದೊಳಲೆಯುತಿಹ ಮಂಜು ಮೋಡಂ, ನೋಡ,
ಗುರುವುಟ್ಟ ಧವಳೋತ್ತರೀಯದಂಚಲಮೆನಲ್
ಸಂಚಲಿಸುತಿಪ್ಪುದು ಕೆರಳ್ಚುತಾಕಾಂಕ್ಷೆಯಂ.
ಅಃ ಆಲಿಸಾ ಅಲೆಯುತಿಹ ಪರಪುಟ್ಟನಿಂಚರಂ
ಬೆಳ್ಳಂಗೆಡೆಯುವೀ ಅಬ್ಬಿಯೋಂಕಾರಮಂ ಮೀರ್ದು
ಸಾರುತಿಹುದಿಂಗಿತದಿ ಗುರುದೇವನಾಗಮನಮಂ!''

ಅವನು ಹೀಗೆ ಭಕ್ತಿಸಮಾಧಿಯಲ್ಲಿ ತಲ್ಲೀನನಾಗಿರುವಾಗ ಬೆನ್ನ ಹಿಂದೆ ದುಮುಕುತ್ತಿರುವ ಅಬ್ಬಿ ಹಿಂದಿನ ರಾತ್ರಿಯ ಕನಸನ್ನು ಕೆರಳಿಸಿ ಮುಂಬರಲಿರುವ ದುರ್ಘಟನೆಯನ್ನು ಅವನ ಅಂತರಾತ್ಮಕ್ಕೆ ಅಸ್ಪಷ್ಟವಾಗಿ ಸೂಚಿಸುತ್ತದೆ:

''ಓ ಲಾಸ್ಯಮಯಿ ನಿರ್ಝರಿಣಿ ನಿನಗಿದೊ ನಮಸ್ಕಾರ!
....
ನನ್ನ ಕಿವಿಗಿಂದಾವ ಮಂತ್ರವನಿಂತು ಘೋಷಿಸುವೆ?
ಕಾಲಗಹ್ವರ ಗುಹ್ಯಗರ್ಭದೊಳ್
ಸುರುಳಿ ಸುತ್ತಿರುವಾವ ವಿಧಿಯಂ ಮೊರೆದು ಕರೆದು
ಜಾಗ್ರತಂಗೊಳಿಸುವಂತಿಹೆ? ಪುಟ್ಟಿದಂದಿಂ ತೊಟ್ಟು
ನಿನ್ನ ಜೋಗುಳವೆನ್ನ ತೊಟ್ಟಿಲಂ ತೂಗಿರ್ಪುದಾದೊಡಂ
ನಿನ್ನ ನೀರ್ಗೊರಲಿಂದು ಬೇರೆಯೆಂಬಂದದಿಂ
ಹೃದಯಮಸ್ಥಿರಮಾಗೆ ಸಾರುತಿಹುದಾದೇಶಮಂ.''

ಈ ಶಕುನದ ಮುನ್‌ಸೂಚನೆಗೆ ತುಸು ಹೊತ್ತು ಚಿಂತಾಮಗ್ನನಾದವನು ಕೂಡಲೆ ಎಚ್ಚತ್ತು, ಗುರು ಬರುವ ದಿನ ಚಿಂತೆ ಸಲ್ಲದು, ''ದುಃಸ್ವಪ್ನಮಾದೊಡಂ ದಿವ್ಯ ದಿಟಂ! ಇಂತಪ್ಪ ಶುಭದಿನಕೆ ಅದೆಂತಪ್ಪ ನಾಂದಿಯೊ!'' ಎಂದು ಮರುಕಳಿಸಿದ ಉತ್ಸಾಹದಿಂದ, ಭಕ್ತಿಭಾವದ ಆವೇಶದಿಂದ ತನ್ನನ್ನು ಮರೆಯುತ್ತಾನೆ. ಮುಪ್ಪಿನ ತಾಯಿಯ ಅಕ್ಕರೆಯ ಕೂಗು ಕೇಳಿದಾಗಲೆ ಅವನಿಗೆ ಎಚ್ಚರ. ಆ ಏಕಮಾತ್ರ ಪುತ್ರನೆ ಅವಳ ಕಣ್ಣಲೆ, ಬಾಳ್ನಲೆ, ಅವನೇ ಅವಳ ಉಸಿರು. ಬೆಳಗಿನಿಂದ ಮಗನಿಗೆ ಊಟವಿಲ್ಲವೆಂಬ ಸಂಕಟದಿಂದ ತಾನೇ ಹಣ್ಣು ಜೇನುಗಳನ್ನು ಹೊತ್ತು ತಂದಿದ್ದಾಳೆ. ಆದರೆ ಬೇಂಟೆದೇವರನ್ನು ಬಿಟ್ಟು ಬೇರೆ ದೇವರನ್ನು ಕಾಣದ ಕೇಳದ ತಾಯಿಯ ಅಕ್ಕರೆಯ ಸವಿಮಾತುಗಳಲ್ಲಿ ಮಗ ತಲ್ಲೀನನಾಗುತ್ತಾನೆ. ತಾಯಿಗೆ ತಿಳಿಯುವಂತೆ ತನ್ನ ಬಿಲ್ವಿದ್ಯೆಗೆ ಕಾರಣನಾದ ಗುರುವಿನ ವಿಚಾರವನ್ನು ವಿವರಿಸುತ್ತಾನೆ. ಇವರ ಹಾಸ್ಯಮಯ ಸಂಭಾಷಣೆಯ ನಡುವೆ ಏಕಲವ್ಯನ ಮುದ್ದಿನ ಜಿಂಕೆ ಹಣ್‌ಜೇನ್‌ಗಳನ್ನು ಕಬಳಿಸುತ್ತದೆ. ತಾಯಿ ಛೀಗುಟ್ಟಿದ ಆ 'ಕಳ್ಳಮರಿ'ಯನ್ನು ಏಕಲವ್ಯ ಮುದ್ದಿಸುತ್ತಾನೆ. ಅಷ್ಟರಲ್ಲಿ ಆಚಾರ್ಯಾಗಮನವನ್ನು ಪ್ರಕಟಗೊಳಿಸು

ಕಾವಲ್ ಕಟ್ಟಳೆಯ ಘೋಷಣೆಯನ್ನು ಕೇಳಿ ಪಾರ್ವರುಣಸನ್ನು ಅಣಗೊಳಿಸುವಂತೆ ತಾಯಿಗೆ ಹೇಳಿಕಳುಹಿಸಿ, ಗುರುಸ್ತೋತ್ರದಲ್ಲಿ ತಲ್ಲೀನನಾಗಿ ದ್ರೋಣಪ್ರತೀಕಕ್ಕೆ ದೀರ್ಘದಂಡ ಪ್ರಣಾಮಮಾಡುತ್ತಾನೆ.

ಕರ್ಮಫಲರೂಪಿಯಾದ ವಿಧಿಯ ಕಠೋರ ನಿಯತಿಯ ವಜ್ರ ಪಂಜರದಲ್ಲಿ ಸಿಕ್ಕಿ ''ಕೌರವ ಪಾಂಡವರ ದಾಯಾದಿ ಮಚ್ಚರದ ಬೇಗೆಯೊಳ್ ಬೆಂದು'' ಸೋತಿರುವ ದ್ರೋಣನು ತನ್ನ ವಚನರಕ್ಷಣಾರ್ಥನಾಗಿ ಶಿಷ್ಯನೆಡೆಗೆ ಬರುತ್ತಾನೆ. ಅವನ ಹೃದಯ ಉಭಯಸಂಕಟಗಳ ಇಕ್ಕುಳದಲ್ಲಿ ಸಿಕ್ಕಿ ನರಳುತ್ತಿದೆ. ಒಂದು ಕಡೆ 'ಬಿಂಕಗುಳಿ' ಅರ್ಜುನನಿಗೆ ಕೊಟ್ಟಿರುವ ವಚನ, ಮತ್ತೊಂದು ಕಡೆ ಆ ವಾಗ್ದಾನದ ಫಲವಾಗಿ ಮುಗ್ಧನೂ ನಿಷ್ಕಲ್ಮಷನೂ ಆದ ಶಿಷ್ಯನಿಗೆ ಒದಗಲಿರುವ ಕೇಡು; ವಚನಭಂಗ ಇಲ್ಲವೆ ಪಾಪಕರವಾದ ಹೇಯಕಾರ್ಯ – ಈ ನಡುವೆ ಮನಸ್ಸು ಇಬ್ಬಗಿದಂತಾಗುತ್ತದೆ. ಇಷ್ಟೆಲ್ಲ ಕೇಡಿಗೆ ಮೂಲಕಾರಣ ತನ್ನ ಅಹಂಕಾರವೆಂಬುದನ್ನು ಅರಿತು ತನ್ನನ್ನು ತಾನೆ ನಿಂದಿಸಿಕೊಳ್ಳುತ್ತಾನೆ.

''ನನ್ನಹಂಕಾರದಾ* ಛಲಮೆ ಮರಿಯಿಕ್ಕಿದುದು
ಪಾರ್ಥನ ಅಹಂಕಾರದೀ ಕ್ರೂರ ಈರ್ಷ್ಯೆಯಂ.''

ಒಬ್ಬನ ಅಹಂಕಾರವೆ ಮತ್ತೊಬ್ಬನ ಅಹಂಕಾರಕ್ಕೆ ಕಾರಣವಾಗಿ ಕರ್ಮ ಪರಂಪರೆ ಜನ್ಮ ಜನ್ಮಾಂತರಗಳ ಬೆನ್ನು ಹತ್ತುತ್ತದೆ. ಅವನಿಗೆ ಮುಂದಾಗುವುದೆಲ್ಲ ಹೇಗೆ ಅರಿವಾಗಬೇಕು? ಅವನು ಎಲ್ಲರಂತೆ ವಿಧಿಯ ಕೈಯ ಕೂಸು. ಸಾಧನೆಯ ಫಲವಾಗಿ ಅವನು ಗುರುಪಟ್ಟಕ್ಕೆ ಯೋಗ್ಯನಾಗಿದ್ದರೂ ಅವನಿಗೆ ಪೂರ್ಣವಿದ್ಯಾಶಕ್ತಿಯ ಕೃಪೆ ಒದಗಿಲ್ಲ. ಬಾಳು ಸಾಗಿದಂತೆಲ್ಲಾ ಅದು ಅವನಿಗೆ ಅರ್ಥವಾಗುತ್ತದೆ:

''ಬಿಂಕಕ್ಕೆ ಡೊಳ್ಳೀವುದದು ವಿದ್ಯೆಯೆ? ಅವಿದ್ಯೆ!
ತವಿಪುದಾವುದೊ ಅಹಂಕಾರಮಂ ಅದು ವಿದ್ಯೆ:
ಮಿಕ್ಕುದೆಲ್ಲಂ ಅವಿದ್ಯೆ!
ವಿದ್ಯೆಯಂಬಾ ಪೆಸರ ಮರೆಯೊಳಾನ್
ಅವಿದ್ಯೆಯಂ ಪೋಷಿಸುವ ಗುರುವಾದೆನಲ್ತೆ! '[1]

ತಾನು ದಾರಿತಪ್ಪಿ ನಡೆಯುತ್ತಿರುವುದು ಅವನಿಗೆ ಅರಿವಾಗುತ್ತದೆ. ಕಾಡಿನಲ್ಲಿ ಹೋಗುತ್ತಿರುವಾಗ ಏಕಲವ್ಯನ ಪರಮ ಮಿತ್ರನೂ ತನ್ನ ಏಕಮಾತ್ರ ಪುತ್ರನೂ ಆದ

---

*ದ್ರೋಣನಿಗೆ ದ್ರುಪದನಿಂದ ಆದ ಅವಮಾನವನ್ನೂ, ಅದಕ್ಕೆ ಪ್ರತೀಕಾರವಾಗಿ ಅವನು ಅರ್ಜುನನಿಂದ ದ್ರುಪದನಿಗೆ ಉಂಟುಮಾಡಿದ ಅವಮಾನವನ್ನೂ ಇಲ್ಲಿ ನೆನೆಯಬಹುದು.

1 ಬಹುಶಃ ದ್ರೋಣ ಹೇಳಿಕೊಂಡ ಈ ಮಾತು ತಮ್ಮ ಈಗಿನ ವಿದ್ಯಾಭ್ಯಾಸ ಕ್ರಮವನ್ನು ಪೋಷಿಸುತ್ತಿರುವ ಅಧ್ಯಾಪಕರೂ ಹೇಳಿಕೊಳ್ಳಬಹುದಲ್ಲವೆ?

ಅಶ್ವತ್ಥಾಮನನ್ನು ಕುರಿತು ಹೇಳುವ

> ''ಬಟ್ಟೆಯಿರದಡೆ ಬಟ್ಟೆಯರಸುತಿರ್ಪಯ್, ವತ್ಸ!
> ಪುಟ್ಟುಗುಣಮದು ನಿನಗೆ....''

ಎನ್ನುವ ಈ ಮಾತು ಅದೆಷ್ಟು ಧ್ವನಿಪೂರ್ಣವಾಗಿದೆ? ಅವನ ಬಾಳಿನ ಕರುಣಾಜನಕವಾದ ಕತೆಯನ್ನು ಅರಿತವರಿಗೆ ಈ ಮಾತು ಚೆನ್ನಾಗಿ ಅರ್ಥವಾಗುತ್ತದೆ. ತನ್ನ ಅಹಂಕಾರವೆ ಕಾರಣವಾಗಿ ಅರ್ಜುನನಿಗೆ ಹಂಗಿಗನಾದುದನ್ನೂ, ಅ ಅರ್ಜುನನನ್ನು ಪೀಡಿಸುತ್ತಿರುವ 'ಕೀರ್ತಿಶನಿ' 'ಪೆಸರ ಬಿಂಕ'ಗಳನ್ನು ನೆನೆದಾಗ ಅವನ ಹೃದಯ ಸಂಕಟದಿಂದ ಕುದಿಯುತ್ತದೆ. ಅಪರಾಧ ತನ್ನದಾದರೂ ಅದು ತನ್ನ ಕೈಮೀರಿದೆ:

> ''ಕೂಳ್‌ಮಿಣಿಯ ಪಿಡಿದಿರ್ಪುದಾ ಬಿದಿಯ ಕಯ್:
> ನೂಂಕುತಿಹುದನಿಬರಂ ತನ್ನ ಲೀಲಾರ್ಥಂ.
> ಅಂತಲ್ಲದಿರೆ, ನಮ್ಮನೆತ್ತಣಿಂದಲೊ ಕರೆದು
> ಒಯ್ದು ತಂದೀ ನೃಪಾಲರೂಳಿಗಕೆ ತಳ್ಳುತಿರ್ದುದೆ
> ಈಶ್ವರೇಚ್ಛಾರೂಪದೆಮ್ಮ ಕರ್ಮಪಾಶಂ?''

ರಂಗಕ್ಕೆ ದುಮುಕಿ ಆಗಿದೆ. ಸೋಲೊ ಗೆಲವೊ ಸೆಣಸಬೇಕಾಗಿದೆ. ಅರ್ಜುನನಿಗೆ ತಾನು ಕೊಟ್ಟ ವಚನಕ್ಕೆ ಭಂಗ ಬರದಂತೆ, ಏಕಲವ್ಯನಿಗೆ 'ಆವುದುಂ ಪೆರ್ ಕೇಡು' ಒದಗದಂತೆ 'ಆ ದೈವಮಂ ನೆಮ್ಮಿ ಕೆಲಸಮಾಳ್ಪೆನ್' ಎಂದುಕೊಳ್ಳುತ್ತಾನೆ.

ಅರ್ಜುನನ ಮತ್ಸರಾಗ್ನಿಯನ್ನು ನಂದಿಸುವುದಕ್ಕಾಗಿ ಏಕಲವ್ಯನ ಹೆಬ್ಬೆರಳನ್ನು ಆಹುತಿಯಾಗಿ ತೆಗೆದುಕೊಂಡ ಚಿತ್ರ ಕೊನೆಯ 'ಯಜ್ಞ' ದೃಶ್ಯದಲ್ಲಿ ಮೂಡಿದೆ. ಏಕಲವ್ಯ ದ್ರೋಣನನ್ನು ಗುರುವೆಂದೊಲಿದು, ಲೋಕ ಗುರುವೆಂದು ಶ್ರದ್ಧಾಭಕ್ತಿಗಳಿಂದ ಪೂಜಿಸಿದುದಕ್ಕೆ ಕೊಡುವ ಕಾಣಿಕೆ ಇದು! ಗುರುಕಾಣಿಕೆಯನ್ನು ಸಲ್ಲಿಸುವುದರಲ್ಲಿ ಅವನು ತನ್ನ ಸಾಧನೆಗೆ ಸಾರ್ಥಕತೆಯನ್ನು ಕಾಣುತ್ತಾನೆ.

ಏಕಲವ್ಯನ ಹೆಬ್ಬೆರಳನ್ನು ಆಹುತಿ ತೆಗೆದುಕೊಳ್ಳದೆಯೆ ಅವನ ಮಹಿಮಾಶಕ್ತಿಯನ್ನು ಕ್ಷಯಿಸುವುದು ಸಾಧ್ಯವೆ ಎಂದು ನಿರ್ಣಯಿಸಿ, ಪರೀಕ್ಷೆ ಮಾಡುವ ನೆವದಿಂದ ಗಗನಪಕ್ಷಿಯೊಂದನ್ನು ಗುರಿಯಿಟ್ಟು ಕೆಡುವುವಂತೆ ದ್ರೋಣ ಶಿಷ್ಯನಿಗೆ ಆಜ್ಞೆಮಾಡುತ್ತಾನೆ. ಮುಗಿಲಾಚೆ ಇದ್ದ ಪಕ್ಷಿಯ ಕೊರಳುಲಿ ಸಂಯಮಿಯೂ ಸರ್ವಭೂತಹಿತರತನೂ ಆದ ಏಕಲವ್ಯನಿಗೆ ಕೇಳಿಸುತ್ತದೆ. ಆದರೆ ಪಾಪದ ಲೇಪವಿಲ್ಲದ ಪಕ್ಷಿಯನ್ನು ಕೊಂದು ತನ್ನ ವಿದ್ಯೆಗೆ ಪಾಪವನ್ನು ಲೇಪಿಸಿಕೊಳ್ಳುವುದು ಅವನಿಗೆ ಇಷ್ಟವಿಲ್ಲ.

"ಅಪರಾಧಮಿಲ್ಲದಾ ಸಾಧುವಂ ಕೊಲಲ್ಕಲ್ತು,
ಆಚಾರ್ಯ, ಆ ವಿದ್ಯೆಯಂ ನೀನಿತ್ತುದೆನಗೆ.
ಮುನಿಗುಂ ಮಂತ್ರಾಧಿದೇವತೆ; ಮೇಣ್,
ದಿವ್ಯ ವಿದ್ಯಾಬಲದಿ ಪಾಪಕಾರ್ಯವನೆಸಗೆ
ಧರ್ಮಂ ಋತಚ್ಯುತನೆನಗೆ ತಾನುಗ್ರಮಕ್ಕುಂ; ಮೇಣ್,
ವಿದ್ಯಾಶಕ್ತಿ ತಾನೊಡನೆ ತಿರೋಹಿತಮಕ್ಕುಂ; ಮೇಣ್.
ಆತ್ಮಹಾನಿಯಿಂ ಸರ್ವನಾಶಮಕ್ಕುಂ.-"

ಮಂತ್ರಘೋಷೋಪಮವಾದ ಶಿಷ್ಯನ ಈ ಮಾತುಗಳಿಂದ ಗುರು ಮರು ಹುಟ್ಟು ಪಡೆದಂತಾಗುತ್ತಾನೆ. ಕೂಡಲೆ ಸಗದ್ಗದನಾಗಿ ಶಿಷ್ಯನನ್ನು ಆಲಂಗಿಸಿಕೊಂಡು

"ಪುಣ್ಯವಂತನ್ ನೀನ್, ಏಕಲವ್ಯ!
ಬರ್ದುಕಿದಯ್,
ನೀನ್ ಬದುಕಿ ನನ್ನನುಂ ಬರ್ದುಕಿಸಿದಯ್!–
ನಿನಗಲ್ತಿದು ಪರೀಕ್ಷೆ, ನನಗುಂ ಕಣಾ!"

ಎಂದು ಹೇಳಿ ನಿಡುಸುಯ್ಯುತ್ತಾನೆ. ಅವನ ನಿಟ್ಟುಸಿರು ಶಿಷ್ಯನ ಹೃದಯವನ್ನು ಕಲಕುತ್ತದೆ. ಗುರು ಘೋರಸಂಕಟಕ್ಕೆ ಈಡಾಗಿರುವುದು ಅವನಿಗೆ ಅರಿವಾಗುತ್ತದೆ. ತಾನೇ ಮುಂದೆ ಬಂದು

"ಅದಕೆ ಪರಿಹಾರಿಮೆನ್ನಧೀನಮಿರ್ಪೊಡೆ
ಸಮರ್ಪಿಸುವೆನೆನ್ನ ಸರ್ವಸ್ವವಂ ನಿನ್ನಡಿಗೆ
ಗುರುದೇವ. . ."

ಎಂದು ನಿಶ್ಚಲಮನಸ್ಸಿನಿಂದ ಉಸುರುತ್ತಾನೆ.

". . . ಇತ್ತ ಗುರುವಿಂಗೀವುದೇನ್
ತ್ಯಾಗಮೆ? ಪರಮಸಂಪದಮದುವೆ ಪುರುಷಾರ್ಥ
ಸಾಧನಂ! ನಿನ್ನಿಂದೆ ಕಲ್ತೆನಧ್ಯಾತ್ಮಮಂ.
ಪಡೆವುದೆಲ್ಲಂ ಕೊಡುವುದಕ್ಕಲ್ತೆ, ಆರ್ಯ? ಮೇಣ್,
ಪೂರ್ಣಮಂ ಕೊಡದೆ ಪಡೆದಪೆವೆಂತು ಪೂರ್ಣಮಂ?"

ವೇದೋಪನಿಷತ್ತಿನ ಸಾರಸರ್ವಸ್ವವಾದ ಈ ಅಧ್ಯಾತ್ಮತತ್ತ್ವ, ಸೃಷ್ಟಿಯ, ಜೊತೆಗೆ ಮಾನವನ ಬಾಳಿನ ಈ ಹಿರಿಯ ತತ್ತ್ವ, ಈ ಸರಳಮಂತ್ರದಲ್ಲಿ ಮೈಗೂಡಿದೆ. ಹಿಂದಿನ ರಾತ್ರಿ ತನಗಾದ ಕನಸಿನ ಅನುಭವವನ್ನು ನೆನೆದುಕೊಳ್ಳುತ್ತಾನೆ. ಕನಸಿನಲ್ಲಿ ಅವನ ಭವಿಷ್ಯದ ಸೂಚನೆಯ ಅರಿವಾಗಿದೆ.* ಹಿರಿಯ ಚೇತನಗಳು ಕಾಣುವ ಕನಸೂ ನನಸೇ! ಗುರು 'ಜಿಲ್ ಬಿಜ್ಜೆಗುಸಿರಪ್ಪ ಆ ಪೆರ್ ಬೆರಳ್' ಅನ್ನು ಕೊಡೆಂದಾಗ ಶಿಷ್ಯ

"... ಸರ್ವಮಂ ನಿನಗಾಂ ಸಮರ್ಪಿಸಲ್
ಮನದಂದೆನೀ ಬೆರಳ್ ಅದೇನ್ ಪಿರಿದಲ್ತು,
ಪೆರ್‌ಬೆರಳ್ ತಾನೊದೊಡಂ!-"

ಎಂದು ಸಂತೃಪ್ತನಾಗಿ ನುಡಿಯುತ್ತಾನೆ. ಗುರು ಅತಿದುಃಖದಿಂದ ದೈನ್ಯದಿಂದ ಕೇಳಿದ ಬಲಗೈ ಹೆಬ್ಬೆರಳನ್ನು ಶಿಷ್ಯ ಕೋಡದೆ ಕೊಂಕದೆ ಕುಸಿಯದೆ ಸುಮ್ಮಾನದಿಂದ

ಕೊಳ್ ದಕ್ಷಿಣೆಯನ್ ಇದನ್! ಗೆಲ್ಗೆ ಧರ್ಮಂ!
ಗೆಲ್ಗೆ ದೈವೇಚ್ಛೆ! ನಿಮ್ಮ ವಚನಂ ನಿಲ್ಗೆ!"

ಎಂದು ದ್ರೋಣಪ್ರತೀಕದ ಮುಂದಣ ಹಾಸುಬಂಡೆಯ ಮೇಲೆ ಇಟ್ಟು ಎಡಗೈಯ ಬಾಣದಿಂದ ಕತ್ತರಿಸಿ, ಆ ಬೆರಳ ರೂಪದಲ್ಲಿ ತನ್ನ ಸರ್ವಸ್ವವನ್ನು ನರರೂಪ ನಿಮಿತ್ತನಾದ ಲೋಕಗುರುವಿಗೆ ಸಮರ್ಪಿಸುತ್ತಾನೆ; ತನ್ನ ಬಾಳನ್ನು ಸಾರ್ಥಕಗೊಳಿಸುತ್ತಾನೆ; ಆತ್ಮ ತೃಪ್ತಿಯನ್ನು ಸವಿದು ಸುಖಿಸುತ್ತಾನೆ.

ರಕ್ತ ಸೋರುವ ಗಾಯಕ್ಕೆ ಮದ್ದಿಕ್ಕಲೆಂದು ಏಕಲವ್ಯ ಮರೆಯಾದ ಮೇಲೆ ದ್ರೋಣ ಮಡುಗಟ್ಟಿ ನಿಂತಿದ್ದ ರಕ್ತವನ್ನು ಬಾಗಿ ನೋಡುತ್ತಾನೆ. ಆ ರಕ್ತದಲ್ಲಿ ವಿಕೃತವಾದ ತನ್ನ ಮುಖ ಕಾಣಿಸುತ್ತದೆ. ಕೂಡಲೆ "ಖಡ್ಗ ಮುಷ್ಟಿಯ ಭೀಮಹಸ್ತವೊಂದೊಯ್ಯನೆರಗಿ ಕತ್ತರಿಸಿತಾ ತನ್ನ ಪಡಿನೆಳಲ ಕೊರಳಂ! ಕೆಡೆದುರುಳ್ದುದು ಮಂಡೆ." ಆಗತಾನೆ ಬಂದ ಏಕಲವ್ಯನೊಡನೆ,

"... ನಿನ್ನೀ ಬೆರಳ್‌ಗೆ
ಕೊಳ್ವುದೊಂದೇ ತೋರ್ಪುದಾ ಬಿದಿ
ನನ್ನ ಕೊರಳಂ।
. . . .
ಅಂತೆ ಕರ್ಮದ ಪಾಂಗು*: ಮರಿಗೆ ಮರಿ; ಮರಿಗೆ ಮರಿ;
ಬೆರಳ್ ಗೆ ಕೊರಳ್!

ಬಲಿಯಾಗುವುದೆಂಬ ಭವಿಷ್ಯದ್ಘಟನೆ ಆ ಪ್ರತಿಬಿಂಬದಲ್ಲಿ ಸೂಚಿತವಾಯಿತೆಂದು ಆಶಂಕಿಸಿ ಹೇಳುತ್ತಾನೆ. ದ್ರೋಣ ಶಿಷ್ಯನನ್ನು ಹರಸಿ ಆತನಿಂದ ಬೀಳ್ಕೊಂಡು ಆ

---

*ಆ ಸುಂದರ ಸ್ವಪ್ನಪ್ರತಿಮೆಯಲ್ಲಿ ಏಕಲವ್ಯ ಮುಂದೆ ಕೃಷ್ಣನಿಂದ ತನಗೊದಗುವ, ಕೃಷ್ಣನಿಗೆ ಸರ್ವಸ್ವವನ್ನು ಸಮರ್ಪಿಸಿಕೊಳ್ಳುವ ಗತಿಯನ್ನೂ ಸ್ಥಿತಿಯನ್ನೂ ಮುಂಗಂಡಂತಿದೆ.

"ನಿಂದನೊರ್ವನ್ ನೀಲದೇಹಿ. ಕುಣಿದುದು ನವಿಲ್
ತಲೆಯ ಮೇಲೆ. ಹೆಡೆಯೆತ್ತಿದುರಗಗಳ್ ತೋಳ್ಗಳೊಳ್
ತೂಗಿದುವು ಭುಜದೇಶದಿಂ ಪೊಣ್ಮಿ."

ಕನಸಿನಲ್ಲಿ ಕಂಡವನು ಶ್ರೀಕೃಷ್ಣನೆಂಬುದು ಈ ವರ್ಣನೆಯಿಂದ ಸೂಚಿತವಾಗುತ್ತದೆ.

ಕಡೆ ತೆರಳಿದ ಮೇಲೆ ಈ ಕಡೆ ತಾಯಿ ಬಂದು ತನ್ನ ಮಗನಿಗೆ ಒದಗಿದ ದುರವಸ್ಥೆಯನ್ನು ಕಂಡು ಕರುಳಿರಿಯುವ ಸಂಕಟದಿಂದ ಕುಪಿತಳಾಗಿ

ಆರ್ಗ್ಗೊ ಬಲಿ ನನ್ನ ಕಂದನ ಬೆರಳ್
ಬಲಿಯಕ್ಕೆ ಆ ಪಾಪಿಯ ಕೊರಳ್!''

ಎಂದು ಶಪಿಸುತ್ತಾಳೆ.।

ಆ ಮಾತೃಶಾಪದ ಭೀಷಣ ಪರಿಣಾಮಕ್ಕೆ ಬೆದರಿದ ಏಕಲವ್ಯ,

''ಆಗಬಾರದುದಾಯ್ತು?
ಅಯ್ಯೊ, ನನ್ನ ತ್ಯಾಗಂ ವ್ಯರ್ಥಮಾಯ್ತೆ?''
''ದುಡುಕಿದವ್, ಅಬ್ಬೆ.
ನನ್ನನುಂ ಕೊಳ್ಳದೆಯೆ ಬಿಡದು ನಿನ್ನೀ ಶಾಪಂ!''

ಎಂದು ಸುಯ್ದು ಕ್ಷೇಮಕಾತರನಾಗಿ ಪ್ರಾರ್ಥಿಸುತ್ತಾನೆ:

''ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ!...''

---

*ಮುಂದೆ ಧೃಷ್ಟದ್ಯುಮ್ನ ದ್ರೋಣನನ್ನು ಕೊರಳು ಕತ್ತರಿಸಿ ಕೊಲ್ಲುವುದೂ, ಧೃಷ್ಟದ್ಯುಮ್ನನನ್ನು ಅಶ್ವತ್ಥಾಮ ಕತ್ತುಹಿಸುಕಿ ಕೊಲ್ಲುವುದೂ, ಕೊನೆಗೆ ಅಶ್ವತ್ಥಾಮನು ಕೃಷ್ಣನಿಂದ ಶಾಪ ಪಡೆದು ತನ್ನ ಶಿರೋರತ್ನವನ್ನು ಕಳೆದುಕೊಂಡು ಮೂರು ಸಾವಿರ ವರ್ಷಗಳು ಕಾಡುಮೇಡುಗಳಲ್ಲಿ ಯಾರೊಡನೆಯೂ ಮಾತಿಲ್ಲದೆ ಯಾರ ಕಣ್ಣಿಗೂ ಬೀಳಲಾರದೆ ಅಲೆದುದೂ ಈ ಕರ್ಮಪರಂಪರೆ.

। ಮಾತೃಶಾಪದ ಸಂದರ್ಭದಲ್ಲಿ 'ತಪೋನಂದನ'ದ ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ' ಎಂದು ಪ್ರಬಂಧದಲ್ಲಿ ಬರುವ ದುರ್ವಾಸ ಶಾಪ ವೃತ್ತಾಂತದ ವಿಷಯವನ್ನು ನೋಡಿ.



ಕುವೆಂಪು ಇಪ್ಪತ್ತನೆಯ ಶತಮಾನದ ಮಹಾಕವಿ, ಯುಗದ ಕವಿ, ಜಗದ ಕವಿಯೂ ಅಹುದು. ನವೋದಯದ ಸಂದರ್ಭದಲ್ಲಿ ಕವಿಗಳಾಗಿ ಮೂಡಿಬಂದ ಕುವೆಂಪು ಸೃಷ್ಟಿಸಿದ ಸಾಹಿತ್ಯ ವಿಪುಲವೂ ವೈವಿಧ್ಯಪೂರ್ಣವೂ ಆಗಿದೆ. ಕಾವ್ಯ, ಮಹಾಕಾವ್ಯ, ಕತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಮೀಮಾಂಸೆ - ಹೀಗೆ ಹಲವು ಪ್ರಕಾರಗಳಲ್ಲಿ ಅವರ ಸಾಧನೆಯಿದೆ, ಸಿದ್ಧಿಯೂ ಇದೆ. ಭಾರತೀಯ ಮಹಾಕವಿಗಳಲ್ಲಿ ಎದ್ದು ಕಾಣುವ ವ್ಯಕ್ತಿತ್ವವುಳ್ಳ ಅವರು, ವಿಶ್ವದ ಮಹಾಕವಿಗಳ ಸಾಲಿನಲ್ಲಿಯೂ ಮಿಂಚುವಂತಹರು.

ಅನಿಕೇತನ ಪ್ರಜ್ಞೆಯ, ವಿಶ್ವಮಾನವ ಸಂದೇಶ ಬೀರಿದ, ಅನುಭಾವಿಯೂ ಆದ ಕುವೆಂಪು ಅವರ ಜನ್ಮಶತಮಾನೋತ್ಸವ ಕವಿ ಸ್ಮರಣೆಯ ಒಂದು ಮಹತ್ವದ ಪರ್ವವೆಂದು ಹೇಳಬಹುದು. ಈ ಸಂದರ್ಭದಲ್ಲಿ ಕುವೆಂಪು ಅವರ ಪ್ರಗತಿಪರ ಚಿಂತನೆಯ ಮೂರು ನಾಟಕಗಳ ಸಂಕಲನ ಪ್ರಕಟಿಸುವುದು ಅಕಾಡೆಮಿಗೆ ಸಂತಸದ ವಿಷಯ.